ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 9 ಶನಿವಾರ 2026

47

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 23 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4





ನಾಳೆ 'ದೊಡ್ಡೋರ ಧ್ವನಿ' ಸಂಗೀತ ಸಂಜೆ

ಮೈಸೂರು, ಮೇ 8(ಜಿಎ)–ಮೈಸೂರಿನ ಡಾ. ರಾಜ್‌ಕುಮಾರ್ ಮ್ಯೂಸಿಕಲ್ ಗ್ರೂಪ್ ವತಿಯಿಂದ ಮೇ 10 ರಂದು ಸಂಜೆ 5ಗಂಟೆಗೆ ನಗರದ ಟೌನ್‌ಹಾಲ್‌ನಲ್ಲಿ ಡಾ. ರಾಜ್‌ಕುಮಾರ್ ಸವಿ ನೆನಪಿನಲ್ಲಿ 'ದೊಡ್ಡೋರ ಧ್ವನಿ' ಸಂಗೀತ ಸಂಜೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಗ್ರೂಪ್ ಸಂಸ್ಥಾಪಕ ಅಧ್ಯಕ್ಷ ಮೈಸೂರು ಜಯರಾಂ ಈ ವಿಷಯ ತಿಳಿಸಿ, ಕಾರ್ಯಕ್ರಮದಲ್ಲಿ ತಾವು ಸೇರಿದಂತೆ ಗಂಗೋತ್ರಿ ಕುಮಾರ್, ನಾಗೇಂದ್ರ, ನಂಜುಂಡಯ್ಯ, ಅಶ್ವಿನಿ, ತೇಜಸ್ವಿನಿ ಮೊದಲಾದವರು ಹಾಡಲಿದ್ದಾರೆ ಎಂದರು.

ಮೈಸೂರಿನ ವಿಜಯನಗರದಲ್ಲಿರುವ ಯೋಗನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕರಾದ ಭಾಷ್ಯಂ ಸ್ವಾಮೀಜಿ ಕಾರ್ಯಕ್ರಮ ಸಾನ್ನಿಧ್ಯ ವಹಿಸಲಿದ್ದು, ಮಾಜಿ ಶಾಸಕ ಬಾಲರಾಜ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ನಾಗರಾಜ್ ವಿ.ಭೈರಿ ಸೇರಿದಂತೆ ಇನ್ನಿತರರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಎಡೆಯೂರು ಸಮೀವುಲ್ಲಾ, ಲತಾ ಬಾಲಕೃಷ್ಣ ಉಪಸ್ಥಿತರಿದ್ದರು.

ಶ್ರೀ ಸಿದ್ದಪ್ಪಾಜಿ ಕೊಂಡೋತ್ಸವ



ತಿ.ನರಸೀಪುರ ತಾಲೂಕು ಸೋಸಲೆ ಹೋಬಳಿ ಕಗ್ಗಲೀಪುರದ ಶ್ರೀ ಕಗ್ಗಲೀಪುರ ಮಠದಲ್ಲಿ ಅದ್ಧೂರಿ ಶ್ರೀ ಸಿದ್ದಪ್ಪಾಜಿ ಕೊಂಡೋತ್ಸವ ನೆರವೇರಿತು. ಬೊಪ್ಪೇ ಗೌಡನಪುರದ ಶ್ರೀ ಧರೆಗೆದೊಡ್ಡವರ ಮಹಾಸಂಸ್ಥಾನ ಮಠದ ಬಿ.ಎಸ್. ಜ್ಞಾನಾನಂದ ಚನ್ನರಾಜೇ ಅರಸ್ ಅವರ ಅಧ್ಯಕ್ಷತೆಯಲ್ಲಿ ಗ್ರಾಮದ ಯಜಮಾನರು ಹಾಗೂ ಗ್ರಾಮಸ್ಥರ ಸಮ್ಮುಖದಲ್ಲಿ ಕಗ್ಗಲೀಪುರದ ಶ್ರೀ ಮಂಟೇಸ್ವಾಮಿ ಮತ್ತು ಶ್ರೀ ಸಿದ್ದಪ್ಪಾಜಿ ಯವರ ಭಾರೀ ಕಂಡಾಯ ಕೊಂಡೋತ್ಸವ ನಡೆಯಿತು. ಇದೇ ವೇಳೆ ದಕ್ಷಯಜ್ಞ ಅಥವಾ ಬೃಗುಮುನಿಯ ಗರ್ವಭಂಗ ಪೌರಾಣಿಕ ನಾಟಕ ಪ್ರದರ್ಶಿಸಲಾಯಿತು.

ಏತ ನೀರಾವರಿ ಯೋಜನೆ ಅನುಷ್ಠಾನಕ್ಕೆ ಡಿಸಿಎಂ ಅಸ್ತು



ಬೆಂಗಳೂರು, ಮೇ 8(ಕೆಎಂಶಿ)–ಕಾವೇರಿ ಜಲಾನಯನ ವ್ಯಾಪ್ತಿಯ ಮೈಸೂರು ಮತ್ತು ಕೊಡಗು ಜಿಲ್ಲೆಯ ಪ್ರಮುಖ ಏತ ನೀರಾವರಿ ಯೋಜನೆ ಗಳ ಅನುಷ್ಠಾನಕ್ಕೆ ಜಲ ಸಂಪನ್ಮೂಲ ಇಲಾಖೆ ಹೊಣೆ ಹೊತ್ತ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಮ್ಮತಿ ನೀಡಿದ್ದಾರೆ. ಜಿಲ್ಲೆಗಳನ್ನು ಪ್ರತಿನಿಧಿಸುವ ಸಂಸದ ಯದುವೀರ್ ಒಡೆಯರ್, ಉಪ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ, ಹುಣಸೂರು, ಕೆಆರ್. ನಗರ ಹಾಗೂ ಕೊಡಗು ಜಿಲ್ಲೆಯಲ್ಲಿ ನನೆಗುದಿಗೆ ಬಿದ್ದಿರುವ ಏತ ನೀರಾವರಿ ಯೋಜನೆಗಳಿಗೆ ಅನುಮತಿ ದೊರಕಿಸುವಂತೆ ಮನವಿ ಮಾಡಿದರು.

ಶಿವಕುಮಾರ್ ಭೇಟಿ ನಂತರ ಸುದ್ದಿಗಾರ ರೊಂದಿಗೆ ಮಾತನಾಡಿದ ಯದುವೀರ್, ಏತ ನೀರಾವರಿ ಯೋಜನೆಗಳು ನನೆಗುದಿಗೆ ಬಿದ್ದಿವೆ. ಇದರಲ್ಲಿ ಕೆಲವು ಯೋಜನೆಗಳ ಅನುಷ್ಠಾನಕ್ಕೆ ಕೇಂದ್ರ ಅರಣ್ಯ ಮತ್ತು ಪರಿಸರ ಇಲಾಖೆ ಅನುಮತಿ ಅಗತ್ಯವಿದ್ದು, ಅದನ್ನು ಪಡೆಯಲು ಪ್ರಯತ್ನಿಸುವುದಾಗಿ ಭರವಸೆ ನೀಡಿದರು.

ಪ್ರತಿ ಕ್ವಿಂಟಾಲ್‌ಗೆ 772 ರೂ. ಬೆಂಬಲ ಬೆಲೆಯಡಿ ಸೂರ್ಯಕಾಂತಿ ಖರೀದಿ

ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ಆದೇಶ



ಬೆಂಗಳೂರು, ಮೇ 8(ಕೆಎಂಶಿ)– ಬೆಂಬಲ ಬೆಲೆ ಯೋಜನೆಯಡಿ 2025–26ನೇ ಸಾಲಿನ ಹಿಂಗಾರು ಹಂಗಾಮಿನಲ್ಲಿ ಸೂರ್ಯಕಾಂತಿಯನ್ನು ಪ್ರತಿ ಕ್ವಿಂಟಾಲ್‌ಗೆ 772 ರೂ. ದರದಲ್ಲಿ ಖರೀದಿಗೆ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ಆದೇಶಿಸಿದ್ದಾರೆ.

ಕೇಂದ್ರ ಸರ್ಕಾರದ ಬೆಂಬಲ ಬೆಲೆ ಮಾರ್ಗಸೂಚಿ ಅನ್ವಯ ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ವಿಜಯಪುರ, ಚಾಮರಾಜನಗರ, ಚಿತ್ರದುರ್ಗ, ಗದಗ, ಕಲಬುರಗಿ, ವಿಜಯನಗರ, ರಾಯಚೂರು ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಅವಶ್ಯಕತೆಗೆ ಅನುಗುಣವಾಗಿ ಖರೀದಿ ಕೇಂದ್ರ ತೆರೆಯಲು ನಿರ್ದೇಶನ ನೀಡಿದ್ದಾರೆ.

ಕೇಂದ್ರ ಸರ್ಕಾರದ ಖರೀದಿ ಸಂಸ್ಥೆಗಳಾಗಿ ನಾಫೆಡ್ ಮತ್ತು ಎನ್‌ಸಿಸಿಎಫ್, ಕರ್ನಾಟಕ ಸಹಕಾರಿ ಎಣ್ಣೆಬೀಜ ಬೆಳೆಗಾರರ ಮಹಾಮಂಡಳ ರಾಜ್ಯ ಸರ್ಕಾರದ ಖರೀದಿ ಸಂಸ್ಥೆಯಾಗಿ ನೇಮಕ ಮಾಡಲಾಗಿದೆ.

ನೋಂದಣಿ ಅವಧಿ 50 ದಿನ ಹಾಗೂ ಖರೀದಿ ಅವಧಿ 60 ದಿನಗಳಿಗೆ ನಿಗದಿಪಡಿಸಲಾಗಿದ್ದು, ನೋಂದಣಿ ಜೊತೆಗೆ ಖರೀದಿ ಪ್ರಕ್ರಿಯೆ ಆರಂಭಿಸಬೇಕು ಎಂದು ಜಿಲ್ಲಾ ಕಾರ್ಯಪಡೆ ಸಮಿತಿ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ.

ನಿಧನ


ಶೈಲಜಾ ರಾಮಕೃಷ್ಣ



ಮೈಸೂರು, ಮೇ 8 – ಸಮಾಜ ಸೇವಕಿ ಶೈಲಜಾ ರಾಮಕೃಷ್ಣ ಚಾರಿಟಬಲ್ ಟ್ರಸ್ಟ್(ರಿ) ಆರ್‌ಜಿಎಚ್‌ಎಸ್ ಫೌಂಡೇಶನ್‌ನ ಸಂಸ್ಥಾಪಕ ಅಧ್ಯಕ್ಷರಾದ ಶ್ರೀಮತಿ ಶೈಲಜಾ ರಾಮಕೃಷ್ಣ ಅವರು ಗೋಕುಲಂನ ತಮ್ಮ ನಿವಾಸದಲ್ಲಿ ಶುಕ್ರವಾರ ಮುಂಜಾನೆ ನಿಧನರಾದರು.

ಮೃತರು ಪತಿ ಹಾಗೂ ಮಕ್ಕಳ ಅಗಲಿಕೆ ಬಳಿಕ ತಮ್ಮದೇ ಆದ ಸ್ನೇಹ ಬಳಗದಿಂದ ಟ್ರಸ್ಟ್ ಪ್ರಾರಂಭಿಸಿ, ಜಿಲ್ಲೆಯ ನಾಗರಹೊಳೆ ಅರಣ್ಯ ವ್ಯಾಪ್ತಿಯ ಹಲವು ಬುಡಕಟ್ಟು ಹಾಡಿಗಳ ಸರ್ಕಾರಿ ಶಾಲೆಗಳ ಅಭಿವೃದ್ಧಿ ಮತ್ತು ಮಕ್ಕಳ ಶೈಕ್ಷಣಿಕ ಬೆಳವಣಿಗೆಗಾಗಿ ಸೇವೆ ಸಲ್ಲಿಸುತ್ತಾ, ಹಾಡಿ ಮಕ್ಕಳ ಪ್ರೀತಿಯ ಅಮ್ಮ ಎಂದೇ ಪ್ರೀತಿ ಪಾತ್ರರಾಗಿದ್ದರು. ಇವರ ಅಂತ್ಯಕ್ರಿಯೆ ಗೋಕುಲಂ ರುದ್ರ ಭೂಮಿಯಲ್ಲಿ ಶನಿವಾರ ಬೆಳಗ್ಗೆ ನೆರವೇರಲಿದೆ ಎಂದು ಕುಟುಂಬಸ್ಥರು ಹಾಗೂ ಆರ್‌ಜಿಎಚ್‌ಎಸ್ ಫೌಂಡೇಶನ್‌ನ ಸದಸ್ಯರು ತಿಳಿಸಿದ್ದಾರೆ.

ರಾಮಕೃಷ್ಣೇಗೌಡ



ಮೈಸೂರು, ಮೇ 8– ಇಲವಾಲ ಹೋಬಳಿಯ ಗುಂಗ್ರಾಲ್ ಛತ್ರದ ನಿವಾಸಿ, ಮಾಜಿ ಗ್ರಾಪಂ ಸದಸ್ಯ ರಾಮಕೃಷ್ಣೇಗೌಡ (74) ವಯೋಸಹಜ ಕಾಯಿಲೆಯಿಂದ ಶುಕ್ರವಾರ ನಿಧನರಾದರು. ಮೃತರು ಪತ್ನಿ ಲಕ್ಷ್ಮಮ್ಮ, ಇಬ್ಬರು ಪುತ್ರರು, ಓರ್ವ ಪುತ್ರಿ, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ ಮೃತರ ಸ್ವಗ್ರಾಮದ ತೋಟದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಫ್ಲೈಓವರ್, ರಸ್ತೆ ಅಭಿವೃದ್ಧಿಗಾಗಿ 561 ಮರ ತೆರವು ಪ್ರಸ್ತಾಪ

ಸಾರ್ವಜನಿಕರಿಂದ 2300 ಆಕ್ಷೇಪಣೆ ಸಲ್ಲಿಕೆ

ಪರಿಶೀಲನೆ ಬಳಿಕ ಸರ್ಕಾರದ ನಿರ್ದೇಶನ ಪಾಲನೆಗೆ ಅರಣ್ಯ ಇಲಾಖೆ ನಿರ್ಧಾರ



ಫ್ಲೈಓವರ್ ಕಾಮಗಾರಿಗೆ ತೆರವುಗೊಳಿಸಲು ಮರಗಳನ್ನು ಗುರುತಿಸಿರುವುದು.



ಫ್ಲೈಓವರ್ ಕಾಮಗಾರಿ ನಡೆಯುತ್ತಿರುವುದು.

ಮೈಸೂರು,ಮೇ.8(ಎಂಟಿವೈ)– ಮೈಸೂರಿನ ಮಣಿಪಾಲ್ ಆಸ್ಪತ್ರೆ ಜಂಕ್ಷನ್ ಬಳಿ ನಿರ್ಮಿಸಲು ಉದ್ದೇಶಿಸಿರುವ ಫ್ಲೈಓವರ್ ಹಾಗೂ ನಂಜನಗೂಡು, ತಿ.ನರಸೀಪುರ ರಸ್ತೆ ಅಗಲೀಕರಣಕ್ಕಾಗಿ 561 ಮರಗಳ ತೆರವಿಗಾಗಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಸಲ್ಲಿಸಿರುವ ಪ್ರಸ್ತಾಪಕ್ಕೆ ಸಾರ್ವಜನಿಕ ವಲಯ ಹಾಗೂ ಪರಿಸರವಾದಿಗಳಿಂದ ತೀವ್ರ ಆಕ್ಷೇಪ ವ್ಯಕ್ತವಾಗಿದೆ. ಈಗಾಗಲೇ 2300 ಮಂದಿ ಆಕ್ಷೇಪ ಸಲ್ಲಿಸಿದ್ದಾರೆ

ಫ್ಲೈಓವರ್ ಮತ್ತು ವಿವಿಧೆಡೆ ರಸ್ತೆ ಅಗಲೀಕರಣಕ್ಕೆ ಮರ ತೆರವಿಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಅರಣ್ಯ ಇಲಾಖೆಗೆ ಮನವಿ ಸಲ್ಲಿಸಿತ್ತು. ಇದಕ್ಕೆ ಅರಣ್ಯ ಇಲಾಖೆ ಸಾರ್ವಜನಿಕರಿಂದ ಆಕ್ಷೇಪಣೆಯಿದ್ದರೆ ಸಲ್ಲಿಸುವಂತೆ ಮೇ 7ರ ಸಂಜೆ 5.30ರೊಳಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಿತ್ತು. ಹಾಗಾಗಿ ಮೈಸೂರಿನ ನಾಗರಿಕರು, ಪರಿಸರವಾದಿಗಳು ಅಭಿವೃದ್ಧಿ ಹೆಸರಲ್ಲಿ ಮರಗಳ ಹನನಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ.

2300 ಆಕ್ಷೇಪ ಸಲ್ಲಿಕೆ: ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ತೆರವಿಗಾಗಿ ಗುರುತಿಸಲ್ಪಟ್ಟ ಮರಗಳಿಗೆ ಸಂಬಂಧಿಸಿದಂತೆ ಅಶೋಕಪುರಂ ಅರಣ್ಯ ಭವನದಲ್ಲಿ ವೃಕ್ಷಾಧಿಕಾರಿ ಹಾಗೂ ವಲಯ ಅರಣ್ಯಾಧಿಕಾರಿಯಲ್ಲಿ ಖುದ್ದಾಗಿ ಅಥವಾ ಅಂಚೆ ಮೂಲಕ ಇಲ್ಲವೇ ಇ–ಮೇಲ್(rfomysore123@gmail.com) ಮೂಲಕ ಆಕ್ಷೇಪಣೆ ಸಲ್ಲಿಕೆಗೆ ಕಾಲಾವಕಾಶ ನೀಡಲಾಗಿತ್ತು. ಕಳೆದ ಒಂದು ವಾರದಿಂದ ಮರಗಳ ತೆರವಿಗೆ ಸಂಬಂಧಿಸಿದಂತೆ 2300ಕ್ಕೂ ಹೆಚ್ಚು ಮಂದಿ ಆಕ್ಷೇಪ ಸಲ್ಲಿಸಿದ್ದಾರೆ.

ಪರಿಶೀಲನೆ: ಸಲ್ಲಿಕೆಯಾಗಿರುವ ಆಕ್ಷೇಪಣೆಗಳ ಪರಿಶೀಲಿಸಲಾಗುತ್ತಿದ್ದು, ಪರಿಸರ ಪ್ರೇಮಿಗಳು ಕೆಲವು ಅಂಶಗಳನ್ನು ಉಲ್ಲೇಖಿಸಿ, ಮರಗಳನ್ನು ತೆರವು ಮಾಡದಂತೆ ಆಗ್ರಹಿಸಿದ್ದಾರೆ. ಅಲ್ಲದೆ, ಮರಗಳ ತೆರವು, ಹನನದಿಂದ ಮುಂದೆ ಆಗಬಹುದಾದ ತೊಂದರೆ ಮತ್ತು ಹಸಿರು ವಲಯಕ್ಕೆ ದೊಡ್ಡ ಪ್ರಮಾಣದ ಹಾನಿಯಾಗುವ ಆತಂಕವನ್ನು ವ್ಯಕ್ತಪಡಿಸಿದ್ದಾರೆ.

ಫ್ಲೈಓವರ್‌ಗೆ 350 ಮರಗಳ ಹನನ: ಮೈಸೂರು–ಬೆಂಗಳೂರು ರಸ್ತೆಯ ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಲ್ಲಿ ನಿರ್ಮಿಸುತ್ತಿರುವ ಫ್ಲೈಓವರ್ ವಿಸ್ತರಣೆಗೆ 350 ಮರಗಳ ತೆರವು ಮಾಡಬೇಕಾದ ಅನಿವಾರ್ಯತೆ ಎದುರಾಗಿದೆ. ಈಗಾಗಲೇ ಫ್ಲೈಓವರ್ ಕಾಮಗಾರಿಗೆ ಬೃಹತ್ ಫಿಲ್ಲರ್ ನಿರ್ಮಾಣ ಕಾರ್ಯ ಬಿರುಸಾಗಿ ಸಾಗಿದೆ. ರಿಂಗ್‌ರಸ್ತೆಗೆ ಅಡ್ಡಲಾಗಿ ನಿರ್ಮಿಸುತ್ತಿರುವ ಫ್ಲೈಓವರ್‌ಗೆ ಬನ್ನಿಮಂಟಪದ ರಸ್ತೆ, ಸಿದ್ದಿಕ್ಕಿನಗರದ ರಸ್ತೆ ಹಾಗೂ ರಿಂಗ್ ರಸ್ತೆಯ ಎರಡೂ ಬದಿಯಲ್ಲಿರುವ ಮರಗಳನ್ನು ತೆರವು ಮಾಡಲು ಗುರುತಿಸಲಾಗಿದೆ.

> ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ 1976(ತಿದ್ದುಪಡಿ ಕಾಯ್ದೆ 2014) 8(3) ಅಡಿ ಮರ ತೆರವಿಗಾಗಿ ಸಾರ್ವಜನಿಕರಿಂದ ಆಕ್ಷೇಪ ಸಲ್ಲಿಸಲು ಅವಕಾಶ ನೀಡಲಾಗಿತ್ತು. 2300 ಮಂದಿ ಆಕ್ಷೇಪಣೆ ಸಲ್ಲಿಸಿದ್ದಾರೆ. ಎಲ್ಲಾ ಆಕ್ಷೇಪಣೆಯನ್ನು ಪರಿಶೀಲಿಸಿ, ಸರ್ಕಾರದ ಗಮನಕ್ಕೆ ತರಲಾಗುವುದು. ಸರ್ಕಾರದ ನಿರ್ದೇಶನದಂತೆ ಕ್ರಮ ಕೈಗೊಳ್ಳಲಾಗುವುದು.
>
> –ಕೆ.ಪರಮೇಶ್. ಡಿಸಿಎಫ್, ಮೈಸೂರು ಪ್ರಾದೇಶಿಕ ವಲಯ

ಫ್ಲೈಓವರ್‌ಗೆ ಸಿದ್ದಿಕ್ಕಿನಗರದಿಂದ ಫೌಂಟೇನ್ ವೃತ್ತದ ಕಡೆಗೆ ಬರುವ ರಸ್ತೆಯಲ್ಲಿ 19 ಮರ, ಬನ್ನಿಮಂಟಪದ ರಸ್ತೆಯ ಪಾರ್ಕ್ ಆವರಣದಲ್ಲಿರುವ 256 ಗಿಡ, ಮರ, ಮಣಿಪಾಲ್ ಜಂಕ್ಷನ್‌ನಿಂದ ಹುಣಸೂರು ಕಡೆಗೆ ಹೋಗುವ ರಿಂಗ್ ರಸ್ತೆಯ ವಿಭಜಕದಲ್ಲಿರುವ 52 ಮರ, ಮಣಿಪಾಲ್ ಜಂಕ್ಷನ್‌ನಿಂದ ಮಹದೇವಪುರ(ಬನ್ನೂರು) ಕಡೆಗೆ ಹೋಗುವ ರಿಂಗ್ ರಸ್ತೆಯ ವಿಭಜಕದಲ್ಲಿರುವ 20 ಮರಗಳನ್ನು ತೆರವು ಮಾಡಲು ಗುರುತಿಸಲಾಗಿದೆ. ಈ 350 ಮರಗಳಲ್ಲಿ 3 ಶ್ರೀಗಂಧದ ಮರವೂ ಸೇರಿದಂತೆ 347 ಜಾತಿಯ ಮರ ಸೇರಿದೆ.

> **ಪಿಟಿಷನ್‌ನಲ್ಲಿ 5129 ಜನರ ಸಹಿ**
>
> **ಮೈಸೂರು:** ಮರ ಕಟಾವು ಮಾಡುವುದನ್ನು ವಿರೋಧಿಸಿ ಪರಿಸರ ಬಳಗದಿಂದ ನಡೆದ ಆನ್‌ಲೈನ್ ಪಿಟಿಷನ್‌ನಲ್ಲಿ 5129ಕ್ಕೆ ಹೆಚ್ಚು ಜನರು ಸಹಿ ಮಾಡಿ ವಿರೋಧ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಮೇ 10ರಂದು ಬೆಳಗ್ಗೆ 7 ಗಂಟೆಗೆ ಬನ್ನಿಮಂಟಪದ ಮಿಲನ್ ಫಂಕ್ಷನ್ ಹಾಲ್ ಎದುರು ಸಭೆ ಕರೆಯಲಾಗಿದೆ. ನಿವೃತ್ತ ಮೇಜರ್ ಜನರಲ್ ಒಂಬತ್ಕೆರೆ, ರೈತ ಸಂಘದ ಮುಖಂಡ ಬಡಗಲಪುರ ನಾಗೇಂದ್ರ, ಪ್ರೊ.ಕಾಳಚನ್ನೇಗೌಡ, ಪರಶುರಾಮೇಗೌಡ ಮುಂತಾದವರು ಭಾಗವಹಿಸಲಿದ್ದಾರೆ.

ನಂಜನಗೂಡು ರಸ್ತೆಯಲ್ಲಿ 15 ಮರ: ಮೈಸೂರು–ನಂಜನಗೂಡು(ರಾಷ್ಟ್ರೀಯ ಹೆದ್ದಾರಿ 766) ಮುಖ್ಯರಸ್ತೆಯಲ್ಲಿ ಕಡಕೊಳದ ಟಿವಿಎಸ್ ಕಾರ್ಖಾನೆ ವೃತ್ತ ಹಾಗೂ ಮಂಡಕಳ್ಳಿ ಬಳಿ ರಸ್ತೆ ಅಗಲೀಕರಣಕ್ಕೆ 15 ಮರ ತೆರವಿಗೆ ಗುರುತಿಸಲಾಗಿದೆ. ಕಡಕೊಳದ ಟಿವಿಎಸ್ ಸರ್ಕಲ್ ಬಳಿ 11 ಮರ ಹಾಗೂ ಮಂಡಕಳ್ಳಿ ಬಳಿ 4 ಮರ ಸೇರಿವೆ.

ತಿ.ನರಸೀಪುರ ರಸ್ತೆಯಲ್ಲಿ 196 ಮರ: ತಿ.ನರಸೀಪುರ(ರಾಷ್ಟ್ರೀಯ ಹೆದ್ದಾರಿ 766) ರಸ್ತೆಯ ಅಗಲೀಕರಣ ಕಾಮಗಾರಿಗಾಗಿ ವಿವಿಧೆಡೆ 196 ಮರಗಳನ್ನು ತೆರವು ಮಾಡುವಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮನವಿ ಮಾಡಿದೆ. ಅದರಲ್ಲಿ ವರುಣ ವೃತ್ತದಲ್ಲಿ 26 ಮರ, ದುದ್ದಗೆರೆಯಿಂದ ಪುಟ್ಟೇಗೌಡನಹುಂಡಿವರೆಗೆ ರಸ್ತೆಯ ಎರಡೂ ಬದಿಯಲ್ಲಿರುವ 110 ಮರ ಹಾಗೂ ಎಂ.ಸಿ. ಹುಂಡಿ ಬಳಿ ರಸ್ತೆ ಬದಿಯಲ್ಲಿರುವ 60 ಮರಗಳನ್ನು ತೆರವು ಮಾಡುವಂತೆ ಅರಣ್ಯ ಇಲಾಖೆಗೆ ಮನವಿ ಸಲ್ಲಿಸಲಾಗಿದೆ.

ಮ್ಯಾಗಜಿನ್ ಬಿಡುಗಡೆ



ಬೆಂಗಳೂರಿನಲ್ಲಿ ಪೊಲಿಟಿಕಲ್ 360 ಮ್ಯಾಗಜಿನ್ ಅನ್ನು ಶಾಸಕ ಜಿ.ಟಿ. ದೇವೇಗೌಡರು ಬಿಡುಗಡೆ ಮಾಡಿದರು. ಈ ವೇಳೆ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ವಿಧಾನ ಪರಿಷತ್ ಸದಸ್ಯ ಶಿವಕುಮಾರ್, ವಿಧಾನ ಪರಿಷತ್ ಮಾಜಿ ಸಭಾಪತಿ ವಿ.ಆರ್.ಸುದರ್ಶನ್, ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಚಿತ್ರನಟರಾದ ದುನಿಯಾ ವಿಜಯ್, ಡಾಲಿ ಧನಂಜಯ, ಪೊಲಿಟಿಕಲ್ 360 ಮ್ಯಾಗಜಿನ್ ಸಂಪಾದಕ ಪುಟ್ಟಪ್ಪ ಉಪಸ್ಥಿತರಿದ್ದರು.

ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಶಿಬಿರ ಉದ್ಘಾಟನೆ

ಮೈಸೂರು, ಮೇ 8(ಬಿಎಲ್‌ಯು)– ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರ ಆಯೋಜಿಸಿರುವ ಕೆ–ಸೆಟ್ ಮತ್ತು ಯುಜಿಸಿ– ನೆಟ್ ಸ್ಪರ್ಧಾತ್ಮಕ ಪರೀಕ್ಷೆಗಳ 45 ದಿನಗಳ ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭ ಮೇ 12ರಂದು ನಡೆಯಲಿದೆ.

ಅಂದು ಬೆಳಗ್ಗೆ 11 ಗಂಟೆಗೆ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಬಿ.ಕೆ.ರವಿ ಅವರು ಶಿಬಿರ ಉದ್ಘಾಟಿಸಲಿದ್ದಾರೆ. ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯ ಜಂಟಿ ನಿರ್ದೇಶಕಿ ಸತ್ಯಶ್ರೀ ಆರ್. ಅವರು ಶಿಬಿರಾರ್ಥಿಗಳಿಗೆ ಶುಭ ಹಾರೈಸಲಿದ್ದಾರೆ.

ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ ಸೇರಿ ಹಲವು ಗಣ್ಯರು ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಕೇಂದ್ರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣ ಗೌಡ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

09.5.2026 ಶನಿವಾರ, ಮಳೆ ನಕ್ಷತ್ರ: ಭರಣಿ 27.04.2026ರಿಂದ 10.05.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಶ್ರವಣ, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ

- **ವ್ಯವಸ್ಥಾಪಕರು** : ಬುದ್ಧ ಪ್ರಜ್ಞೆ ಮಕ್ಕಳ ಮೈತ್ರಿ ಕಾರ್ಯಕ್ರಮ, ಸ್ಥಳ: ವಿಷ್ಣುವರ್ಧನ ಸ್ಮಾರಕ, ಉದ್ಬೂರು ಗೇಟ್, ಬೆಳಗ್ಗೆ 7.30 ರಿಂದ.
- **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11 ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಬೊಜ್ಜು, ಸಕ್ಕರೆ ಕಾಯಿಲೆ, ಬಿಪಿ, ಕೀಲು ನೋವು, ಅಲರ್ಜಿ, ಚರ್ಮದ ರೋಗಗಳು, ಒತ್ತಡ, ಆತಂಕ, ಬಾಲನೆರೆ, ವಯೋಸಹಜ ಗುಣಗಳು, ದೃಷ್ಟಿಮಾಂದ್ಯ, ತಲೆ ನೋವು, ಕೆಮ್ಮು, ಅಸ್ತಮಾ, ಪಿಸಿಓಡಿ, ಪುರುಷ ಹಾಗೂ ಸ್ತ್ರೀ ಬಂಜೆತನ ತಪಾಸಣಾ ಶಿಬಿರ, ಬೆಳಗ್ಗೆ 9.30 ರಿಂದ ಆರೋಗ್ಯ ತಪಾಸಣೆ ಮತ್ತು ಜಾಗೃತಿ ಶಿಬಿರ, ಚರ್ಮ ಆರೈಕೆ ಮತ್ತು ಡಿಟಾಕ್ಸಿಫಿಕೇಶನ್ ಯೋಗ ಶಿಬಿರ, ಮಧುಮೇಹದ ಗಾಯಗಳ ಚಿಕಿತ್ಸಾ ಶಿಬಿರ, ಅರ್ಥರೈಟಿಸ್ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ವಿದ್ಯಾವರ್ಧಕ ಕಾನೂನು ಕಾಲೇಜು** : ಎನ್. ನಂಜೇಗೌಡ ಸ್ಮರಣಾರ್ಥ ದತ್ತಿ ಉಪನ್ಯಾಸ ಕಾರ್ಯಕ್ರಮ, ಉದ್ಘಾಟನೆ : ಬೆಂಗಳೂರಿನ ರಾಷ್ಟ್ರೀಯ ಕಾನೂನು ಶಾಲೆಯ ಐಪಿಆರ್ ಕುರಿತ ಪೀಠದ ಮಾಜಿ ನಿರ್ದೇಶಕ ಪ್ರೊ. ಟಿ. ರಾಮಕೃಷ್ಣ, ಮುಖ್ಯ ಅತಿಥಿಗಳು : ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್. ರಂಗಪ್ಪ, ಕಾಲೇಜು ಅಧ್ಯಕ್ಷ ಗುಂಡಪ್ಪಗೌಡ, ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣನವರ್, ಎಸ್. ಶಿವಲಿಂಗಯ್ಯ, ಪ್ರಿನ್ಸಿಪಾಲ್ ಡಾ. ದೀಪು, ಎಂ.ಸಿ. ರಾಜೇಶ್, ಎನ್. ನಂಜೇಗೌಡರ ಪುತ್ರರಾದ ಪ್ರೊ. ಎನ್. ಸತೀಶ್‌ಗೌಡ, ಡಾ. ಎನ್. ಆನಂದಗೌಡ, ಸ್ಥಳ: ವಿದ್ಯಾವರ್ಧಕ ಕಾನೂನು ಕಾಲೇಜು, ಶೇಷಾದ್ರಿ ಅಯ್ಯರ್ ರಸ್ತೆ, ಬೆಳಗ್ಗೆ 10ಕ್ಕೆ.
- **ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ, ಮೈಸೂರು ಜಿಲ್ಲಾ ಘಟಕ, ಛಾಯಾದೇವಿ ಶಿಕ್ಷಣ ಮಹಾವಿದ್ಯಾಲಯ** : ಕುವೆಂಪು ಶೈಕ್ಷಣಿಕ ಚಿಂತನೆಗಳು ಕುರಿತು ವಿಚಾರಗೋಷ್ಠಿ, ಉದ್ಘಾಟನೆ : ಹಿರಿಯ ಪತ್ರಕರ್ತ ಕೆ. ನರಸಿಂಹಮೂರ್ತಿ, ಅಧ್ಯಕ್ಷತೆ : ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ಸಂಸ್ಥಾಪಕ ರಾಜ್ಯಾಧ್ಯಕ್ಷ ಕೊಟ್ರೇಶ್ ಎಸ್. ಉಪ್ಪಾರ್, ಮುಖ್ಯ ಅತಿಥಿಗಳು : ರಾಜ್ಯ ಉಪಾಧ್ಯಕ್ಷ ಟಿ. ಸತೀಶ್ ಜವರೇಗೌಡ, ಪ್ರಾಂಶುಪಾಲ ಸಿ. ಅಂತೋಣಿ ಪಾಲ್‌ರಾಜ್, ಡಾ. ಉಮೇಶ್ ಬೇವಿನಹಳ್ಳಿ, ಸ್ಥಳ: ಛಾಯಾದೇವಿ ರಂಗ ಮಂಟಪ, ಬೆಳಗ್ಗೆ 10.30ಕ್ಕೆ.
- **ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್** : 38ನೇ ಜಿಎನ್‌ಎಂ ನರ್ಸಿಂಗ್ ವಿದ್ಯಾರ್ಥಿಗಳ ಪ್ರತಿಜ್ಞಾ ವಿಧಿ ಸ್ವೀಕಾರ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಅಡಿಷನಲ್ ಡೆಪ್ಯುಟಿ ಕಮೀಷನರ್ ಶ್ರೀಮತಿ ಆರ್. ಐಶ್ವರ್ಯ, ಗೌರವ ಅತಿಥಿಗಳು : ಅಸೋಸಿಯೇಟ್ ಪ್ರೊಫೆಸರ್ ಡಾ. ಪ್ರತಿಭಾ ಸ್ವಾಮಿ, ಅಧ್ಯಕ್ಷತೆ : ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಮಾರಂಭ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಬೆಳಗ್ಗೆ 11ಕ್ಕೆ.
- **ನಟನ ಮೈಸೂರು** : 'ರಜಾ–ಮಜಾ' 2026ರ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಕನ್ನಡ ಚಿತ್ರರಂಗದ ಹಿರಿಯ ನಟ ಅವಿನಾಶ್ ಯಳಂದೂರು, ಸಾಮಾಜಿಕ ಹೋರಾಟಗಾರ್ತಿ, ವ್ಯಕ್ತಿತ್ವ ವಿಕಸನ ತರಬೇತಿಧಾರಿಣಿ ಮತ್ತು ಹಾಡುಗಾರ್ತಿ ಡಾ.ಅಕ್ಕೈ ಪದ್ಮಶಾಲಿ, ಕಿರುತೆರೆ– ಹಿರಿತೆರೆಯ ನಟ ಮತ್ತು ನಿರ್ದೇಶಕರಾದ ನವೀನ್ ಕೃಷ್ಣ, ಶಿಬಿರದ ಸಂಯೋಜಕ ಮೇಘ ಸಮೀರ, ಶಿಬಿರದ ಸಂಚಾಲಕರಾದ ದಿಶಾ ರಮೇಶ್, ನಟನದ ಅಧ್ಯಕ್ಷ ಕೆ.ಎಸ್. ಆನಂದ ಕುಮಾರ್, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಮಧ್ಯಾಹ್ನ 3.30ಕ್ಕೆ.
- **ಕಲಾಸುರುಚಿ** : ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 931, ಕಥೆ ಹೇಳುವವರು: ಶ್ರೀಮತಿ ಉಷಾ ರಾಘವನ್, ಕನ್ನಡ ಶಿಕ್ಷಕರು, ಮೈಸೂರು ವೆಸ್ಟ್ ಲಯನ್ಸ್ ಸೇವಾ ನಿಕೇತನ್ ಸ್ಕೂಲ್, ಗೋಕುಲಂ, ಮೈಸೂರು, ಸ್ಥಳ: ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.
- **ಕಲಾ ಸಂವಹನ ಟ್ರಸ್ಟ್** : ಸಿತಾರ್ ಸಂಭ್ರಮ, ಮುಸ್ಸಂಜೆಯ ಬಾನ ರಂಗಿಗೆ ಸ್ವರ ರಾಗ ಲಯ ಸಿಂಚನ, ಉದ್ಘಾಟನೆ : ಮುಖ್ಯಮಂತ್ರಿ ಸಿದ್ದರಾಮಯ್ಯ, ಅಧ್ಯಕ್ಷತೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಸಾನ್ನಿಧ್ಯ : ಚಿನ್ಮಯ ಮಿಷನ್‌ನ ಪೂಜ್ಯ ಸ್ವಾಮಿ ಕೃತಾತ್ಮಾನಂದ, ಮುಖ್ಯ ಅತಿಥಿಗಳು : ಗಾಯಕಿ ಶ್ರೀಮತಿ ಎಚ್.ಆರ್. ಲೀಲಾವತಿ, ಉದ್ಯಮಿ ಡಾ. ಎಂ. ಜಗನ್ನಾಥ್ ಶೆಣೈ, ಉಪಸ್ಥಿತರು : ಹಿಂದೂಸ್ಥಾನ ಗಾಯಕ ಪಂಡಿತ್ ವೆಂಕಟೇಶ್‌ಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಡಾ. ಮಲ್ಲಿಕಾರ್ಜುನಸ್ವಾಮಿ, ಟ್ರಸ್ಟ್ ಅಧ್ಯಕ್ಷೆ ಶ್ರೀಮತಿ ರಾಜೇಶ್ವರಿ ವಸ್ತ್ರದ, ಅಂತಾರಾಷ್ಟ್ರೀಯ ಸಿತಾರ್ ವಾದಕ ಉಸ್ತಾದ್ ಮೊಹಸಿನ್ ಖಾನ್, ಗಾಯನ – ಪಂಡಿತ್ ವೆಂಕಟೇಶ್ ಕುಮಾರ್, ಸಿತಾರ್ ಸಮೂಹ ವಾದನ – ಸಿತಾರ್ ಸಿಂಚನ, ಮೈಸೂರು, ಸಿತಾರ್ ವಾದನ– ಉಸ್ತಾದ್ ಮೊಹಸಿನ್ ಖಾನ್, ಉಸ್ತಾದ್ ನಿಸಾರ್ ಅಹಮದ್–ತಬಲಾ, ಪಂಡಿತ್ ವೀರಭದ್ರಯ್ಯ ಹಿರೇಮಠ–ಹಾರ್ಮೋನಿಯಂ, ಪಂಡಿತ್ ಚಿನ್ಮಯ ನಾಮಣ್ಣವರ–ವಯೋಲಿನ್, ಪಂಡಿತ್ ಕೇಶವ ಜೋಶಿ–ತಬಲಾ, ರುದ್ರೇಶ್ ಭಜಂತ್ರಿ–ಶೆಹನಾಯಿ, ಚಾರುದತ್ ಮಹಾರಾಜ್–ತಬಲಾ, ಮನುರಾವ್–ಕೀಬೋರ್ಡ್, ಸುಜಯೇಂದ್ರ ರಾವ್–ರಿದಮ್, ಸ್ಥಳ: ಕರ್ನಾಟಕ ಕಲಾಮಂದಿರ, ಸಂಜೆ 5ಕ್ಕೆ.
- **ಬ್ರಹ್ಮವಿದ್ಯಾ ಸಂಸ್ಥೆ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ** : ಮಹಾಮಹೋಪಾಧ್ಯಾಯ, ಪದ್ಮಶ್ರೀ ಪುರಸ್ಕೃತ ಡಾ. ರಾ. ಸತ್ಯನಾರಾಯಣರ ಜನ್ಮ ಶತಮಾನೋತ್ಸವ, ಭಾರತೀಯ ಸಂಗೀತಶಾಸ್ತ್ರ ದಿನಾಚರಣೆ, ಶತಮಾನ ರಾಸ ಅಬ್ದಿಪೂರ್ವದ ಉದ್ಘಟನೆ ಮತ್ತು ಗ್ರಂಥ ಲೋಕಾರ್ಪಣೆ, ಉಪಸ್ಥಿತರು: ವಿದ್ವಾನ್ ರಾಜೇಶ್ವರಶಾಸ್ತ್ರಿ ಜೋಶಿ, ಡಾ.ವಸುಂಧರಾ ದೊರೆಸ್ವಾಮಿ, ವಿದ್ವಾನ್ ಆನೂರು ಅನಂತಕೃಷ್ಣಶರ್ಮ, ಡಾ. ಗ್ವಿಡೋ ಜಾಂಡರೀಗೋ, ಉದ್ಘಾಟನೆ : ಕರ್ನಾಟಕ ಸಂಸ್ಕೃತ ವಿವಿ ಕುಲಪತಿ ಡಾ. ಅಹಲ್ಯಾ ಶರ್ಮ, ವಿಶೇಷ ಅತಿಥಿಗಳು : ಐಜಿಎನ್‌ಸಿಎ ಮಾಜಿ ನಿರ್ದೇಶಕ ಡಾ. ವಿಜಯ್ ಶಂಕರ್ ಶುಕ್ಲಾ, ಮಹಾರಾಜ ಶ್ರೀ ಕೃಷ್ಣದೇವರಾಯ, ಶ್ರೀಮತಿ ಸವಿತಾ ಸುಲುಗೋಡು, ಮಾಜಿ ಎಂಎಲ್‌ಸಿ ಗೋ. ಮಧುಸೂದನ, ಮೈಸೂರು ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ, ಸಭಾಧ್ಯಕ್ಷ : ವೈಣಿಕ ಡಾ. ರಾ. ವಿಶ್ವೇಶ್ವರನ್, ನಾಟ್ಯಗುರು ಡಾ. ಅಲೋಕಾ ಕನುಂಗೋ, ಸಂಗೀತ ವಿದ್ವಾನ್ ಡಾ. ಶ್ರೀಕಾಂತಂ ನಾಗೇಂದ್ರಶಾಸ್ತ್ರಿ, ವೀಣಾ ವಿದ್ವಾನ್ ಮಧುಕರಂ ಪ್ರಶಾಂತ್ ಅಯ್ಯಂಗಾರ್, ಡಿವಿಜಿ ಬಳಗ ಪ್ರತಿಷ್ಠಾನದ ಸಂಚಾಲಕ ಕನಕರಾಜು, ಸ್ಥಳ: ನಾಲ್ವಡಿ ಕೃಷ್ಣರಾಜ ಒಡೆಯರ್ ಭವನ, ಮಾನಸಗಂಗೋತ್ರಿ, ಸಂಜೆ 5.30ಕ್ಕೆ.
- **ಶ್ರೀರಾಮಕೃಷ್ಣ ಆಶ್ರಮ** : ಸ್ವಾಮಿ ಮಹಾಮೇಧಾನಂದ ಅವರಿಂದ ಲಿವಿಂಗ್ ಅಟ್ ದಿ ಸೋರ್ಸ್ ಯೋಗಾ ಟೀಚಿಂಗ್ಸ್ ಆಫ್ ವಿವೇಕಾನಂದ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ಪ್ರಾಯೋಜಿತ ಕಾರ್ಯಕ್ರಮ– ಹರಿತ್ತೆ ಜಗತ್ತು ಸಸ್ಯ ವೈದ್ಯರ ಕಿವಿಮಾತು, ಪ್ರಸ್ತುತಿ : ಡಾ. ವಸಂತ ಕುಮಾರ್ ತಿಮಕಾಪುರ, ಪ್ರಾಯೋಜಕರು ಗ್ರೀನ್ ಲೈಟ್ ಕ್ರಾಪ್ ಟೆಕ್, ಮೈಸೂರು, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ಮತ್ತು ಸಂಜೆ 5.30 – ಚೂಟಿ ಚೂಟಿ ಚುಟುಕ್ ಗುಳುಂ ಗುಟುಕ್– ಶಿಶು ಗೀತೆಗಳ ಕಾರ್ಯಕ್ರಮ, 8.35 ಚಿತ್ರಗೀತೆಗಳು, 10 ಕರ್ನಾಟಕ ಶಾಸ್ತ್ರೀಯ ಸಂಗೀತ, ಮಧುರನಾಥ್ ಸಿ.ಎಂ.–ಕೊಳಲು ವಾದನ, 10.30 ಹಿಂದಿ ಚಿತ್ರಗೀತೆ, 11 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3 ಜನಪದ ಸಂಗೀತ, 3.30 ಮಕ್ಕಳ ಮಂಟಪ, 4.00 ನಾಟಕ ಅತಿಥಿ, ನಿರ್ಮಾಣ– ಡಾ. ಬಿ. ಎನ್. ಶರಬೇಂದ್ರ ಸ್ವಾಮಿ, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ ಆಯ್ದ ಕಾರ್ಯಕ್ರಮ), 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.30 ವಿಜ್ಞಾನದ ಮುನ್ನಡೆ, 6.50 ಕೃಷಿರಂಗ :ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ. ಭಾಗವಹಿಸುತ್ತಾರೆ ಕೆ. ಆರ್. ನಗರ ತಾಲ್ಲೂಕು ಮಾರನಹಳ್ಳಿ ಅಂಚೆ, ವಡ್ಡರಹಳ್ಳಿಯ ಭಾರತಿ ಮತ್ತು ಅವರ ಮಗ ಜಯಂತ್, ಪ್ರಸ್ತುತಿ–ಎನ್. ಕೇಶವ ಮೂರ್ತಿ, 8.00 ಸವಿನೆನಪು, 9.30 ಯುವವಾಣಿ, 10 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ರಾಜ್ ಕುಮಾರ್ ಮಜುಂದಾರ್ – ಸಂತೂರ್ ವಾದನ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 9 ಶನಿವಾರ 2026

ಸಂಪುಟ: 47 | ಸಂಚಿಕೆ: 23 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮಹತ್ವಾಕಾಂಕ್ಷಿ 'ಇಂದಿರಾ ಕಿಟ್' ವಿತರಣೆಗೆ

ಹೈಕಮಾಂಡ್ ಬ್ರೇಕ್



■ ರಾಜ್ಯ ಸರ್ಕಾರ ಅಕ್ಕಿಯೊಂದಿಗೆ ಎಣ್ಣೆ, ಸಕ್ಕರೆ, ಬೇಳೆ, ಉಪ್ಪು ನೀಡಲು ನಿರ್ಧರಿಸಿತ್ತು ■ ಭ್ರಷ್ಟಾಚಾರದ ವಾಸನೆ ದೂರಿನ ಹಿನ್ನೆಲೆಯಲ್ಲಿ ತಡೆ ನೀಡಿರುವ ಶಂಕೆ

ಬೆಂಗಳೂರು, ಮೇ 8(ಕೆಎಂಶಿ)– ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಬಿಪಿಎಲ್ ಪಡಿತರ ಚೀಟಿದಾರರಿಗೆ 5 ಕೆ.ಜಿ. ಅಕ್ಕಿ ಜೊತೆಗೆ ಎಣ್ಣೆ, ಬೇಳೆ ಮತ್ತು ಇತರೆ ಆಹಾರ ಪದಾರ್ಥಗಳನ್ನು ನೀಡುವ ಸರ್ಕಾರದ ಮಹತ್ವಾಕಾಂಕ್ಷಿ ಇಂದಿರಾ ಕಿಟ್ ಯೋಜನೆಗೆ ಕಾಂಗ್ರೆಸ್ ವರಿಷ್ಠರು ತಾತ್ಕಾಲಿಕ ಬ್ರೇಕ್ ಹಾಕಿದ್ದಾರೆ.

ಯೋಜನೆ ಜಾರಿಯಲ್ಲಿ ಭ್ರಷ್ಟಾಚಾರ ಆರೋಪ ಎದುರಾಗಲಿದೆ ಎಂಬ ದೂರಿನ ಹಿನ್ನೆಲೆಯಲ್ಲಿ ಕಾಂಗ್ರೆಸ್ ವರಿಷ್ಠರು ಈ ತೀರ್ಮಾನ ಕೈಗೊಂಡಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಬಿಪಿಎಲ್ ಪಡಿತರ ಚೀಟಿದಾರರ ಕುಟುಂಬಕ್ಕೆ ಮಾಸಿಕ ಪ್ರತಿ ಯೂನಿಟ್‌ಗೆ ತಲಾ 10 ಕೆ.ಜಿ. ಅಕ್ಕಿ ಉಚಿತವಾಗಿ ನೀಡುವ ಬದಲು ಐದು ಕೆ.ಜಿ. ಅಕ್ಕಿ ಹಾಗೂ ಇತರೆ ದಿನೋಪಯೋಗಿ ಆಹಾರ ಪದಾರ್ಥಗಳನ್ನು ನೀಡುವ ತೀರ್ಮಾನ ಕೈಗೊಳ್ಳಲಾಗಿತ್ತು. ಯೋಜನೆ ಅನುಷ್ಠಾನಕ್ಕೆ ವಾರ್ಷಿಕ 6,000 ಕೋಟಿ ರೂ. ತಗಲುತ್ತಿದ್ದರೂ, ವಾರ್ಷಿಕವಾಗಿ ಸರ್ಕಾರಕ್ಕೆ ಸ್ವಲ್ಪಮಟ್ಟಿನ ಉಳಿತಾಯವೇ ಆಗುತ್ತಿತ್ತು.

ಇಂದಿರಾ ಯೋಜನೆಯಡಿ ಬಿಪಿಎಲ್ ಕುಟುಂಬಕ್ಕೆ ಒಂದು ಲೀಟರ್ ಕಡಲೇಕಾಯಿ ಎಣ್ಣೆ ಇಲ್ಲವೇ ಸೂರ್ಯಕಾಂತಿ ಎಣ್ಣೆ, ತಲಾ ಒಂದು ಕೆ.ಜಿ. ಸಕ್ಕರೆ, ಉಪ್ಪು ಹಾಗೂ ತೊಗರಿಬೇಳೆ ನೀಡಲು ಸಿದ್ಧತೆ ನಡೆಸಲಾಗಿತ್ತು. ಕುಟುಂಬದ ಒಂದರಿಂದ ನಾಲ್ಕು ಸದಸ್ಯರಿಗೆ ಒಂದು, ಆರು ಮಂದಿ



ಇದ್ದರೆ 2, ಎಂಟು ಮಂದಿಯಿದ್ದರೆ ಮೂರು ಆಹಾರ (ಇಂದಿರಾ) ಕಿಟ್ ನೀಡಲು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ನಿರ್ಧರಿಸಿತ್ತು. ಅಕ್ಕಿ ಜೊತೆಗೆ ಆಹಾರ ಕಿಟ್‌ಗಳನ್ನು ಫಲಾನುಭವಿಗಳಿಗೆ ನಿಗದಿತ ಕಾಲಕ್ಕೆ ತಲುಪಿಸುವ ಉದ್ದೇಶದಿಂದ ರಾಜ್ಯವನ್ನು ಐದು ವಿಭಾಗಗಳನ್ನಾಗಿ ಮಾಡಿ ಪ್ರತ್ಯೇಕ ಪೂರೈಕೆಗೆ ಸಿದ್ಧತೆ ನಡೆಸಲಾಗಿತ್ತು.

ಇಂದಿರಾ ಕಿಟ್‌ಗಾಗಿ ಇಲಾಖೆ ಟೆಂಡರ್ ಕರೆದು 20 ಗುತ್ತಿಗೆದಾರರನ್ನು ಆಯ್ಕೆ ಮಾಡಿ, ಅದರಲ್ಲಿ ಅಂತಿಮವಾಗಿ ಏಳು ಮಂದಿಯ ಪಟ್ಟಿ ಸಿದ್ಧಪಡಿಸಿತ್ತು.

ಆಹಾರ ಇಲಾಖೆ ಕೈಗೊಳ್ಳುವ ತೀರ್ಮಾನದಿಂದ ಸರ್ಕಾರಕ್ಕೆ ಕಳಂಕ ಬರುತ್ತದೆ. ಮತ್ತು ಹಣ ಕೈಬದಲಾವಣೆ ಆಗುವುದೆಂಬ ಹಿನ್ನೆಲೆಯಲ್ಲಿ ಹಣಕಾಸು ಇಲಾಖೆ ತಕರಾರು ತೆಗೆದು ಗುತ್ತಿಗೆ ನೀಡುವುದನ್ನೇ ವಿರೋಧಿಸಿತ್ತು.

ಇದರ ಬದಲು ಕುಟುಂಬದ ಒಬ್ಬರಿಗೆ ರೂಪೇ ಕಾರ್ಡ್ ವಿತರಿಸಿ, ಕುಟುಂಬದ ಸದಸ್ಯರು ತಮಗೆ ನಿಗದಿ ಪಡಿಸಿದ ಆಹಾರ ಪದಾರ್ಥಗಳನ್ನು ರಾಜ್ಯದ ಯಾವುದೇ ಭಾಗದ ಕಿರಾಣಿ ಅಂಗಡಿಯಲ್ಲಿ ಖರೀದಿಸುವ ವ್ಯವಸ್ಥೆ ತನ್ನಿ ಎಂದು ಸಲಹೆ ನೀಡಿತ್ತು.

ರೂಪೇ ಕಾರ್ಡ್‌ಗಳನ್ನು ನಾವೇ ನೀಡುತ್ತೇವೆ. ಇದರಿಂದ ಸರ್ಕಾರಕ್ಕೆ ಕಳಂಕ ಬರುವುದಿಲ್ಲ ಹಾಗೂ ವಿಳಂಬವೂ ಆಗದು. ತಕ್ಷಣದಿಂದಲೇ ಫಲಾನುಭವಿಗಳಿಗೆ ಸೌಲಭ್ಯ ಲಭ್ಯವಾಗಲಿದೆ ಎಂದಿತ್ತು.


ಆದರೆ, ಆಹಾರ ಇಲಾಖೆ ಇದನ್ನು ಒಪ್ಪದೆ, ಟೆಂಡರ್ ಕರೆದೇ ಇಂದಿರಾ ಕಿಟ್ ವಿತರಣೆ ಆಗಬೇಕು ಎಂದು ಪಟ್ಟು ಹಿಡಿಯಿತು. ಟೆಂಡರ್ ನೀಡುವ ಸಂದರ್ಭದಲ್ಲೂ ಭಾರೀ ಷರತ್ತುಗಳನ್ನು ಹಾಕಿದ್ದರಿಂದ ಕಡಿಮೆ ಸಂಖ್ಯೆಯಲ್ಲಿ ಬಿಡ್‌ದಾರರು ಪಾಲ್ಗೊಳ್ಳುವಂತಾಯಿತು.

ಇದರ ನಡುವೆ ಮಧ್ಯಪ್ರಾಚ್ಯದಲ್ಲಿನ ಯುದ್ಧದಿಂದ ಅಡುಗೆ ಎಣ್ಣೆ ಸೇರಿದಂತೆ ಎಲ್ಲಾ ವಸ್ತುಗಳ ಬೆಲೆ ಏರಿಕೆಯಾಗಿ, ಇಂದಿರಾ ಕಿಟ್‌ಗೆ ನಿಗದಿಯಾದ ಅನುದಾನ ಸಾಲದಾಗುತ್ತದೆ. ಆದ್ದರಿಂದ, ಅನುದಾನ ಹೆಚ್ಚಳ ಮಾಡುವಂತೆ ಕೋರಲಾಯಿತು.

ಈ ಪ್ರಸ್ತಾವನೆಯನ್ನು ಹಣಕಾಸು ಇಲಾಖೆ ಸಾರಾಸಗಟಾಗಿ ತಳ್ಳಿಹಾಕಿದ್ದರಿಂದ ಸಂಬಂಧಪಟ್ಟ ಖಾತೆ ಸಚಿವ ಕೆ.ಎಚ್.ಮುನಿಯಪ್ಪ, ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ವಾಸ್ತವ ಸಂಗತಿ ವಿವರಿಸಿದರು.

ಇಷ್ಟರಲ್ಲಾಗಲೇ ಎಐಸಿಸಿ, ಮುಖ್ಯಮಂತ್ರಿ ಅವರಿಗೆ ಇಂದಿರಾ ಕಿಟ್ ಯೋಜನೆ ಕುರಿತ ದೂರುಗಳ ಮಾಹಿತಿ ತಲುಪಿಸಿದ್ದರಿಂದ ಸಿದ್ದರಾಮಯ್ಯ, 10 ಕೆ.ಜಿ. ಅಕ್ಕಿ ನೀಡುವ ಪದ್ಧತಿಯನ್ನೇ ಮುಂದುವರೆಸಿ ಎಂದು ಸೂಚಿಸಿದ್ದಾರೆ.

ಪ.ಬಂಗಾಳದ ಮೊದಲ ಬಿಜೆಪಿ ಮುಖ್ಯಮಂತ್ರಿಯಾಗಿ ಸುವೇಂದು ಅಧಿಕಾರಿ ಇಂದು ಪ್ರಮಾಣ ವಚನ



ಕೊಲ್ಕತ್ತಾ, ಮೇ 8– ಪಶ್ಚಿಮ ಬಂಗಾಳದ ಮೊದಲ ಬಿಜೆಪಿ ಸರ್ಕಾರ ರಚನೆಯೊಂದಿಗೆ ಪಕ್ಷ ಮೊದಲ ಮುಖ್ಯಮಂತ್ರಿ ಪ್ರಮಾಣ ವಚನ ಸಮಾರಂಭಕ್ಕೆ ಮುಹೂರ್ತ ನಿಗದಿಯಾಗಿದೆ.

ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಐತಿಹಾಸಿಕ ಗೆಲುವು ದಾಖಲಿಸಿದ್ದು, ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಅವರನ್ನು ಮಣಿಸಿದ ಸುವೇಂದು ಅಧಿಕಾರಿ ಅವರನ್ನು ರಾಜ್ಯದ ಮೊದಲ ಬಿಜೆಪಿ ಮುಖ್ಯಮಂತ್ರಿಯಾಗಿ ಘೋಷಿಸಲಾಗಿದೆ. ಅವರು ಶನಿವಾರ (ಮೇ 8) ಬೆಳಗ್ಗೆ 11 ಗಂಟೆಗೆ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಶಾಸಕಾಂಗ ಪಕ್ಷದ ನಾಯಕನಾಗಿ ಆಯ್ಕೆಯಾದ ಬಳಿಕ ಇಂದು ಸಂಜೆ ಸುವೇಂದು ಅಧಿಕಾರಿ, ರಾಜಭವನಕ್ಕೆ ತೆರಳಿ ರಾಜ್ಯಪಾಲ ಆರ್.ಎನ್.ರವಿ ಅವರನ್ನು ಭೇಟಿಯಾಗಿ, ರಾಜ್ಯದಲ್ಲಿ ಮೊದಲ ಬಿಜೆಪಿ ಸರ್ಕಾರದ ರಚನೆಗೆ ಹಕ್ಕು ಮಂಡಿಸಿದರು.

ಸುವೇಂದು ಅವರು ಈ ಹಿಂದೆ ನಂದಿಗ್ರಾಮದಲ್ಲಿ ಮತ್ತು ಈಗ ಭವಾನಿಪುರದಲ್ಲಿ ಮಾಜಿ ಸಿಎಂ ಮಮತಾ ಬ್ಯಾನರ್ಜಿ ಅಮನ್ನು ಸೋಲಿಸಿ, ಬಂಗಾಳದಲ್ಲಿ ಬಿಜೆಪಿಯ ಅತ್ಯಂತ ಪ್ರಭಾವಿ ನಾಯಕನಾಗಿ ಹೊರಹೊಮ್ಮುವ ಮೂಲಕ ಟಿಎಂಸಿ ಸರ್ಕಾರಕ್ಕೆ

■ 6ನೇ ಪುಟಕ್ಕೆ

ನೀವು ಮನೆಗೆ ಬೀಗ ಹಾಕಿಕೊಂಡು ಹೊರಗೆ ಹೋಗುವ ಸಂದರ್ಭ ಬಂದಿದೆಯೇ... ಚಿಂತೆ ಬೇಡ ನಾವಿದ್ದೇವೆ.... !!

ಮೈಸೂರು ನಗರ ಪೊಲೀಸರಿಂದ

ಲಾಕ್ಡ್ ಹೌಸ್ ಬೀಟ್

ಹೊರಡುವ ಮುನ್ನ 82779-47777 ವಾಟ್ಸಾಪ್ ಮಾಡಿ

● ಆ ಕ್ಷಣದಿಂದಲೇ ಮನೆಗೆ ಕಣ್ಗಾವಲು ● ಈ ಎಲ್ಲಾ ವಿಚಾರ ಗುಪ್ತ್...ಗುಪ್ತ್...!

ಮೈಸೂರು, ಮೇ 8(ಜಿಎ)–ರಜೆ, ಪ್ರವಾಸ ಅಥವಾ ವೈಯಕ್ತಿಕ ಕಾರಣಗಳಿಗಾಗಿ ಮನೆಗೆ ಬೀಗ ಹಾಕಿ ಹೊರ ಹೋಗುವ ಸಂದರ್ಭ ಬಂದಾಗ ಅಂತಹ ಮನೆಗಳಿಗೆ ಭದ್ರತೆ ಒದಗಿಸಲು ಮೈಸೂರು ನಗರ ಪೊಲೀಸರು 'ಲಾಕ್ಡ್ ಹೌಸ್ ಬೀಟ್' ಹೊಸ ಯೋಜನೆಯನ್ನು ಆರಂಭಿಸಿದ್ದಾರೆ.

ಈ ಯೋಜನೆಯಿಂದ ಮನೆ ಮಾಲೀಕರು ನೆಮ್ಮದಿ ಮತ್ತು ಧೈರ್ಯದಿಂದ ತಮ್ಮ ಮನೆಗಳಿಗೆ ಬೀಗ ಹಾಕಿ ಹೊರ ಹೋಗಬಹುದಾಗಿದೆ. ಇದಕ್ಕಾಗಿ ನಿವಾಸಿಗಳು ತಮ್ಮ ಮನೆಗೆ ಬೀಗ ಹಾಕಿ ಹೊರಗಡೆಗೆ ತೆರಳುವ ಮೊದಲು ಪೊಲೀಸರಿಗೆ 82779–47777 ಸಂಖ್ಯೆಗೆ ವಾಟ್ಸಾಪ್ ಮೂಲಕ ಹೆಸರು, ಸಂಪೂರ್ಣ ವಿಳಾಸ, ಪಿನ್ ಕೋಡ್, ಮೊಬೈಲ್ ಸಂಖ್ಯೆ, ಹೊರಡುವ ಹಾಗೂ ಮರಳುವ ದಿನಾಂಕಗಳ ವಿವರಗಳನ್ನು ಕಳುಹಿಸಬೇಕು. ಮನೆ ಗುರುತಿಸಲು ಅನುಕೂಲವಾಗುವಂತೆ ಫೋಟೋ ಅಥವಾ ಲೊಕೇಶನ್ ಪಿನ್ ಹಂಚಿಕೊಳ್ಳಬೇಕು. ಪೊಲೀಸರಿಗೆ ಮಾಹಿತಿ ಸಿಕ್ಕ ಬಳಿಕ ಮನೆಗೆ ಬೀಗ ಹಾಕಿರುವ ವಿವರವನ್ನು ಮನೆ ವ್ಯಾಪ್ತಿಯ ಪೊಲೀಸ್ ಠಾಣೆಗೆ ರವಾನಿಸಲಾಗುತ್ತದೆ. ನಂತರ ಬೀಟ್ ಪೊಲೀಸ್ ಸಿಬ್ಬಂದಿ ನಿಯಮಿತ ಗಸ್ತು ಹಾಗೂ ನಿಗಾವಹಿಸುವ ಮೂಲಕ ಮನೆಗಳ ಭದ್ರತೆಯನ್ನು ಖಚಿತಪಡಿಸಿಕೊಳ್ಳಲಿದ್ದಾರೆ.

ಇತ್ತೀಚೆಗೆ ನಗರದಲ್ಲಿ ಬೀಗ ಹಾಕಿರುವ ಮನೆಗಳನ್ನು ಗುರಿಯಾಗಿಸಿಕೊಂಡು ಕಳ್ಳತನ ಪ್ರಕರಣಗಳು ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. ವಿಶೇಷವಾಗಿ ರಾತ್ರಿ 1 ಗಂಟೆಯಿಂದ ಬೆಳಗಿನ ಜಾವ 5 ಗಂಟೆಯೊಳಗೆ ಹೆಚ್ಚಿನ ಕಳ್ಳತನ ಪ್ರಕರಣಗಳು ನಡೆದಿರುವುದರಿಂದ ಪೊಲೀಸರು ರಾತ್ರಿ ಗಸ್ತು ಹೆಚ್ಚಿಸಿದ್ದಾರೆ. ಯೋಜನೆಯಡಿ ನೋಂದಾಯಿತ ಮನೆಗಳನ್ನು ಬೀಟ್ ಪೊಲೀಸ್ ಸಿಬ್ಬಂದಿ

■ 6ನೇ ಪುಟಕ್ಕೆ



ಮೈಸೂರಿನ ಸೂಕ್ಷ್ಮ ಪ್ರದೇಶದಲ್ಲಿ ಡಿಸಿಪಿ ಡಾ.ಹರ್ಷ ಪ್ರಿಯಂವದ ಅವರು ಅಧಿಕಾರಿಗಳೊಂದಿಗೆ ವಿಶೇಷ ಗಸ್ತಿಗೆ ಚಾಲನೆ ನೀಡಿದರು.



ಡಿಜಿಪಿ ಹಾಗೂ ಐಜಿಪಿ ಸೂಚನೆಯಂತೆ 'ಲಾಕ್ಡ್ ಹೌಸ್ ಬೀಟ್ ಸಿಸ್ಟಮ್' ಜಾರಿಗೆ ತಂದಿದ್ದೇವೆ. ಪ್ರಸ್ತುತ ನಗರದಲ್ಲಿನ 81 ಮನೆಗಳ ಮಾಲೀಕರು ಮೌಖಿಕವಾಗಿ ಮಾಹಿತಿ ನೀಡಿದ್ದು, ಅದರಂತೆ ಮಾಹಿತಿ ನೀಡಿರುವ ಮನೆಗಳತ್ತ ಹಗಲು–ರಾತ್ರಿ ನಿಗಾವಹಿಸಲಾಗುತ್ತಿದೆ. ಈ ಯೋಜನೆ ಅಪರಾಧ ತಡೆಗೆ ಸಹಕಾರಿಯಾಗಿದೆ.
-ಸೀಮಾ ಲಾಟ್ಕರ್, ಆಯುಕ್ತೆ, ನಗರ ಪೊಲೀಸ್

▶ ಎರಡು ತಿಂಗಳ ಹಿಂದೆ ನಿವಾಸಿಯೊಬ್ಬರು ಕೆನಡಾಗೆ ತೆರಳಿದ್ದು, ಅವರ ಮನೆ ಮೇಲೂ ಪೊಲೀಸರು ನಿತ್ಯ ನಿಗಾ ವಹಿಸಿದ್ದಾರೆ. ಈ ಯೋಜನೆ ಬಗ್ಗೆ ಸಾರ್ವಜನಿಕರಲ್ಲಿ ಹೆಚ್ಚಿನ ಜಾಗೃತಿ ಮೂಡಿಸುವ ಅಗತ್ಯವಿದೆ.
-ಡಾ.ಹರ್ಷ ಪ್ರಿಯಂವದ, ಡಿಸಿಪಿ

ತಮಿಳ್ನಾಡಲ್ಲಿ ಮುಂದುವರೆದ ಸರ್ಕಾರ ರಚನೆ ಕಸರತ್ತು!

ಲೋಕಭವನಕ್ಕೆ ಮೂರನೇ ಬಾರಿಗೆ ವಿಜಯ್ ಭೇಟಿ; 6 ಮತಕ್ಕೆ ಹರಸಾಹಸ

ಚೆನ್ನೈ: ತಮಿಳುನಾಡಲ್ಲಿ ಸರ್ಕಾರ ರಚನೆ ಬಿಕ್ಕಟ್ಟು ಮುಂದುವರೆದಿದ್ದು, ತಮಿಳಗ ವೆಟ್ರಿ ಕಳಗಂ(ಟಿವಿಕೆ) ನೇತಾರ ವಿಜಯ್ ಅವರು ಶನಿವಾರವೂ ಪ್ರಮಾಣ ವಚನ ಸ್ವೀಕರಿಸುವುದು ಅನುಮಾನವಾಗಿದೆ.



ದಳಪತಿ ವಿಜಯ್ ಶುಕ್ರವಾರ ಸಂಜೆ ಮೂರನೇ ಬಾರಿ ರಾಜ್ಯಪಾಲ ಆರ್.ವಿ. ಅರ್ಲೇಕರ್ ಅವರನ್ನು ಭೇಟಿ ಮಾಡಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದ್ದರು. ಈ ವೇಳೆ ತಮಗೆ 118 ಶಾಸಕರ ಬೆಂಬಲವಿದೆ ಎಂದು ಪತ್ರ ಸಹ ಸಲ್ಲಿಸಿದ್ದರು. ಹಾಗಾಗಿ ರಾಜ್ಯಪಾಲರು ನೂತನ ಸರ್ಕಾರ ರಚನೆಗೆ ಗ್ರೀನ್ ಸಿಗ್ನಲ್ ನೀಡಿದ್ದು, ವಿಜಯ್ ನಾಳೆ ಬೆಳಗ್ಗೆ ಚೆನ್ನೈನ ನೆಹರು ಕ್ರೀಡಾಂಗಣದಲ್ಲಿ ನೂತನ ಸಿಎಂ ಆಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎನ್ನಲಾಗಿತ್ತು. ಶನಿವಾರ ಬೆಳಗ್ಗೆ 11 ಗಂಟೆಗೆ ಚೆನ್ನೈನ

■ 6ನೇ ಪುಟಕ್ಕೆ

ಕೋಟೆ ನಾಡಲ್ಲಿ ಬಿಎಸ್‌ವೈ ಅಭಿಮಾನೋತ್ಸವ! ಅದ್ಧೂರಿ ಪುರಪ್ರವೇಶ; ಬೃಹತ್ ಮೆರವಣಿಗೆ

ಚಿತ್ರದುರ್ಗ: ರಾಜ್ಯ ರಾಜಕಾರಣದ ಧ್ರುವ ತಾರೆ, ರೈತನಾಯಕ ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪನವರ 50 ವರ್ಷಗಳ ಸುದೀರ್ಘ ರಾಜಕೀಯ ಪಯಣದ ಸುವರ್ಣ ಸಂಭ್ರಮಕ್ಕೆ ಕೋಟೆ ನಾಡು ಚಿತ್ರದುರ್ಗ ಸಾಕ್ಷಿಯಾಗುತ್ತಿದೆ. ನಾಳೆ (ಮೇ 9) ನಡೆಯಲಿರುವ ಐತಿಹಾಸಿಕ ಅಭಿಮಾನೋತ್ಸವಕ್ಕಾಗಿ ಚಿತ್ರದುರ್ಗ ಮದು ವಣಗಿತ್ತಿಯಂತೆ ಸಿಂಗಾರಗೊಂಡಿದ್ದು, ಕೇಸರಿ ಪಡೆ ಹಬ್ಬದ ವಾತಾವರಣ ನಿರ್ಮಿಸಿದೆ.

ಬಿಎಸ್‌ವೈ ಅವರ ಐದು ದಶಕಗಳ ರಾಜಕೀಯ ಹಾದಿಯ ಸಾಧನೆಗಾಗಿ ಬೃಹತ್ 'ಅಭಿಮಾನೋತ್ಸವ' ಆಯೋಜಿಸಲಾಗಿದೆ. ನಗರದ ಹೊರವಲಯದಲ್ಲಿ ಜರ್ಮನ್ ಮಾದರಿಯ ಬೃಹತ್ ಪೆಂಡಾಲ್ ಹಾಕಲಾಗಿದ್ದು, ಏಳುಸುತ್ತಿನ ಕೋಟೆ ಮಾದರಿಯ ಪ್ರವೇಶ ದ್ವಾರ ನಿರ್ಮಾಣ ಮಾಡಲಾಗಿದೆ. ಸಹಸ್ರಾರು ಸಂಖ್ಯೆಯಲ್ಲಿ ಆಗಮಿಸುವ

■ 6ನೇ ಪುಟಕ್ಕೆ



ಅಭಿಮಾನೋತ್ಸವಕ್ಕೆ ಚಿತ್ರದುರ್ಗ ಪುರಪ್ರವೇಶಿಸಿದ ಮಾಜಿ ಸಿಎಂ ಯಡಿಯೂರಪ್ಪ ಅವರನ್ನು ಅದ್ಧೂರಿಯಾಗಿ ಸ್ವಾಗತಿಸಲಾಯಿತು.

ಲಲಿತ ಮಹಲ್ ಪ್ಯಾಲೆಸ್ ಹೋಟೆಲ್ ನಿರ್ವಹಣೆ ಟೆಂಡರ್ ಅವಧಿ ವಿಸ್ತರಣೆ

ನಿಯಮಗಳ ಸರಳೀಕರಣವೂ ಸೇರಿದಂತೆ ಹಣ ಸಂದಾಯಕ್ಕೆ ವಿನಾಯಿತಿ ಕೋರಿರುವ ಖಾಸಗಿ ಕಂಪನಿಗಳು

● ಈ ಮನವಿ ಪುರಸ್ಕರಿಸಲು ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ ನಿರ್ಧಾರ ● ಏಪ್ರಿಲ್ 30ರ ಗಡುವು ಮತ್ತೊಮ್ಮೆ ವಿಸ್ತರಣೆ ● ಲಾಭ–ನಷ್ಟ ಅಳೆದು ತೂಗುತ್ತಿರುವ ಕಂಪನಿಗಳು ● ಆದರೂ ಹೋಟೆಲ್ ಗುತ್ತಿಗೆ ಪಡೆಯಲು ತೀವ್ರ ಪೈಪೋಟಿ



ಮೈಸೂರು, ಮೇ 8(ಬಿಎಲ್‌ಯು)– ಸಾಂಸ್ಕೃತಿಕ ನಗರಿ ಮೈಸೂರಿನ ಪ್ರತಿಷ್ಠಿತ ಲಲಿತ ಮಹಲ್ ಪ್ಯಾಲೆಸ್ ಹೋಟೆಲ್ ಅನ್ನು ನವೀಕರಿಸಿ, ನಿರ್ವಹಣೆ ಮಾಡಲು ಖಾಸಗಿಯವರಿಗೆ ಗುತ್ತಿಗೆ ನೀಡುವ ನಿಟ್ಟಿನಲ್ಲಿ ಟೆಂಡರ್ ಸಲ್ಲಿಕೆಗೆ ವಿಧಿಸಲಾಗಿದ್ದ ಏಪ್ರಿಲ್ 30 ರ ಅಂತಿಮ ಗಡುವನ್ನು ವಿಸ್ತರಿಸಲಾಗಿದೆ. ಹಾಗಾಗಿ ಲಲಿತ ಮಹಲ್ ಪ್ಯಾಲೆಸ್ ಹೋಟೆಲ್ ಅನ್ನು ಖಾಸಗಿಯವರ ನಿರ್ವಹಣೆಗೆ ನೀಡುವ ಪ್ರಕ್ರಿಯೆ ಮತ್ತಷ್ಟು ವಿಳಂಬವಾಗಲಿದೆ.

ಸದ್ಯ, ಲಲಿತ ಮಹಲ್ ಪ್ಯಾಲೆಸ್ ಹೋಟೆಲ್ ರಾಜ್ಯ ಸರ್ಕಾರದ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ವಶದಲ್ಲಿದೆ ಈಗ ಇವರೇ ಹೋಟೆಲ್ ನಿರ್ವಹಿಸುತ್ತಿದ್ದಾರೆ. ಸರ್ಕಾರ, ಅದನ್ನು ಖಾಸಗಿಯವರಿಗೆ ನೀಡಲು ನಿರ್ಧರಿಸಿದೆ.

ನಾಲ್ವಡಿ ನಿರ್ಮಾಣ: 1921ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಂದ ನಿರ್ಮಾಣಗೊಂಡ ಲಲಿತ ಮಹಲ್ ಪ್ಯಾಲೆಸ್ ಹೋಟೆಲ್ ಶತಮಾನ ಪೂರೈಸಿದೆ. ಲಲಿತ ಮಹಲ್ ಪ್ಯಾಲೆಸ್ ಹೋಟೆಲ್‌ನ ಕೆಲವು ಭಾಗ ಸತ್ವ ಕಳೆದುಕೊಂಡು ಪ್ಲಾಸ್ಟರಿಂಗ್ ಉದುರಿ ಬೀಳುತ್ತಿದೆ. ಅಲ್ಲದೆ

■ 6ನೇ ಪುಟಕ್ಕೆ

ಹೋಟೆಲ್ ನವೀಕರಣ ಸವಾಲಿನ ಕೆಲಸ

ಶತಮಾನೋತ್ಸವ ಪೂರೈಸಿರುವ ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ನವೀಕರಣ ಬಹಳ ಸೂಕ್ಷ್ಮ ವಿಚಾರವಾಗಿದೆ. ಪಾರಂಪರಿಕ ಶೈಲಿಯಲ್ಲಿ ನಿರ್ಮಾಣವಾಗಿರುವ ಶ್ವೇತ ವರ್ಣದ ಈ ಕಟ್ಟಡ ಸೌಂದರ್ಯ ಸಂರಕ್ಷಣೆ ಅತೀ ಮುಖ್ಯ. ಈ ಹಿನ್ನೆಲೆಯಲ್ಲಿ ನವೀಕರಣ ದೊಡ್ಡ ಸವಾಲಾಗಿದೆ. ಪಾರಂಪರಿಕ ಕಟ್ಟಡದ ಸೌಂದರ್ಯಕ್ಕೆ ಸಣ್ಣದೊಂದು ಧಕ್ಕೆಯಾದರೂ ಪಾರಂಪರಿಕ ಪ್ರಿಯರ ತೀವ್ರ ಆಕ್ರೋಶ ಎದುರಿಸಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ಪಾರಂಪರಿಕ ಶೈಲಿಯ ಕಟ್ಟಡದ ಸೌಂದರ್ಯಕ್ಕೆ ಯಾವುದೇ ರೀತಿಯಲ್ಲೂ ಕುಂದುಂಟಾಗದಂತೆ ಎಚ್ಚರಿಕೆ ವಹಿಸಲು ನವೀಕರಣಕ್ಕೆ ಸಲಹೆ ಹಾಗೂ ಮಾರ್ಗದರ್ಶನ ನೀಡಲು ಸರ್ಕಾರ ತಜ್ಞರ ಸಮಿತಿಯೊಂದನ್ನು ರಚನೆ ಮಾಡಲಿದೆ.

ನಕ್ಕರೆ ಅದೇ ಸ್ವರ್ಗ

ರೋಗಿ : ಡಾಕ್ಟ್ರೆ ಯಾಕೋ ತುಂಬಾ ಭಯವಾಗ್ತಿದೆ. ಈ ಆಪರೇಷನ್ ಆದ್ಮೇಲೆ ನಾನು ಬದುಕಿರ್ತೀನಾ?

ಡಾಕ್ಟರ್ : ತಜ್ಞರು ಹೇಳುವ ಪ್ರಕಾರ, ಈ ಆಪರೇಷನ್‌ನಲ್ಲಿ ಬದುಕುಳಿಂಯೋ ಸಾಧ್ಯತೆ ಹತ್ತರಲ್ಲಿ ಒಂದು. ಈಗಾಗ್ಲೇ 9 ಮಂದಿ ಸತ್ತಿದ್ದಾರೆ. ನೀವು ಬದುಕುತ್ತೀರಿ ಬಿಡಿ. ಚಿಂತೆ ಮಾಡಬೇಡಿ?

ಮೈಸೂರು ಮಿತ್ರ

ಶನಿವಾರ, ಮೇ 9, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಲೋಕವನ್ನು ತಿಳಿದವನು ನಾಚಿಕೊಳ್ಳುವುದಿಲ್ಲ.
ಅನ್ನದ ಬೆಲೆ ತಿಳಿದವನು ಅಹಂಕಾರಿಯಾಗುವುದಿಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಪೇಚಾಟದಲ್ಲಿ ಬಿದ್ದವನಿಗೆ ಪೀಕಲಾಟವೇ ಗತಿ.

ನಿಮ್ಮ ಪತ್ರಗಳು

ಹಿಂದೂ ಧರ್ಮವೇ ಇಲ್ಲ ಎನ್ನುವುದಾದರೆ ಇವರು ಯಾವ ಧರ್ಮಕ್ಕೆ ಸೇರಿದವರು?

ಮಾನ್ಯರೆ,

ಮೈಸೂರಿನ ಕಲಾಮಂದಿರದಲ್ಲಿ ಬುಧವಾರ (ಮೇ 6) ನಡೆದ ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಜಯಂತಿಯಲ್ಲಿ 2025–26 ನೇ ಸಾಲಿನ ಕಾಯಕ ಯೋಗಿ ಸಿದ್ದರಾಮೇಶ್ವರ ಪ್ರಶಸ್ತಿಯನ್ನು ಸ್ವೀಕರಿಸಿ ಮಾತನಾಡಿದ ಹಿರಿಯ ಸಾಹಿತಿ ಪ್ರೊ.ಎಸ್.ಜಿ. ಸಿದ್ದರಾಮಯ್ಯ ಅವರು "ಈ ದೇಶದೊಳಗೆ ಚಾತುರ್ವರ್ಣ ವ್ಯವಸ್ಥೆ ಅರ್ಥಾತ್ ವೈದಿಕ ವ್ಯವಸ್ಥೆಯನ್ನು 'ಹಿಂದೂ ಧರ್ಮ' ಎಂದು ಇತ್ತೀಚೆಗೆ ಕರೆಯುತ್ತಿದ್ದಾರೆ. ಮಧ್ಯಕಾಲೀನ ಯುಗದ ಸಂದರ್ಭದಲ್ಲಿ ಹುಟ್ಟಿಕೊಂಡಂತಹ ಹಿಂದೂ ಎಂಬ ಒಂದು ಶಬ್ದವನ್ನು ಮುನ್ನಲೆಗೆ ತರಲು ಕೆಲವರು ತೊಡಗಿದ್ದಾರೆ. ಹಿಂದೂ ಧರ್ಮ ಎಂಬುದನ್ನು ಬಳಸಲಾಗುತ್ತಿದೆಯೇ ಎಂಬುದನ್ನು ಕೇವಲ ರಾಜಕಾರಣಕ್ಕಾಗಿ ಬಳಸಲಾಗುತ್ತಿದೆಯೇ ಹೊರತು 'ಹಿಂದೂ ಧರ್ಮ' ಎನ್ನುವುದು ಈ ದೇಶದಲ್ಲಿ ಇಲ್ಲ !?" ಎಂಬ ಅಚ್ಚರಿಯ ಮಾತುಗಳನ್ನಾಡಿದ್ದಾರೆ.

ಹಾಗಾದರೆ ನಮ್ಮ ದೇಶಕ್ಕೆ ಹಿಂದೂಸ್ಥಾನ ಎಂಬ ಹೆಸರು ಯಾವಾಗ ಬಂದಿತು ಎಂದು ಇವರು ಹೇಳುತ್ತಾರೆಯೇ? ಕೇವಲ ಬಾಯಿ ಚಪಲಕ್ಕಾಗಿ ಇಂತಹ ಬೇಜವಾಬ್ದಾರಿಯ ಮಾತುಗಳನ್ನು ಸಭೆಯಲ್ಲಿ ಹೇಳುವುದು ಅದೆಷ್ಟು ಸರಿ ಎಂಬುದು ಜನಸಾಮಾನ್ಯನ ಪ್ರಶ್ನೆಯಾಗಿದೆ.

ಹಿಂದೂ ಧರ್ಮದವರು ಯಾವಾಗಲೂ ಇತರ ಧರ್ಮಗಳ ಬಗ್ಗೆ ಎಂದೂ ಅಪಶೃತಿಯನ್ನಾಡಿಲ್ಲ, ಅವಹೇಳನವನ್ನೂ ಮಾಡಿಲ್ಲ. ದೇಶದಲ್ಲಿ ಹಿಂದೂ ಧರ್ಮ ಎಂಬುದೇ ಇಲ್ಲ ಎಂದು ಅವರು ಹೇಳಿದ್ದಾರೆ. ಹಾಗಾದರೆ ಅವರು ಯಾವ ಧರ್ಮಕ್ಕೆ ಸೇರಿದ್ದಾರೆ. ವೇದಗಳು ನಮ್ಮ ಆಸ್ತಿ. ಈ ವೇದಗಳು ಪ್ರಪಂಚದ ಹಲವಾರು ಭಾಷೆಗಳಿಗೆ ತರ್ಜುಮೆ ಆಗಿವೆ. ಅನ್ಯ ಮತದವರೂ ಸಹಾ ಹಿಂದೂ ಧರ್ಮದ ಬಗ್ಗೆ ಆಸಕ್ತಿಯನ್ನು ಹೊಂದಿದ್ದು ಗೌರವ ಭಾವವನ್ನು ಹೊಂದಿದ್ದಾರೆ.

ನಮ್ಮ ಹಿಂದೂ ಧರ್ಮವು ಬಹಳ ಪುರಾತನವಾದದ್ದು, ಅಂದಿನಿಂದಲೂ ಏರು ಗತಿಯಲ್ಲಿ ಸಾಗುತ್ತಾ, ಇತರೆ ಧರ್ಮಗಳಿಗೆ ಮಾದರಿಯಾಗುತ್ತಾ ನಡೆದಿದೆ. ಹಿಂದೆ ಈ ಧರ್ಮವನ್ನು ನಾಶಮಾಡಬೇಕೆಂದು ಹವಣಿಸುತ್ತಲೇ ಇದ್ದಾರೆ. ಆದರೆ ಹಿಂದೂ ಧರ್ಮದ ಬೇರುಗಳು ಬಹಳ ಗಟ್ಟಿಯಾಗಿವೆ. ಈ ಧರ್ಮವನ್ನು ನಾಶಮಾಡುವ ಪ್ರಯತ್ನಗಳು ಪರಕೀಯರಿಂದ ನಡೆದಿವೆ, ನಡೆಯುತ್ತಲೂ ಇವೆ. ಆದರೆ ಹಿಂದೂ ಧರ್ಮವು ನಾಶವಾಗದೆ ಉಳಿದಿದೆ. ಇನ್ನಾದರೂ ಹಿರಿಯ ಸಾಹಿತಿಗಳಾದ ಪ್ರೊ. ಎಸ್.ಜಿ. ಸಿದ್ದರಾಮಯ್ಯ ಅವರು ಇಂತಹ ಹೇಳಿಕೆ ಕೊಡುವುದನ್ನು ಕಡಿಮೆ ಮಾಡಲಿ. ಅವರಿಗೆ ಒಬ್ಬ ಸಾಹಿತಿಯಾಗಿ ಇರುವ ಗೌರವವನ್ನು ಕಡಿಮೆ ಮಾಡಿಕೊಳ್ಳದೆ ಇರಲಿ ಎಂಬುದೇ ಜನತಾ ಜನಾರ್ಧನನ ಆಸೆಯಾಗಿದೆ.

–ಬೇಲೂರು ದ.ಶಂ.ಪ್ರಕಾಶ್, ಮೈಸೂರು

ದೀದಿಗೆ ಸೆಡ್ಡು ಹೊಡೆದ ದಾದ !

ಮಾನ್ಯರೆ,

ದೇಶಾದ್ಯಂತ ತೀವ್ರ ಕುತೂಹಲ ಕೆರಳಿಸಿದ್ದ ಪಶ್ಚಿಮ ಬಂಗಾಳ ರಾಜ್ಯ ವಿಧಾನ ಸಭಾ ಚುನಾವಣೆಯಲ್ಲಿ ಆಡಳಿತಾರೂಢ ತೃಣಮೂಲ ಕಾಂಗ್ರೆಸ್ ಅನ್ನು ದೂಳಿಪಟ ಮಾಡಿರುವ ಭಾರತೀಯ ಜನತಾ ಪಕ್ಷ ಆ ಪಕ್ಷದ ಸರ್ವೋಚ್ಚ ನಾಯಕಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರಿಗೆ 15 ವರ್ಷಗಳ ನಂತರ ಸೋಲಿನ ಕಹಿಯನ್ನು ಉಣಿಸಿದೆ.

ಕಳೆದ 15 ವರ್ಷಗಳಿಂದ ಅಧಿಕಾರದಲ್ಲಿದ್ದ ಮಮತಾ ಬ್ಯಾನರ್ಜಿ ಅವರನ್ನು ಅಧಿಕಾರದಿಂದ ಕಿತ್ತೊಗೆದಿರುವ ಬಿಜೆಪಿ ಒಟ್ಟು 294 ಸ್ಥಾನಗಳ ಪೈಕಿ 205 ಸ್ಥಾನಗಳಲ್ಲಿ ವಿಜಯ ಸಾಧಿಸಿ, ಇದೇ ಮೊದಲ ಬಾರಿಗೆ ಪಶ್ಚಿಮ ಬಂಗಾಳದಲ್ಲಿ ಅಧಿಕಾರಕ್ಕೇರಲಿದೆ. ಆಡಳಿತಾರೂಢ ಟಿಎಂಸಿ ಕೇವಲ 81 ಸ್ಥಾನಗಳಿಗೆ ತೃಪ್ತಿ ಪಟ್ಟುಕೊಳ್ಳಬೇಕಾಗಿದೆ. ಸುಮಾರು 3 ದಶಕಗಳ ಕಾಲ ಬಂಗಾಳದಲ್ಲಿ ಅಧಿಕಾರ ನಡೆಸಿದ್ದ ಎಡ ಪಕ್ಷಗಳು ಗಳಿಸಿರುವ ಸ್ಥಾನ ಕೇವಲ 2 ಮಾತ್ರ ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯ ಗೆಲುವಿಗೆ ಹಲವಾರು ಕಾರಣಗಳಿವೆ. ಬಹು ಮುಖ್ಯವಾಗಿ ಮಮತಾ ಬ್ಯಾನರ್ಜಿ ಅವರ ದುರಾಡಳಿತದಿಂದ ಮತದಾರರು ರೋಸಿ ಹೋಗಿದ್ದರು ಎನ್ನಲಾಗಿದೆ.

ಎರಡನೆಯದಾಗಿ, ಈ ಬಾರಿ ಏನೇ ಆಗಲಿ ಪಶ್ಚಿಮ ಬಂಗಾಳದಲ್ಲಿ ಕಮಲವನ್ನು ಅರಳಿಸುವ ದೃಢ ಸಂಕಲ್ಪ ಮಾಡಿದ್ದ ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಹೂಡಿದ್ದ ರಣ ತಂತ್ರಗಳು ಯಶಸ್ವಿಯಾಗಿವೆ. ಪ್ರಧಾನಿ ಮೋದಿಯವರು ಪಶ್ಚಿಮ ಬಂಗಾಳದ ವಿವಿಧ ಭಾಗಗಳಲ್ಲಿ 18ಕ್ಕೂ ಹೆಚ್ಚು ಬಾರಿ ಮಿಂಚಿನ ಸಂಚಾರ ನಡೆಸಿ, ಮತದಾರರನ್ನು ಸೂಜಿಗಲ್ಲಿನಂತೆ ಆಕರ್ಷಿಸಿದ್ದು ಪಕ್ಷದ ಅಭೂತಪೂರ್ವ ಗೆಲುವಿಗೆ ನೆರವಾಗಿದೆ. ಅದೂ ಅಲ್ಲದೇ, ಟಿಎಂಸಿಯ ಭದ್ರ ಕೋಟೆಯಾಗಿದ್ದ ಮಹಿಳೆಯರನ್ನು ಆಕರ್ಷಿಸುವಲ್ಲಿ ಸಹಾ ಬಿಜೆಪಿ ಯಶಸ್ವಿಯಾಗಿದೆ.

ಒಟ್ಟಿನಲ್ಲಿ ಪಶ್ಚಿಮ ಬಂಗಾಳದಲ್ಲಿ ದೊರೆತಿರುವ ಈ ಅಭೂತಪೂರ್ವ ಜನಾದೇಶವನ್ನು ಪಕ್ಷ ಉತ್ತಮ ರೀತಿಯಲ್ಲಿ ಬಳಸಿಕೊಂಡು, ಉತ್ತಮ, ಭ್ರಷ್ಟಾಚಾರ ರಹಿತ ಹಾಗೂ ಜನಪರ ಆಡಳಿತವನ್ನು ನೀಡುವಂತಾಗಲೆಂದು ಆಶಿಸೋಣ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ವ್ಯಾಪಾರಿಗಳಿಂದ ಪಾದಚಾರಿ ಜಾಗ ಬಳಕೆ

ಮಾನ್ಯರೆ,

ಮೈಸೂರು ನಗರದ, ಪ್ರಮುಖ ವಾಣಿಜ್ಯ ರಸ್ತೆಗಳಾದ, ಅಶೋಕ ರಸ್ತೆ, ದೇವರಾಜ ಅರಸು ರಸ್ತೆ, ಜಗನ್ಮೋಹನ ರಸ್ತೆ, ಸಯ್ಯಾಜಿರಾವ್ ರಸ್ತೆ, ಧನ್ವಂತರಿ ರಸ್ತೆ, ಶಿವರಾಂ ಪೇಟೆಯ ಹಲವಾರು ಕಡೆಗಳಲ್ಲಿ ಕೆಲವು ವ್ಯಾಪಾರಿಗಳು ತಮ್ಮ ಅಂಗಡಿಗಳಿಗೆ ಗಿರಾಕಿಗಳು ಬರಲೆಂದು ತಮ್ಮ ಅಂಗಡಿಗಳ ಮುಂಭಾಗ ಸಾರ್ವಜನಿಕರು ಓಡಾಡುವ ಮುಖ್ಯ ರಸ್ತೆಯ ಪಾರ್ಕಿಂಗ್ ರಸ್ತೆಯಲ್ಲೇ ಕಬ್ಬಿಣದ ಬಾಕ್ಸ್‌ಗಳನ್ನು ಹಾಕಿಕೊಂಡಿದ್ದಾರೆ. ಇದು ಸಾರ್ವಜನಿಕರ ಅನುಕೂಲಕ್ಕಾಗಿ ಇರುವ ರಸ್ತೆ. ಈ ರಸ್ತೆಯನ್ನು ಅಕ್ರಮವಾಗಿ ಆಕ್ರಮಿಸಿಕೊಳ್ಳಲು ಇವರಿಗೆ ಯಾವ ಅಧಿಕಾರ ಇದೆ? ಇನ್ನು ಕೆಲವು ವ್ಯಾಪಾರಿಗಳಂತೂ ತಮ್ಮ ಅಂಗಡಿಗಳ ಮುಂದೆ ಯಾವುದೇ ವಾಹನಗಳನ್ನು ಪಾರ್ಕಿಂಗ್ ಮಾಡಲು ಬಿಡುವುದಿಲ್ಲ. ಸಾರ್ವಜನಿಕರು ಪಾರ್ಕಿಂಗ್ ಮಾಡಲು ಹೋದರೆ, ಅಂಗಡಿ ಮಾಲೀಕರು ಜಗಳಕ್ಕೆ ಬರುತ್ತಾರೆ. ಅಂಗಡಿಯ ಮುಂದಿನ ಜಾಗ ನಮಗೆ ಸೇರಿದ್ದು ಎಂದು ವಾದಿಸುತ್ತಾರೆ. ಈ ವಿಚಾರವನ್ನು ಅಲ್ಲಿನ ಟ್ರಾಫಿಕ್ ಪೊಲೀಸರ ಗಮನಕ್ಕೆ ತಂದರೂ ಅದು ಪ್ರಯೋಜನಕ್ಕೆ ಬರುವುದಿಲ್ಲ. ಈ ಬಗ್ಗೆ ಟ್ರಾಫಿಕ್ ಪೊಲೀಸ್ ಅಧಿಕಾರಿಗಳು ಗಮನ ಹರಿಸಿ, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ ಮೈಸೂರು



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ಆಹಾ... ಅಲ್ಲ ಹಾಹಾಕಾರವೀ ಜೀವನ...!

ಇತ್ತೀಚೆಗೆ ಸಂತೋಷ ತರುವ ಸುದ್ದಿಗಳಿಗಿಂತ ಬೇಸರ ತರಿಸುವ ಸುದ್ದಿಗಳೇ ಜಾಸ್ತಿಯಾಗಿ ಕಂಡುಬರುತ್ತಿವೆ. ನಮ್ಮ ಪಾಡಿಗೆ ನಾವಿರುತ್ತೇವೆ ಎಂಬುದಕ್ಕೂ ಆಸ್ಪದ ನೀಡದಂತಹ ಸ್ಥಿತಿ ನಿರ್ಮಾಣವಾಗುತ್ತಿದೆ.

ಈ ವರ್ಷದ ಬೇಸಿಗೆ ಬಹಳ ಅಸಹನೀಯತೆ ತೊಂದೊಡ್ಡುತ್ತಿದೆ. ಮೈಸೂರಿನಂತಹ ನಗರದಲ್ಲಿ ಈ ಹಿಂದೆ ಗರಿಷ್ಠ ತಾಪಮಾನ 35–36 ಡಿಗ್ರಿ ಸೆಲ್ಷಿಯಸ್ ಆಗಿರುತ್ತಿತ್ತು. ಮೈಸೂರನ್ನು ನಿವೃತ್ತರ ಸ್ವರ್ಗ ಎಂದು ಕರೆಯಲಾಗುತ್ತಿತ್ತು. ಇದಕ್ಕೆ ಮುಖ್ಯ ಕಾರಣ ಇಲ್ಲಿನ ಪರಿಸರ, ಇಲ್ಲಿನ ಸಮೃದ್ಧವಾದ ಉದ್ಯಾನಗಳು, ಇಲ್ಲಿನ ಮರಗಿಡಗಳು ಆಗಿತ್ತು. ಸಂಜೆಯ ಹೊತ್ತಿನ ನಡಿಗೆಯನ್ನು ತಂಪು ವಾತಾವರಣದ ನಡಿಗೆ ಎಂದು ಹೇಳಲಾಗುತ್ತಿತ್ತು. ಆದರೆ ಈಗ ಪರಿಸ್ಥಿತಿ ಬದಲಾಗುತ್ತಿದೆ.

ಮೈಸೂರಿನ ವಾತಾವರಣದಲ್ಲಿ ಬದಲಾವಣೆ ಕಾಣುತ್ತಿದೆ. ಈಗಾಗಲೇ ಈ ವರ್ಷ ಒಂದೆರಡು ಬಾರಿ ಇಲ್ಲಿನ ಉಷ್ಣತೆ 37–38 ಡಿಗ್ರಿಗೆ ತಲುಪಿದೆ. ಇನ್ನು ಮುಂದಿನ ದಿನಗಳಲ್ಲಿ ಇಲ್ಲಿನ ಉಷ್ಣಾಂಶ 40 ಡಿಗ್ರಿಗೆ ತಲುಪಿದರೂ ಆಶ್ಚರ್ಯವಿಲ್ಲ. ಇದು ಕೇವಲ ಮೈಸೂರಿಗೆ ಸಂಬಂಧಿಸಿದ್ದು ಎಂದಲ್ಲ. ಎಲ್ಲೆಡೆ ಸಾಮಾನ್ಯ ತಾಪಮಾನಕ್ಕಿಂತ ನಾಲ್ಕಾರು ಡಿಗ್ರಿಯಷ್ಟು ಉಷ್ಣಾಂಶ ಏರಿಕೆಯಾಗುತ್ತಿದೆ. ಮಕ್ಕಳು ಹಾಗೂ ವಯಸ್ಸಾದವರು ಮನೆಯಲ್ಲೇ ಇರುವಂತಾಗಿದೆ. ಮನೆಯೊಳಗಿದ್ದರೂ ದೇಹದಲ್ಲಿನ ನೀರು ಆವಿಯಾಗುವಂತಾಗಿ ದೇಹ ನಿರ್ಜಲೀಕರಣಕ್ಕೆ ಒಳಗಾಗುತ್ತಿದೆ. ಇನ್ನೂ ಎರಡು ತಿಂಗಳಿಗೂ ಹೆಚ್ಚು ಕಾಲ ಇದನ್ನು ಅನುಭವಿಸಬೇಕಾಗುತ್ತದೆ. ಅಲ್ಲಿಯವರೆಗೆ ಜೀವ ಉಳಿದುಕೊಳ್ಳಲಿ ಎಂದು ಕೇಳಿಕೊಳ್ಳುವಂತಾಗಿದೆ.

ಇದಕ್ಕೆಲ್ಲಾ ಕಾರಣ ಏನು ಎಂಬುದು ನಮಗೆಲ್ಲಾ ತಿಳಿದೇ ಇದೆ. ಮೊದಲು ಚಾಮುಂಡಿಬೆಟ್ಟದ ಮೇಲೆ ನಿಂತು ನೋಡಿದರೆ ಮೈಸೂರು ನಗರದ ನಿರ್ಮಾಣಗಳು ಪೂರ್ತಿಯಾಗಿ ಕಾಣುತ್ತಿರಲಿಲ್ಲ. ಎಲ್ಲೆಲ್ಲೂ ಹಸಿರೇ ಕಾಣುತ್ತಿತ್ತು. ಆದರೆ ಇಂದು ಅಲ್ಲಿಂದ ನೋಡಿದರೆ ಬೋಳು ಮೈಸೂರು ಅಥವಾ ಸಿಮೆಂಟ್ ಜಂಗಲ್ ಕಾಣುವಂತಾಗಿದೆ. ನೂರಾರು ವರ್ಷ ತಲೆ ಎತ್ತಿ ನಿಂತು ತನ್ನ ಬಳಿ ಬಂದವರಿಗೆ ತಂಪು ನೀಡುತ್ತಿದ್ದ, ಪಕ್ಷಿಗಳ ಆಶ್ರಯತಾಣವಾಗಿದ್ದ ಮರಗಳನ್ನು ಇಂದು ಅಭಿವೃದ್ಧಿಯ ಹೆಸರಿನಲ್ಲಿ ನಿರ್ದಾಕ್ಷಿಣ್ಯವಾಗಿ ಕಡಿದು ಹಾಕಲಾಗುತ್ತಿದೆ. ಇಂದು ಜನರಿಗೆ ಪರಿಸರ ಪ್ರಜ್ಞೆ ಹಿಂದಿಗಿಂತಲೂ ಹೆಚ್ಚಾಗಿದೆ. ಅವರು ಮರಗಳನ್ನು ಕಡಿಯುವುದನ್ನು ವಿರೋಧಿಸುತ್ತಾರೆ. ಅದಕ್ಕೆ ಅಧಿಕಾರಿ ವರ್ಗ ಅಥವಾ ರಾಜಕಾರಣಿಗಳು ನೀಡುವ ಸಮಜಾಯಿಷಿಯೆಂದರೆ ಅಲ್ಲಿ ಹಿಂದಿಗಿಂತಲೂ ಹೆಚ್ಚು ಗಿಡಮರಗಳನ್ನು ನೆಡಲಾಗುತ್ತದೆ ಎಂದು. ಚಳುವಳಿಗಾರರಿಗೆ ಜನ ಬೆಂಬಲ ಹೆಚ್ಚಾಗಿ ದೊರಕದ ಕಾರಣ, ಅವರೂ ಆ ಮಾತನ್ನು ಕೇಳಿ ಸುಮ್ಮನಾಗುತ್ತಾರೆ. ಎಲ್ಲರಿಗೂ ಗೊತ್ತು, ಮರ ಕಡಿದ ಜಾಗದಲ್ಲಿ ಮತ್ತೆ ಮರಗಳನ್ನು ಕಾಣುವುದು ಕೇವಲ ಕಲ್ಪನೆಯಲ್ಲಿ ಮಾತ್ರ ಎಂದು.

ಇಂತಹ ಯಾರಿಗೂ ತೊಂದರೆ ನೀಡದ ಮರಗಳನ್ನು ಕಡಿಯುತ್ತಿರುವ ಕಾರಣ ಪರಿಸರದಲ್ಲಿ ಶಾಖ ಹೆಚ್ಚಾಗುತ್ತಿದೆ. ತಮಗೂ ಮರ ಕಡಿತಕ್ಕೂ ಸಂಬಂಧ ಇಲ್ಲದವರೇ ಹೆಚ್ಚಾಗಿ ಇದರಿಂದ ತೊಂದರೆ ಅನುಭವಿಸುವಂತಾಗುತ್ತಿರುವುದು ದುರಂತವೇ ಸರಿ. ಇನ್ನು ಈ ವರ್ಷ ಮಳೆ ಕಡಿಮೆ ಎಂಬ ಮಾತುಗಳನ್ನು ಹವಾಮಾನ ತಜ್ಞರು ಹೇಳುತ್ತಿದ್ದಾರೆ. ಈ ಬಿಸಿಲಿನ ಬೇಗೆ ಕಾರಣ ಭೂಮಿಯ ಅಂತರ್ಜಲ ಕುಸಿಯುತ್ತಿದೆ. ಮತ್ತೆ ಮಳೆ ಬಂದು ನೀರು ಭೂಮಿಗೆ ಇಳಿದರೆ ಮಾತ್ರ ಮುಂದಿನ ವರ್ಷ ನೀರಿಗೆ ಅಂತಹ ಹಾಹಾಕಾರವಿರುವುದಿಲ್ಲ. ಇಲ್ಲದಿದ್ದರೆ ಮುಂದಿನ ವರ್ಷ ಮತ್ತಷ್ಟು ತಾಪಮಾನ ಜಾಸ್ತಿಯಾಗಿ ಜೀವನ ದುಸ್ತರವಾಗುತ್ತದೆ. ಕೊನೆಗೆ ಕುಡಿಯುವ ನೀರಿಗೂ ಬವಣೆಪಡಬೇಕಾಗುತ್ತದೆ. ಮಳೆ ಇಲ್ಲ ಎಂದಾದರೆ ಜಲಾಶಯಗಳಲ್ಲಿ ನೀರು ಕಡಿಮೆಯಾಗುತ್ತದೆ. ಅಲ್ಲಿನ ನೀರನ್ನು ಕೇವಲ ಕುಡಿಯಲು ಮಾತ್ರ ಎಂದು ತೀರ್ಮಾನಿಸಿದರೆ ಜಮೀನುಗಳಲ್ಲಿ ಬೆಳೆ ಬೆಳೆಯಲಾಗದು. ಮತ್ತೆ ಬೆಲೆ ಏರಿಕೆ, ಹೀಗೆ ಸಾಲು–ಸಾಲು ಬವಣೆಗೆ ನಾವು ತುತ್ತಾಗಬೇಕಾಗುತ್ತದೆ, ಅದಕ್ಕೆ ಈಗಿನಿಂದಲೇ ಮಾನಸಿಕವಾಗಿ ಸಿದ್ಧವಾಗಬೇಕಾಗುತ್ತದೆ. ಇಂತಹ ಪರಿಸ್ಥಿತಿಗೆ ಕೆಲವು ಸಮಾಜಘಾತಕರು ಕಾರಣರಾಗುತ್ತಿದ್ದಾರೆ. ಆದರೆ ಅದರ ಪರಿಣಾಮವನ್ನು ಎಲ್ಲರೂ ಅನುಭವಿಸಬೇಕಾಗುತ್ತಿದೆ.



> ❝ ಮರಗಳನ್ನು ಕಡಿಯುತ್ತಿರುವ ಕಾರಣ ಪರಿಸರದಲ್ಲಿ ಶಾಖ ಹೆಚ್ಚಾಗುತ್ತಿದೆ. ತಮಗೂ ಮರ ಕಡಿತಕ್ಕೂ ಸಂಬಂಧ ಇಲ್ಲದವರೇ ಹೆಚ್ಚಾಗಿ ಇದರಿಂದ ತೊಂದರೆ ಅನುಭವಿಸುವಂತಾಗುತ್ತಿರುವುದು ದುರಂತವೇ ಸರಿ. ಇನ್ನು ಈ ವರ್ಷ ಮಳೆ ಕಡಿಮೆ ಎಂಬ ಮಾತುಗಳನ್ನು ಹವಾಮಾನ ತಜ್ಞರು ಹೇಳುತ್ತಿದ್ದಾರೆ. ಈ ಬಿಸಿಲಿನ ಬೇಗೆ ಕಾರಣ ಭೂಮಿಯ ಅಂತರ್ಜಲ ಕುಸಿಯುತ್ತಿದೆ. ಮತ್ತೆ ಮಳೆ ಬಂದು ನೀರು ಭೂಮಿಗೆ ಇಳಿದರೆ ಮಾತ್ರ ಮುಂದಿನ ವರ್ಷ ನೀರಿಗೆ ಅಂತಹ ಹಾಹಾಕಾರವಿರುವುದಿಲ್ಲ. ಇಲ್ಲದಿದ್ದರೆ ಮುಂದಿನ ವರ್ಷ ಮತ್ತಷ್ಟು ತಾಪಮಾನ ಜಾಸ್ತಿಯಾಗಿ ಜೀವನ ದುಸ್ತರವಾಗುತ್ತದೆ. ಕೊನೆಗೆ ಕುಡಿಯುವ ನೀರಿಗೂ ಬವಣೆಪಡಬೇಕಾಗುತ್ತದೆ. ಮಳೆ ಇಲ್ಲ ಎಂದಾದರೆ ಜಲಾಶಯಗಳಲ್ಲಿ ನೀರು ಕಡಿಮೆಯಾಗುತ್ತದೆ. ಅಲ್ಲಿನ ನೀರನ್ನು ಕೇವಲ ಕುಡಿಯಲು ಮಾತ್ರ ಎಂದು ತೀರ್ಮಾನಿಸಿದರೆ ಜಮೀನುಗಳಲ್ಲಿ ಬೆಳೆ ಬೆಳೆಯಲಾಗದು.

ಇತ್ತೀಚೆಗೆ ಅಲ್ಲಲ್ಲಿ ಕಲಬೆರಕೆ ಪದಾರ್ಥಗಳ ಮಾರಾಟದ ಸುದ್ದಿಗಳು ಪ್ರಕಟವಾಗುತ್ತವೆ. ಹಣದ ಆಸೆಗಾಗಿ ಕಲಬೆರಕೆ ಮಾಡಲಾಗುತ್ತದೆ. ಆಹಾರ ಪದಾರ್ಥಗಳು ನಮಗೆ ನೈಸರ್ಗಿಕ ಕೊಡುಗೆ. ಅವು ನಮ್ಮ ಜೀವನಕ್ಕೆ ಸಹಕಾರಿ. ಆದರೆ ಹಣ ಮಾಡುವವರು ದುರಾಸೆಗೆ ಅದಕ್ಕೆ ಕೆಲವು ದೇಹಕ್ಕೆ ಹಿತವಲ್ಲದ ಪದಾರ್ಥಗಳನ್ನು ಸೇರಿಸಿ ಮಾರಾಟ ಮಾಡಿ ಅವರು ತಮ್ಮ ಖಜಾನೆ ಭರ್ತಿ ಮಾಡಿಕೊಳ್ಳುತ್ತಿದ್ದಾರೆ. ಕಲಬೆರಕೆ ಮಾಡುವ ವಸ್ತುಗಳು ದೇಹಕ್ಕೆ ಅಹಿತಕಾರಿಯಾದುದು. ಮೊದಲೇ ಅಹಾರ ಪದಾರ್ಥಗಳಲ್ಲಿ ಈ ಹಿಂದಿನಂತೆ ಸತ್ವವಿಲ್ಲ ಎಂದು ಹೇಳುತ್ತಿರುತ್ತೇವೆ. ಅದರ ಜೊತೆಗೆ ಈ ರೀತಿ ವಿಷಕಾರಿ ಪದಾರ್ಥಗಳನ್ನು ಸೇರಿಸಿ ಮಾರಾಟ ಮಾಡುವುದರಿಂದ ನಾವು ಇನ್ನಷ್ಟು ಆರೋಗ್ಯದ ಗಂಭೀರ ಸಮಸ್ಯೆ ಕಾಣುವಂತಾಗುತ್ತಿದೆ.

ಇತ್ತೀಚೆಗೆ ವೈದ್ಯರೊಬ್ಬರು ಹೇಳಿದ ಮಾತು ಗಾಬರಿಗೊಳಿಸುವಂತಹುದು. ಈ ಹಿಂದೆ ನಾವು ಕ್ಯಾನ್ಸರ್ ಎಂದು ಎಲ್ಲೋ ಕೆಲವು ಜನರ ಬಗ್ಗೆ ಕೇಳುತ್ತಿದ್ದೆವು. ಆದರೆ, ಸಕ್ಕರೆ ಖಾಯಿಲೆ ಹಾಗೂ ರಕ್ತದೊತ್ತಡದ ರೋಗಿಗಳು ಹೇಗೆ ಜಾಸ್ತಿಯಾಗುತ್ತಿದ್ದಾರೋ ಹಾಗೆಯೇ ಕ್ಯಾನ್ಸರ್ ರೋಗಿಗಳ ಸಂಖ್ಯೆಯಲ್ಲಿ ವೃದ್ಧಿಯಾಗುತ್ತಿದೆ. ಇದಕ್ಕೆ ನಾವು ಅತಿಯಾಗಿ ಬಳಸುವ ಪ್ಲಾಸ್ಟಿಕ್ ಕಾರಣವಾಗುತ್ತಿದೆ. ಪ್ಲಾಸ್ಟಿಕ್ ನಮ್ಮ ಜೀವನದಲ್ಲಿ ಎಷ್ಟು ಉಪಕಾರಿಯಾಗಿದೆಯೋ ಅದಕ್ಕಿಂತ ಅಪಾಯಕಾರಿ ಎಂಬುದು ಆತಂಕ ಮೂಡಿಸಿದೆ. ಪ್ಲಾಸ್ಟಿಕ್ ಪದಾರ್ಥಗಳ ಉಪಯೋಗ, ಪ್ಲಾಸ್ಟಿಕ್ ಕಪ್‌ಗಳಲ್ಲಿ ಕಾಫಿ, ಟೀ ಕುಡಿಯುವುದು, ಪ್ಲಾಸ್ಟಿಕ್ ಬಾಟಲುಗಳಲ್ಲಿ ನೀರು ಕುಡಿಯುವುದು ಇದರಿಂದಾಗಿ ಪ್ಲಾಸ್ಟಿಕ್‌ನ ಅಂಶ ಕ್ರಮೇಣ ನಮ್ಮ ದೇಹಕ್ಕೆ ಸೇರುತ್ತಾ, ಈ ಕ್ಯಾನ್ಸರ್‌ಗೆ ಕಾರಣವಾಗುತ್ತಿದೆ. ಈ ಹಿಂದೆ ಪ್ಲಾಸ್ಟಿಕ್ ಬಳಕೆ ಇಲ್ಲದಿದ್ದಾಗ ಕ್ಯಾನ್ಸರ್ ರೋಗಿಗಳ ಸಂಖ್ಯೆ ಕೇವಲ ಬೆರಳೆಣಿಕೆಯಷ್ಟಿತ್ತು. ಆದರೆ ಇಂದು ಅವರ ಸಂಖ್ಯೆ ಜಾಸ್ತಿಯಾಗುತ್ತಿದೆ. ನಮ್ಮಲ್ಲಿಯೇ ಇಂದು ಅನೇಕರು ನಮ್ಮ ನೆಂಟರು, ಪರಿಚಿತರು ಕ್ಯಾನ್ಸರ್‌ನಿಂದ ನಿಧನರಾದರು ಎಂದು ಆಗಾಗ್ಗೆ ಕೇಳುವಂತಾಗುತ್ತಿದೆ. ಅವರು ಆರೋಗ್ಯವಾಗಿಯೇ ಇದ್ದರು, ಅವರಿಗೆ ಹೇಗೆ ಕ್ಯಾನ್ಸರ್ ಬಂತು ಎಂದು ನಾವು ಆಶ್ಚರ್ಯದಿಂದ ಕೇಳುತ್ತೇವೆ. ಆಗ ಕೆಲವರ ಬಗ್ಗೆ ಹೇಳುವುದು ಅದು ಆಗಲೇ ಎರಡನೇ ಹಂತ, ಮೂರನೇ ಹಂತಕ್ಕೆ ತಲುಪಿತ್ತು. ಅಲ್ಲಿಯವರೆಗೆ ಗೊತ್ತಾಗಲೇ ಇಲ್ಲ. ಹಾಗಾಗಿ ಅದು ಕಂಡುಬಂದ ಕೇವಲ ಆರು ತಿಂಗಳಲ್ಲಿ ಅವರು ಅಸು ನೀಗಿದರು ಎಂಬ ಮಾತನ್ನು ಕೇಳುತ್ತೇವೆ. ಇದಕ್ಕೆ ಕ್ಯಾನ್ಸರ್ ಬಂದವರು ಕಾರಣವೇ ಅಥವಾ ಅವರಿಗೆ ಒದಗಿದ ಕಲಬೆರಕೆ ಪದಾರ್ಥಗಳು, ಪ್ಲಾಸ್ಟಿಕ್ ಪದಾರ್ಥಗಳು ಕಾರಣವೇ ಎಂಬುದನ್ನು ಅವಲೋಕಿಸಬೇಕಾಗಿದೆ. ತಮಗೆ ಖಾಯಿಲೆ ಬರಲಿ ಎಂದು ಯಾರೂ ಬಯಸುವುದಿಲ್ಲ. ಆದರೆ ಇವತ್ತಿನ ಹಣ ಮಾಡುವ ದುರಾಸೆಯವರಿಂದ ಇಂದು ನಾವು ನಮ್ಮ ಆಪ್ತರನ್ನು ಕಳೆದುಕೊಳ್ಳಬೇಕಾಗಿ ಬಂದಿದೆ.

ಇದಕ್ಕಿಂತಲೂ ಘೋರವೆನಿಸುವ ಮತ್ತೊಂದು ಸುದ್ದಿ ಪತ್ರಿಕೆಗಳಲ್ಲಿ ವರದಿಯಾಗಿದ್ದನ್ನು ನಾವು ಗಮನಿಸಿರಬಹುದು. ಅದೆಂದರೆ ಮಾರುಕಟ್ಟೆಯನ್ನು ಪ್ರವೇಶಿಸಿರುವ ನಕಲಿ ಔಷಧಗಳ ಬಗ್ಗೆ. ಕಳೆದ ಮೂರು ವರ್ಷದಲ್ಲಿ 26 ನಕಲಿ ಔಷಧ ಪತ್ತೆಯಾಗಿದೆ ಎಂಬುದು ಆ ಸುದ್ದಿ. ಮಾನವನ ದೇಹಕ್ಕೆ ಇದುವರೆಗೆ ಪೋಷಕಾಂಶದ ಆಹಾರದ ಬದಲಾಗಿ ಕಲಬೆರಕೆ ಆಹಾರ ಸೇರುತ್ತಿತ್ತು. ಅದರಿಂದ ಖಾಯಿಲೆಗಳು ಬರುತ್ತಿತ್ತು. ಇದೀಗ ಖಾಯಿಲೆಗಳನ್ನು ಗುಣಪಡಿಸಲು ರೋಗಿಗಳಿಗೆ ನೀಡುವ ಮಾತ್ರೆ ಸೇರಿ ಹಲವು ಔಷಧಗಳು ಕಳಪೆ ಎಂಬುದು ಪತ್ತೆಯಾಗಿದೆ ಎಂದು ಆ ಸುದ್ದಿ ಹೇಳುತ್ತದೆ. ಕಳೆದ ಮೂರು ಸಾಲಿನಲ್ಲಿ ರಾಜ್ಯಾದ್ಯಂತ 26 ಕಲಬೆರಕೆ ಔಷಧಗಳು ಪತ್ತೆಯಾಗಿದ್ದು, ಈ ಮೂಲಕ ರೋಗಿಗಳ ಜೀವಕ್ಕೆ ಸಂಚಕಾರ ತಂದೊಡ್ಡಿದೆ ಎಂಬ ಸುದ್ದಿ ನಿಜಕ್ಕೂ ಆಘಾತಕಾರಿಯಾದದ್ದು. ನಕಲಿ ಔಷಧಗಳ ಸರಬರಾಜು ಮಾಡಿರುವ 26 ಔಷಧಿ ಕಂಪನಿಗಳ ಪೈಕಿ ಕೇವಲ 6 ಕಂಪನಿಗಳ ವಿರುದ್ಧ ಮಾತ್ರ ಕ್ರಮ ಕೈಗೊಳ್ಳಲು ಸರ್ಕಾರದ ಅನುಮತಿ ಸಿಕ್ಕಿದೆ. ಆದರೆ, ಉಳಿದ ಕಂಪನಿಗಳ ವಿರುದ್ಧ ತನಿಖೆಗೆ ಇನ್ನೂ ಅನುಮತಿ ಸಿಕ್ಕಿಲ್ಲ ಎಂದು ಆ ವರದಿ ತಿಳಿಸಿದೆ. ಅನೇಕ ಕಡೆಗಳಲ್ಲಿ ಅವಧಿ ಮೀರಿದ ಔಷಧಗಳ ಸರಬರಾಜಾಗುತ್ತದೆ. ಆದರೆ ಅದು ಅವಧಿ ಮೀರಿದ್ದೆ ಎಂದು ಬಹಳಷ್ಟು ಜನರು ನೋಡುವುದಿಲ್ಲ. ಖಾಯಿಲೆ ವಾಸಿಯಾಗಲಿ ಎಂದು ತೆಗೆದುಕೊಳ್ಳುವ ಔಷಧಗಳಿಂದಲೇ ಖಾಯಿಲೆ ಬರುತ್ತದೆ. ಅದರಿಂದ ಬಂದ ಖಾಯಿಲೆ ಉಲ್ಬಣಿಸುತ್ತದೆ ಎಂದರೆ ಯಾರನ್ನು ನಂಬುವುದು, ಹೇಗೆ ಜೀವನ ಮಾಡುವುದು ಎಂಬ ಪ್ರಶ್ನೆ ಉದ್ಭವಿಸುತ್ತದೆ.

ದೇಹಕ್ಕೆ ಪೋಷಕ ಎಂದು ನಾವು ಖರೀದಿಸುವ ಅನೇಕ ವಸ್ತುಗಳು ಇಂದು ಕಲಬೆರಕೆಯಾಗುತ್ತಿದೆ. ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಹಾಲನ್ನು ಕೃತಕವಾಗಿ, ದೇಹಕ್ಕೆ ಘಾಸಿ ಮಾಡುವ ರಾಸಾಯನಿಕದಿಂದ ತಯಾರಿಸಲಾಗುತ್ತಿದೆ ಎಂಬ ಸುದ್ದಿ ಕೇಳಿದಾಗ ನಾವು ಮತ್ತಷ್ಟು ಅಸಹಾಯಕರಾಗುತ್ತೇವೆ. ಅದು ರಾಸಾಯನಿಕದಿಂದ ತಯಾರಾದುದೇ ಎಂಬುದು ನಮಗೆ ತಿಳಿಯುವುದಿಲ್ಲ. ಯಾವುದೋ ಕಂಪನಿಯ ಬ್ರಾಂಡ್ ಹೆಸರಿನಲ್ಲಿ ಇವು ಮಾರುಕಟ್ಟೆ ಪ್ರವೇಶಿಸುತ್ತವೆ. ಹಾಗೆಯೇ ಹೋಮ್‌ಮೇಡ್ ಚಾಕಲೇಟ್‌ಗಳು. ಟೀ ಪುಡಿ, ಕಾಫಿ ಪುಡಿ ಹಾಗೂ ಅಡುಗೆಗೆ ಬಳಸುವ ತೈಲಗಳಲ್ಲಿ ಕಲಬೆರಕೆ ಕಂಡುಬರುತ್ತಿದೆ. ಅನೇಕ ಕಡೆಗಳಲ್ಲಿ ಹಣ್ಣು ಆಕರ್ಷಕವಾದ ಬಣ್ಣ ಬರುವಂತಾಗಲಿ ಎಂದು ರಾಸಾಯನಿಕವನ್ನು ಇಂಜೆಕ್ಟ್ ಮಾಡುವುದು, ಕೊಳೆತ ಸೊಪ್ಪು, ತರಕಾರಿ ತಾಜಾವಾಗಿ ಕಾಣುವಂತೆ ಮಾಡಲು ರಾಸಾಯನಿಕಗಳ ಸಿಂಪಡನೆ ಇವೆಲ್ಲಾ ನಾವು ದಿನನಿತ್ಯ ಕೇಳುತ್ತಿರುವ, ಕಾಣುತ್ತಿರುವ ಸಂಗತಿಗಳಾಗುತ್ತವೆ. ವಿಶೇಷ ಎಂದರೆ ಸರ್ಕಾರಕ್ಕೆ ಸರಬರಾಜು ಮಾಡುವ ಅನೇಕ ಕಂಪನಿಗಳು ಕಲಬೆರಕೆ ವಸ್ತುಗಳನ್ನು ಸರಬರಾಜು ಮಾಡುತ್ತಿವೆ ಎಂಬ ಸುದ್ದಿ.

ಒಂದು ಅವಲೋಕನದಂತೆ ಈ ರೀತಿ ಕಲಬೆರಕೆ ಮಾಡಿ ಹಣ ಸಂಪಾದಿಸುವವರು ಅತ್ಯಂತ ಪ್ರಭಾವಿಗಳು. ಅವರ ಮೇಲೆ ಯಾವ ಕ್ರಮವೂ ಆಗುವುದಿಲ್ಲ. ಆದರೆ ಬಡಪಾಯಿ ಜನರು ಮಾತ್ರ ಇವರ ಧನದಾಹಕ್ಕೆ ಬಲಿಯಾಗುತ್ತಿದ್ದಾರೆ. ಒಳ್ಳೆಯ ಆಹಾರ ಸೇವಿಸಿದರೆ ಆರೋಗ್ಯ ಉತ್ತಮವಾಗುತ್ತದೆ ಎಂಬ ನಂಬಿಕೆಯೇ ಕುಸಿಯುವಂತೆ ಆಗುತ್ತಿದೆ. ಹಾಗೆಯೇ ಯಾವುದನ್ನು ಸೇವಿಸಬೇಕು, ಯಾವುದನ್ನು ಸೇವಿಸಬಾರದು ಎಂಬುದು ತಿಳಿಯದಂತಹ ಅಯೋಮಯ ಸ್ಥಿತಿ ನಿರ್ಮಾಣವಾಗುತ್ತಿದೆ.

ಇಂತಹ ಕಲಬೆರಕೆಯ ವಿರುದ್ಧ ಸರ್ಕಾರಗಳು ಕಠಿಣ ಕ್ರಮ ಜರುಗಿಸಬೇಕು ಎಂಬುದು ಎಲ್ಲರ ಅನಿಸಿಕೆಯಾದರೂ, ಅದನ್ನು ನಿರ್ವಹಿಸುವವರು ಪ್ರಭಾವಿಗಳಾಗಿರುವುದರಿಂದ ಅಂತಹ ಕ್ರಮವನ್ನು ನಿರೀಕ್ಷಿಸುವುದು ಸೂಕ್ತವೇ ಆಗುವುದಿಲ್ಲ. ಇಂತಹ ಸಮಯದಲ್ಲಿ ಆ ದೇವರೇ ನಮ್ಮನ್ನು ಕಾಪಾಡಬೇಕು ಎಂದು ಕೈಮುಗಿದು ಕೂರುವ ಅಸಹಾಯಕರು ನಾವಾಗುತ್ತಿದ್ದೇವೆ ಎಂಬುದು ನೋವಿನ ಸಂಗತಿ.

ಮಾನವೀಯ ಮೌಲ್ಯಗಳಿಂದಷ್ಟೇ ಜೀವನ ಸುಂದರವಾಗಿಸಲು ಸಾಧ್ಯ

ನಿವೃತ್ತ ಡಿಜಿಪಿ ಡಿ.ಎನ್.ಮುನಿಕೃಷ್ಣ ಅಭಿಮತ

ಮೈಸೂರು, ಮೇ 8– ಮಾನವೀಯ ಮೌಲ್ಯಗಳಿಂದ ಜೀವನವನ್ನು ಸುಂದರವಾಗಿಸಲು ಸಾಧ್ಯ ಎಂದು ನಿವೃತ್ತ ಐಜಿಪಿ ಡಿ.ಎನ್. ಮುನಿಕೃಷ್ಣ ಹೇಳಿದರು.

ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾ ಪೀಠಗಳ ಸಂಯುಕ್ತಾಶ್ರಯದಲ್ಲಿ ಊಟಿಯ ತೀಟಕಲ್‌ನ ಜೆಎಸ್‌ಎಸ್ ಪಬ್ಲಿಕ್ ಶಾಲಾ ಆವರಣದಲ್ಲಿ ಸಾರ್ವಜನಿಕರಿಗಾಗಿ ಆಯೋಜಿಸಿರುವ ಜೀವನೋತ್ಸಾಹ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮೊಳಗಿನ ಮಾನವೀಯತೆ ಜಾಗೃತಗೊಳ್ಳಲು ಜೀವನೋತ್ಸಾಹ ಶಿಬಿರಗಳು ಅಗತ್ಯ. ನಾವು ಜೀವನವನ್ನು ಒಳ್ಳೆಯ ರೀತಿಯಲ್ಲಿ ನಡೆಸಲು ಸದ್ಭಾವನೆ ಮುಖ್ಯ. ಪದವಿ, ಪುರಸ್ಕಾರಗಳಿಗಿಂತ ನಿಸ್ವಾರ್ಥ ಸೇವೆಯೇ ನಿಜವಾದ ಸಾಧನೆಯಾಗಿದೆ. ಆಧುನಿಕ ಯುಗದಲ್ಲಿ ಜನರು ಜೀವನೋತ್ಸಾಹ ಕಳೆದುಕೊಳ್ಳುತ್ತಿದ್ದಾರೆ. ಇಂತಹ ಶಿಬಿರಗಳಿಂದ ಉತ್ಸಾಹ ತುಂಬಲು ಸಾಧ್ಯ. ಸುತ್ತೂರು ಶ್ರೀಗಳವರು ದೂರದೃಷ್ಟಿಯಿಂದ ಶಿಬಿರವನ್ನು ಆಯೋಜಿಸಿರುವುದು ನಿಮ್ಮೆಲ್ಲರ ಸೌಭಾಗ್ಯ ಎಂದು ಹೇಳಿದರು.



ಊಟಿ ತೀಟಕಲ್‌ನ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಆವರಣದಲ್ಲಿ ಸಾರ್ವಜನಿಕರಿಗಾಗಿ ಆಯೋಜಿಸಿರುವ ಜೀವನೋತ್ಸಾಹ ಶಿಬಿರವನ್ನು ನಿವೃತ್ತ ಐಜಿಪಿ ಡಿ.ಎನ್. ಮುನಿಕೃಷ್ಣ ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸುತ್ತಿರುವುದು. ಶ್ರೀಮತಿ ಪ್ರೇಮ ಸೋಮಸುಂದರಂ, ಕೆ.ಸಿ. ವಿರೂಪಾಕ್ಷ, ಕರ್ನಲ್ ಪಿ.ಎಲ್. ರಾಘವೇಂದ್ರ ಹಾಗೂ ಶಿಬಿರಾರ್ಥಿಗಳನ್ನು ಕಾಣಬಹುದು.

ಜವಳಿ, ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವರ ಆಪ್ತ ಕಾರ್ಯದರ್ಶಿ ಕೆ.ಸಿ.ವಿರೂಪಾಕ್ಷ, ನಮ್ಮ ಬದುಕು ಪ್ರಾಮಾಣಿಕವಾಗಿರಬೇಕು. ಮಾಡುವ ಕೆಲಸಗಳಲ್ಲಿ ಆಸಕ್ತಿ ಮತ್ತು ಶ್ರದ್ಧೆ ಇರಬೇಕು. ವೈಯಕ್ತಿಕ ಬದುಕು ಆದರ್ಶವಾಗಿದ್ದು, ಎಲ್ಲರನ್ನೂ ಪ್ರೀತಿಸುವ ಗುಣವನ್ನು ಮತ್ತು ಸಹಜ ಬದುಕನ್ನು ರೂಢಿಸಿಕೊಳ್ಳಲು ಶರಣರ ಚಿಂತನೆಗಳು ಸ್ಫೂರ್ತಿಯಾಗಿವೆ ಎಂದು ತಿಳಿಸಿದರು.

ಭಾರತೀಯ ಸೇನೆಯ ಸೇನಾ ಪದಕ ಪುರಸ್ಕೃತರಾದ ಕರ್ನಲ್ ಪಿ.ಎಲ್ ರಾಘವೇಂದ್ರ ಇಂದಿನ ಜನರ ಮನಸ್ಥಿತಿ ಚಂಚಲವಾಗುತ್ತಿದೆ. ಪೋಷಕರು ಮಕ್ಕಳ ಕೈಯಲ್ಲಿ ಮೊಬೈಲ್ ಫೋನ್ ಕೊಟ್ಟು ಅವರ ಬೌದ್ಧಿಕತೆಗೆ ವಿಷವನ್ನು ನೀಡಲಾಗುತ್ತಿದೆ. ಮಕ್ಕಳಲ್ಲಿ ತಾಳ್ಮೆ ಕಡಿಮೆಯಾಗುತ್ತಿದ್ದು, ಏಕಾಗ್ರತೆ ಕಳೆದುಕೊಳ್ಳುತ್ತಿದ್ದಾರೆ. ಮಕ್ಕಳಲ್ಲಿ ಧಾರ್ಮಿಕ ಮತ್ತು ಆಧ್ಯಾತ್ಮಿಕ ಪ್ರಜ್ಞೆಯನ್ನು ಬೆಳೆಸಬೇಕು. ಮನುಷ್ಯ ಮತ್ತು ಪ್ರಕೃತಿ ನಡುವಿನ ಸಂಬಂಧ ಗಾಢವಾಗಿದ್ದಲ್ಲಿ ದೈವತ್ವ ಪ್ರಾಪ್ತಿಯಾಗುತ್ತದೆ ಎಂದು ತಿಳಿಸಿದರು.

ಶಿವಮೊಗ್ಗ ಬಸವ ಮಂದಿರದ ಅಧ್ಯಕ್ಷ ಡಾ.ಶ್ರೀ ಬಸವ ಮರುಳಸಿದ್ದ ಸ್ವಾಮೀಜಿ, ಭಾರತೀಯ ತತ್ವಜ್ಞಾನ ಮತ್ತು ಯೋಗ ಪರಂಪರೆಯಲ್ಲಿ ಯೋಗಗಳ ರಾಜನೆಂದು ಶಿವಯೋಗವನ್ನು ಕರೆಯಲಾಗಿದೆ. ಇದು ಕರ್ಮಯೋಗ, ಹಠಯೋಗ ಮತ್ತು ಭಕ್ತಿಯೋಗಗಳ ಸಮನ್ವಯವಾಗಿದೆ. ಶಿವಯೋಗವು ಅಂತರಂಗದ ದೇವನನ್ನು ಇಷ್ಟಲಿಂಗದ ಮೂಲಕ ಸಾಕ್ಷಾತ್ಕರಿಸಿಕೊಳ್ಳುವ ಅತ್ಯುನ್ನತ ಯೋಗ ಮಾರ್ಗವಾಗಿದೆ ಎಂದರು.

ಶಿಕ್ಷಣ ತಜ್ಞರು ಹಾಗೂ ವಾಗ್ಮಿ ಮಹೇಶ್ ಮಾಶಾಳ, ನಾವು ಕಷ್ಟದ ಸಂದರ್ಭಗಳಲ್ಲಿ, ಕೋಪ ಅಥವಾ ಅಸಮಾಧಾನವನ್ನು ತೋರಿಸಬಾರದು. ಸಮಸ್ಯೆಗಳನ್ನು ಸ್ಥಿರ ಹಾಗೂ ಶಾಂತಿಯುತ ಮನಸ್ಸಿನಿಂದ ಎದುರಿಸಬೇಕು. ಯಾವುದೇ ಸಂದರ್ಭದಲ್ಲೂ ತಾಳ್ಮೆ ಕಳೆದುಕೊಳ್ಳದೆ ಬದುಕುವುದೇ ನಿಜವಾದ ಸಹನಶೀಲತೆ ಎಂದು ತಿಳಿಸಿದರು.

ಶಿಬಿರದಲ್ಲಿ ಬೆಳಿಗ್ಗೆ ಸಾಮೂಹಿಕ ಪ್ರಾರ್ಥನೆ, ಯೋಗಾಭ್ಯಾಸ– ಧ್ಯಾನ ಹಾಗೂ ಸಂಜೆ ದೇಸಿ ಆಟಗಳಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದರು. ಸಂಜೆ ಪ್ರಾರ್ಥನೆ ನಂತರ ಶಿಬಿರಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮ ನೀಡಿದರು. ಶಿಬಿರದಲ್ಲಿ ಮೈಸೂರು, ಬೆಂಗಳೂರು, ಚಾಮರಾಜನಗರ, ತುಮಕೂರು, ಚಿಕ್ಕಮಗಳೂರು, ಶಿವಮೊಗ್ಗ, ರಾಯಚೂರು, ಬಾಗಲಕೋಟೆ, ಗದಗ, ಬೆಳಗಾವಿ, ಗುಲ್ಬರ್ಗ, ಬೀದರ್ ಹಾಗೂ ವಿಜಯಪುರ ಜಿಲ್ಲೆಗಳಿಂದ 235 ಶಿಬಿರಾರ್ಥಿಗಳು ಪಾಲ್ಗೊಂಡಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರಲ್ಲಿ ಬಹುಸೇವಾ ಪ್ಲಾಟ್‌ಫಾರ್ಮ್ 'ಹೇಬಡಿ' ಬಿಡುಗಡೆ

ಮುಳಬಾಗಿಲು ಶಾಸಕ ಸಮೃದ್ಧಿ ಮಂಜುನಾಥ್‌ರಿಂದ ಚಾಲನೆ



ಮುಳಬಾಗಿಲು ಶಾಸಕ ಸಮೃದ್ಧಿ ಮಂಜುನಾಥ್ ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಮೈಸೂರು, ಮೇ 8(ವಿವಿಹೆಚ್)– ದೈನಂದಿನ ಡಿಜಿಟಲ್ ಅನುಭವಗಳನ್ನು ಸರಳಗೊಳಿಸುವ ಬುದ್ಧಿವಂತ ಬಹು–ಸೇವಾ ಪ್ಲಾಟ್‌ಫಾರ್ಮ್ ಹೇಬಡಿ (HeiBuddy AI)ಯ ಆಲ್ಫಾ ಆವೃತ್ತಿಯನ್ನು ಬೆಂಗಳೂರು ಮೂಲದ ಟೆಕ್ನಾಲಜಿ ಕಂಪನಿಯಾದ ಯುಗಾಸೈಸ್ ಸಾಫ್ಟ್‌ವೇರ್ ಮೈಸೂರಿನಲ್ಲಿ ಶುಕ್ರವಾರ ಸಾಫ್ಟ್ ಲಾಂಚ್ ಮಾಡಿತು.

ಹೇಬಡಿ ಎಐ ಆ್ಯಪ್ ಬಿಡುಗಡೆ ಮಾಡಿ ಮಾತನಾಡಿದ ಮುಳಬಾಗಿಲು ಶಾಸಕ ಸಮೃದ್ಧಿ ಮಂಜುನಾಥ್, ಪ್ರಚಲಿತ ವಿದ್ಯಾಮಾನದಲ್ಲಿ ತಂತ್ರಜ್ಞಾನಕ್ಕೆ ಹೊಂದಿಕೊಂಡಂತೆ ಬದುಕಬೇಕು. ಮೊಬೈಲ್ ಬಂದ ಮೇಲೆ ಎಲ್ಲವೂ ಬೆರಳ ತುದಿಯಲ್ಲೇ ಸಿಗುತ್ತಿದ್ದು, ಅವುಗಳನ್ನು ಉತ್ತಮ ಕೆಲಸಗಳಿಗೆ ಬಳಸಿಕೊಳ್ಳಬೇಕು ಎಂದರು.

ಹೇಬಡಿ ಆ್ಯಪ್ ಬಹಳ ವಿಭಿನ್ನವಾಗಿ ಅಭಿವೃದ್ಧಿಗೊಂಡಿದೆ. ಇಂದಿನ ದಿನಮಾನದಲ್ಲಿ ಜನರು ಸುಲಭವಾಗಿರುವುದನ್ನು ಹುಡುಕಿಕೊಂಡು ಹೋಗುತ್ತಿದ್ದಾರೆ. ಈ ಸಮಯದಲ್ಲಿ 2 ವರ್ಷದಿಂದ ಶ್ರಮಪಟ್ಟು ಉತ್ತಮವಾಗಿ ಆ್ಯಪ್ ಕಟ್ಟುಕೊಟ್ಟಿದ್ದಾರೆ. ಮೈಸೂರು ಹೆಮ್ಮೆಯ ನಗರಿ ಇಲ್ಲಿ ಯಾವುದೇ ಕೆಲಸ ಪ್ರಾರಂಭಿಸಲು ಸೂಕ್ತವಾದ ಸ್ಥಳ ಎಂದು ತಿಳಿಸಿದರು.

ಹೇಬಡಿ ಫೌಂಡರ್ ಪ್ರೀತಂ ಮಾತನಾಡಿ, ಅನೇಕ ಆ್ಯಪ್‌ಗಳ ನಡುವೆ ಸಿಲುಕಿಕೊಂಡಿರುವ ಜನರ ದೈನಂದಿನ ಸಮಸ್ಯೆಗೆ ಪರಿಹಾರವಾಗಿ ಏಕೀಕೃತ ಡಿಜಿಟಲ್ ವೇದಿಕೆ ಅಗತ್ಯವಾಗಿದೆ. ಎಲ್ಲದಕ್ಕೂ ಮೊಬೈಲ್ ಗೀಳಿಗೆ ಜನರು ಬಲಿಯಾಗಿದ್ದು, ಇದು ಕೇವಲ ಸಣ್ಣ ಸಮಸ್ಯೆಯಲ್ಲ. ಜನರು ಪ್ರತಿದಿನ ಅನೇಕ ಸೇವೆಗಳು, ನಿರಂತರ ಬದಲಾವಣೆ ಮತ್ತು ಯಾವ ಆ್ಯಪ್, ಯಾವ ಸೇವೆಗೆ ಎಂಬುದನ್ನು ನೆನಪಿಡುವ ಒತ್ತಡ ಜನರ ಮೇಲೆಯೇ ಬೀಳುತ್ತಿದೆ ಎಂದು ವಿವರಿಸಿದರು.

ಈ ಎಐ ಆ್ಯಪ್ ಅನ್ನು ಅನೇಕ ಸೇವೆಗಳನ್ನು ಒಂದೇ ವೇದಿಕೆಯಲ್ಲಿ ಒದಗಿಸುವ ವ್ಯವಸ್ಥೆಯಾಗಿ ರೂಪಿಸಲಾಗಿದೆ. ಧ್ವನಿ ಆಧಾರಿತ ತಂತ್ರಜ್ಞಾನಕ್ಕೆ ಹೆಚ್ಚು ಒತ್ತು ನೀಡಲಾಗಿದೆ. ಮಾನವನಿಗೆ ಅತ್ಯಂತ ಸಹಜ ವಾದ ಸಂವಹನ ಮಾಧ್ಯಮ ಧ್ವನಿಯೇ ಆಗಿದೆ ಎಂದರು.

ಈ ವೇಳೆ ಟೈಕಾನ್ ಚೇರ್‌ಪರ್ಸನ್ ರವಿ ಕೆವಲೂರು, ಭೂಮಿಪುತ್ರ ಚಂದನ್, ಲೇ ರುಚಿ ಗ್ರೂಪ್ ಆಫ್ ಹೋಟೆಲ್ಸ್‌ನ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಬಿ.ಮಂಜುನಾಥ್, ವಿದ್ಯಾವರ್ಧಕ ಕಾಲೇಜು ಪ್ರಾಂಶುಪಾಲ ಸದಾಶಿವ ಗೌಡ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಆ್ಯಪ್‌ನ ವಿಶೇಷತೆಗಳು

ಎಐ ಧ್ವನಿ–ಆಧಾರಿತ ಪ್ಲಾಟ್‌ಫಾರ್ಮ್ ಇದಾಗಿದ್ದು, ಒಂದೇ ಆಪ್ ಇಂಟರ್‌ಫೇಸ್ ಮೂಲಕ ಹಲವು ದೈನಂದಿನ ಸೇವೆಗಳಿಗೆ ಏಕೀಕೃತ ಪ್ರವೇಶ ಪಡೆಯಬಹುದಾಗಿದೆ. ಒಂದೇ ಸಂಭಾಷಣಾ ಇಂಟರ್‌ಫೇಸ್ ಮೂಲಕ ಹಲವಾರು ದೈನಂದಿನ ಸೇವೆಗಳ ಪ್ರವೇಶವನ್ನು ಏಕೀಕರಿಸಲು ವಿನ್ಯಾಸಗೊಳಿಸಲಾದ ಬುದ್ಧಿವಂತ, ಧ್ವನಿ–ಆಧಾರಿತ ಅಗ್ರಿಗೇಟರ್ ಪ್ಲಾಟ್‌ಫಾರ್ಮ್ ಇದಾಗಿದೆ. ಇದರಲ್ಲಿ ಪ್ರಮುಖವಾಗಿ ಸಾರಿಗೆ ಮತ್ತು ಮೊಬಿಲಿಟಿ, ಆಹಾರ ಆರ್ಡರ್ ಮತ್ತು ಶೋಧ (ಸರ್ಚ್), ಆರೋಗ್ಯ ಸೇವೆ ಮತ್ತು ಯೋಗಕ್ಷೇಮ ಸಹಾಯ, ವ್ಯಾಪಾರ ಮತ್ತು ರಿಟೇಲ್ ಅನುಭವಗಳು, ಪಾವತಿಗಳು ಮತ್ತು ಡಿಜಿಟಲ್ ವಹಿವಾಟುಗಳು, ಮನೆ ಸೇವೆಗಳು ಮತ್ತು ಜೀವನಶೈಲಿ ಅಗತ್ಯಗಳು, ಮತ್ತು ಬುದ್ಧಿವಂತ ಸಮನ್ವಯದಿಂದ ಪ್ರಯೋಜನ ಪಡೆಯುವ ಇತರ ದೈನಂದಿನ ವಿಭಾಗಗಳು ಈ ಆಪ್‌ನಲ್ಲಿ ಪ್ರಮುಖವಾಗಿರಲಿವೆ.

ಸಾರ್ವಜನಿಕ ತಿಳುವಳಿಕೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರು, ಇದೇ ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು, ಹೋಣಕೆರೆ ಹೋಬಳಿ, ತಿರುಗನಹಳ್ಳಿ ಗ್ರಾಮದ ಮನೆ ನಂ.130ರಲ್ಲಿ ವಾಸವಾಗಿರುವ ಟಿ.ಎಂ.ನಾರಾಯಣಗೌಡ ರವರ ಮಗನಾದ ಶ್ರೀ ಟಿ.ಎನ್. ಚಂದ್ರಶೇಖರ್ ರವರು, ಇದೇ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ತಳೂರು ಗ್ರಾಮದ (ಹಳೆ ಸರ್ವೆ ನಂ. 168) ಸರ್ವೆ ನಂ. 22 ರಲ್ಲಿರುವ ಒಟ್ಟು ವಿಸ್ತೀರ್ಣ 4 ಎಕರೆ 14 ಗುಂಟೆ ಖುಷ್ಕಿ ಜಮೀನು ಇದರ ಪೂರ್ವಕ್ಕೆ ನೀರು ಹರಿಯುವ ಹಳ್ಳ, ಪಶ್ಚಿಮಕ್ಕೆ: ಸೋಮಣ್ಣ ಬಿನ್ ಮರಿದೇವನಾಯಕರ ಜಮೀನು, ಉತ್ತರಕ್ಕೆ: ಪ್ರಕಾಶ ಬಿನ್ ಪುಟ್ಟಮಾದಪ್ಪ ಜಮೀನು ಹಾಗೂ ದಕ್ಷಿಣಕ್ಕೆ: ಮುಖ್ಯರಸ್ತೆ, ಈ ಜಮೀನಿಗೆ ಸಂಬಂಧಿಸಿದಂತೆ ಅದರ ಮೂಲ ಮಾಲೀಕರಾದ ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಉದ್ಬೂರು ಗ್ರಾಮ, 5ನೇ ಬ್ಲಾಕ್, ಮನೆ ನಂ.1255 ರಲ್ಲಿ ವಾಸವಾಗಿರುವ ಲೇಟ್ ಹನುಮನಾಯಕ ಉರುಫ್ ಮಂಚನಾಯಕರವರ ವಾರಸುದಾರರಾದ ತಿಮ್ಮಯ್ಯ ಹಾಗೂ ಅವರ ಕುಟುಂಬದವರಿಂದ ದಿನಾಂಕ: 30–08–2021 ರಂದು ಮೈಸೂರಿನ ಪಶ್ಚಿಮ ಉಪನೋಂದವಣಾಧಿಕಾರಿಗಳ ಮುಂದೆ ಈ ಮೇಲೆ ಹೇಳಿದ ಸ್ವತ್ತಿನ ಸಂಬಂಧ ನೋಂದಾಯಿತ ಕ್ರಯದ ಕರಾರು ಅದರ ನೋಂದಣಿ ಸಂಖ್ಯೆ.ಎಂ.ವೈ.ಡಬ್ಲ್ಯು–1–04756/2021–22 ರಂತೆ ನೋಂದಾಯಿಸಿದ್ದು, ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ಈ ಮೇಲೆ ಹೇಳಿದ ವ್ಯಕ್ತಿಗಳು ನಮ್ಮ ಕಕ್ಷಿದಾರರೊಂದಿಗೆ ನೋಂದಾಯಿತ ಕ್ರಯದ ಕರಾರು ಮಾಡಿಕೊಂಡಿದ್ದು, ಹಾಲಿ ನೋಂದಾಯಿತ ಕ್ರಯಪತ್ರವನ್ನು ನಮ್ಮ ಕಕ್ಷಿದಾರರ ಹೆಸರಿಗೆ ನೋಂದಾಯಿಸಿ ಕೊಡುವ ಬದಲು ಮೂರನೇ ವ್ಯಕ್ತಿಗಳಿಗೆ ಮಾರಾಟ ಮಾಡುವ ಪ್ರಯತ್ನಗಳನ್ನು ನಡೆಸುತ್ತಿರುತ್ತಾರೆ ಎಂಬ ಮಾಹಿತಿಯೂ ನಮ್ಮ ಕಕ್ಷಿದಾರರಿಗೆ ಅವರ ಬಲ್ಲಮೂಲಗಳಿಂದ ತಿಳಿದು ಬಂದಿರುವುದರಿಂದ ನಮ್ಮ ಕಕ್ಷಿದಾರರ ಹೆಸರಿನಲ್ಲಿ ಈ ಮೇಲೆ ಹೇಳಿದ ಸ್ವತ್ತಿಗೆ ಸಂಬಂಧಿಸಿದಂತೆ ಈ ಮೇಲೆ ಹೇಳಿದ ನೋಂದಾಯಿತ ಕ್ರಯದ ಕರಾರು ಹಾಲಿ ಚಾಲ್ತಿಯಲ್ಲಿರುವ ಕಾರಣ ಸಾರ್ವಜನಿಕರು ಈ ಮೇಲೆ ಹೇಳಿದ ವ್ಯಕ್ತಿಗಳೊಡನೆ ಕ್ರಯ, ಭೋಗ್ಯ, ಅಡಮಾನ, ಬಾಡಿಗೆ ಇನ್ನಿತರೆ ಯಾವುದೇ ಪರಭಾರೆ ಕ್ರಮಗಳನ್ನು ಕೈಗೊಳ್ಳಬಾರದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಸಹಿ/–N. Mahadevaswamy
ADVOCATE/LEGAL ADVISOR
No. 376/A, 12th cross, Ramakrishna Nagara "G" block, Mysore-22.
Mobile-9448038689

ದಿನಾಂಕ: 09–05–2026, ಸ್ಥಳ: ಮೈಸೂರು

ಸಾರ್ವಜನಿಕ ತಿಳುವಳಿಕೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರು, ಇದೇ ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು, ಹೋಣಕೆರೆ ಹೋಬಳಿ, ತಿರುಗನಹಳ್ಳಿ ಗ್ರಾಮದ ಮನೆ ನಂ.130ರಲ್ಲಿ ವಾಸವಾಗಿರುವ ಟಿ.ಎಂ.ನಾರಾಯಣಗೌಡ ರವರ ಮಗನಾದ ಶ್ರೀ ಟಿ.ಎನ್. ಚಂದ್ರಶೇಖರ್ ರವರು, ಇದೇ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ತಳೂರು ಗ್ರಾಮದ ಸರ್ವೆ ನಂ. 38/1 ರಲ್ಲಿ 1 ಎಕರೆ 26 ಗುಂಟೆ, ಸರ್ವೆ ನಂ. 38/2 ರಲ್ಲಿ 1 ಎಕರೆ 23 ಗುಂಟೆ, ಸರ್ವೆ ನಂ. 38/3 ರಲ್ಲಿ 1 ಎಕರೆ 37 ಗುಂಟೆ, ಒಟ್ಟು 5 ಎಕರೆ 6 ಗುಂಟೆ ವಿಸ್ತೀರ್ಣದ ಸ್ವತ್ತು ಇದರ ಪೂರ್ವಕ್ಕೆ ಲೇಟ್. ವಾರಿಕುಂಡಯ್ಯನ ಕರಿಯಂತ್ಯುರವರ ಜಮೀನು, ಪಶ್ಚಿಮಕ್ಕೆ: ದತ್ತಸಾರ್‌ರವರ ಜಮೀನು, ಉತ್ತರಕ್ಕೆ: ಲೇಟ್.ಯಳವನಾಯಕರವರ ಜಮೀನು ಹಾಗೂ ದಕ್ಷಿಣಕ್ಕೆ: ಲೇಟ್. ಮರಿದೇವನಾಯಕರವರ ಜಮೀನು, ಈ ಜಮೀನಿಗೆ ಸಂಬಂಧಿಸಿದಂತೆ ಅದರ ಮೂಲ ಮಾಲೀಕರಾದ ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಉದ್ಬೂರು ಗ್ರಾಮ, 2ನೇ ಬ್ಲಾಕ್, ಮನೆ ನಂ.319 ರಲ್ಲಿ ವಾಸವಾಗಿರುವ ಲೇಟ್ ಕುಳ್ಳನಾಯಕರವರ ಮಗ ಶ್ರೀ. ಚಿಕ್ಕಣ್ಣ ಹಾಗೂ ಅವರ ಕುಟುಂಬದವರಿಂದ ದಿನಾಂಕ:11–04–2022 ರಂದು ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ಈ ಮೇಲೆ ಹೇಳಿದ ವ್ಯಕ್ತಿಗಳು ನಮ್ಮ ಕಕ್ಷಿದಾರರೊಂದಿಗೆ ಕ್ರಯದ ಕರಾರು ಮಾಡಿಕೊಂಡಿದ್ದು, ಹಾಲಿ ನೋಂದಾಯಿತ ಕ್ರಯಪತ್ರವನ್ನು ನಮ್ಮ ಕಕ್ಷಿದಾರರ ಹೆಸರಿಗೆ ನೋಂದಾಯಿಸಿ ಕೊಡುವ ಬದಲು ಮೂರನೇ ವ್ಯಕ್ತಿಗಳಿಗೆ ಮಾರಾಟ ಮಾಡುವ ಪ್ರಯತ್ನಗಳನ್ನು ನಡೆಸುತ್ತಿರುತ್ತಾರೆ ಎಂಬ ಮಾಹಿತಿಯೂ ನಮ್ಮ ಕಕ್ಷಿದಾರರಿಗೆ ಅವರ ಬಲ್ಲಮೂಲಗಳಿಂದ ತಿಳಿದು ಬಂದಿರುವುದರಿಂದ ನಮ್ಮ ಕಕ್ಷಿದಾರರ ಹೆಸರಿನಲ್ಲಿ ಈ ಮೇಲೆ ಹೇಳಿದ ಸ್ವತ್ತಿಗೆ ಸಂಬಂಧಿಸಿದಂತೆ ಈ ಮೇಲೆ ಹೇಳಿದ ಕ್ರಯದ ಕರಾರು ಹಾಲಿ ಚಾಲ್ತಿಯಲ್ಲಿರುವ ಕಾರಣ ಸಾರ್ವಜನಿಕರು ಈ ಮೇಲೆ ಹೇಳಿದ ವ್ಯಕ್ತಿಗಳೊಡನೆ ಕ್ರಯ, ಭೋಗ್ಯ, ಅಡಮಾನ, ಬಾಡಿಗೆ ಇನ್ನಿತರೆ ಯಾವುದೇ ಪರಭಾರೆ ಕ್ರಮಗಳನ್ನು ಕೈಗೊಳ್ಳಬಾರದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಸಹಿ/–N. Mahadevaswamy
ADVOCATE/LEGAL ADVISOR
No. 376/A, 12th cross, Ramakrishna Nagara "G" block, Mysore-22.
Mobile-9448038689

ದಿನಾಂಕ: 09–05–2026, ಸ್ಥಳ: ಮೈಸೂರು

PUBLIC NOTICE

Notice is hereby Issued to the General Public that Suresh S S/O. Sri. Somanna residing at # 10, 2nd Cross, JSS School Road, Raghavendra Nagara, Mysuru has agreed to Sell the Schedule Property to my client/s.

Any person/s asserting any right, title, interest or claim, pending litigation or demand of any nature in or upon the schedule property or any part thereof, the same may be brought to the notice of the undersigned along with documentary evidence at # L-50/2A, 1st Floor, Ashoka Road, Mysuru -570 001 within SEVEN (07) days from the date of this Public Notice, failing which such claim/s shall be considered to have been waived and/or given up and my client/s shall be entitled to complete the sale transaction that there are no claims of whatsoever nature with respect of the schedule property.

SCHEDULE

ALL THAT THE DRY LAND PIECE AND PARCEL OF BEARING SURVEY NO. 267/7, MEASURING 23 GUNTAS, SITUATED AT TUMBALA VILLAGE, KASABA HOBLI, T. N. PURA TALUK AND BOUNDED ON:- EAST BY : LAND BELONGING TO DASAPPA & SANNEGOWDA, WEST BY : ROAD, SOUTH BY : NALA RAOD, NORTH BY: LAND BELONGING TO KARIGOWDA.

Sad/- M. SANJAY JAIN
B.B.M., LL.B., CCL, CMJFS,
ADVOCATE
#L, 50/2A, 1 Floor, Ashoka Road
MYSORE-570001
email: msj186@yahoo.co.in
Mobile: 93414-64636
Place: Mysuru, Date: 08/05/2026

ಶ್ರೀರಂಗಪಟ್ಟಣ ವ್ಯಾಪ್ತಿಯಲ್ಲಿ ಕೈಗಾರಿಕೆ ಸ್ಥಾಪನೆ ಸಂಬಂಧ ಕುಮಾರಸ್ವಾಮಿ ಜೊತೆ ಚರ್ಚಿಸುವೆ

ಶ್ರೀರಂಗಪಟ್ಟಣ: ನಮ್ಮ ಕ್ಷೇತ್ರದಲ್ಲಿ ಕೈಗಾರಿಕೆ ಸ್ಥಾಪಿಸಲು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಆಸಕ್ತಿ ತೋರಿದರೆ ಅವರ ಜತೆ ಮುಕ್ತವಾಗಿ ಮಾತನಾಡುತ್ತೇನೆ ಎಂದು ಶಾಸಕ ರಮೇಶ ಬಂಡಿಸಿದ್ದೇಗೌಡ ತಿಳಿಸಿದರು.

ತಾಲೂಕಿನ ಮಹದೇವಪುರದಲ್ಲಿ 24 ಕೋಟಿ ವೆಚ್ಚದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ಕಟ್ಟಡ ನಿರ್ಮಿಸುವ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು. ಹೆಚ್.ಡಿ.ಕುಮಾರಸ್ವಾಮಿ ಕೈಗಾರಿಕೆಗೆ ಸ್ಥಾಪನೆ ಸಂಬಂಧ ಜಮೀನು ಇತರ ಮೂಲಭೂತ ಸೌಕರ್ಯಗಳ ಲಭ್ಯತೆ ಬಗ್ಗೆ ಮಾತನಾಡಲು ಉತ್ಸುಕತೆ ತೋರಿದರೆ ಅವರ ಜತೆ ಮುಕ್ತವಾಗಿ ಚರ್ಚೆ ನಡೆಸುತ್ತೇನೆ. ನಾನೇನೂ ಅವರ ಜತೆ ಜಗಳವಾಡಿಲ್ಲ. ಈಗಲೂ ವಿಶ್ವಾಸದಿಂದ ಇದ್ದೇನೆ ಎಂದರು.

ಮಹದೇವಪುರ ಬಳಿ ನಿರ್ಮಿಸುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕಟ್ಟಡ ನಿರ್ಮಾಣ ಕಾರ್ಯವನ್ನು ಒಂದು ವರ್ಷದಲ್ಲಿ ಅರ್ಧದಷ್ಟಾದರೂ ಮುಗಿಸಬೇಕು. ಈ ಶಾಲೆ ಶ್ರೀರಂಗಪಟ್ಟಣದಲ್ಲಿ 2007ರಿಂದ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದೆ. ಸರ್ಕಾರ ಮಹದೇವಪುರ ಬಳಿ ಜಾಗ ನೀಡುವ ಜತೆಗೆ ಅನುದಾನವನ್ನೂ ಮಂಜೂರು ಮಾಡಿದೆ. ಇಂದಿನಿಂದಲೇ ಕಾಮಗಾರಿ ಆರಂಭಿಸಬೇಕು. ಮಹದೇವಪುರ ಗ್ರಾಮಕ್ಕೆ ಕೆಪಿಎಸ್ ಶಾಲೆ ಕೂಡ ಮಂಜೂರಾಗಿದ್ದು, ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಆರಂಭವಾಗಲಿದೆ ಎಂದು ಅವರು ತಿಳಿಸಿದರು.

ಕ್ಷೇತ್ರದಲ್ಲಿ ವಿದ್ಯುತ್ ಸಮಸ್ಯೆ ನೀಗಿಸಲು ಮೈಸೂರು ಕಡೆಯಿಂದ ಹೆಚ್ಚುವರಿ ವಿದ್ಯುತ್ ಪಡೆಯಲು ನಿರ್ಧರಿಸಲಾಗಿದೆ. ಈ ಸಂಬಂಧ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವಗುಪ್ತಾ ಅವರ ಜತೆ ಮಾತನಾಡಿದ್ದೇನೆ. ತರೀಪುರ ವಿದ್ಯುತ್ ಉಪ ಕೇಂದ್ರಕ್ಕೆ ಸಂಪರ್ಕ ಮಾರ್ಗ ಕಲ್ಪಿಸಲು ಉದ್ದೇಶಿಸಲಾಗಿದೆ ಎಂದರು.

ಜಿಲ್ಲೆಯಲ್ಲಿ ಸದ್ಯ ಕುಡಿಯಲು ಹಾಗೂ ಕೃಷಿಗೆ ನೀರಿನ ಸಮಸ್ಯೆ ಇಲ್ಲ ಎಂದ ಅವರು, ಉಪ ಚುನಾವಣೆಯಲ್ಲಿ ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆದ್ದಿರುವುದು ಸರ್ಕಾರದ ಮೇಲೆ ಜನರು ಇಟ್ಟಿರುವ ವಿಶ್ವಾಸದ ಸಂಕೇತ ಎಂದರು. ಮಹದೇವಪುರ ಸರ್ಕಾರಿ ಪ್ರೌಢಶಾಲೆಯ ಪ್ರತಿಭಾವಂತ ವಿದ್ಯಾರ್ಥಿನಿ ಸಾನಿಕ ಅವರನ್ನು ಅಭಿನಂದಿಸಿದರು.

ವಸತಿ ಶಾಲೆ ಪ್ರಾಂಶುಪಾಲ ಮುರಳೀಧರ್ ಪ್ರಾಸ್ತಾವಿಕ ಮಾತುಗಳಾಡಿದರು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಮಂಜುಳಾ.ಕೆ, ತಾಲೂಕು ಅಧಿಕಾರಿ ಸುನೀತ ಗುಳ್ಳಪ್ಪನವರ್, ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ಚಂದ್ರ, ಅಭಿಲಾಷ್ ಡಿ.ಎಂ, ಬಸವರಾಜು, ಕಾಳೇಗೌಡ, ಗ್ರಾ.ಪಂ. ಪಿಡಿಓ ನಾಗೇಂದ್ರ, ಜಗದೀಶ್, ರವಿಕುಮಾರ್ ಇದ್ದರು.



ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದ ಶಾಸಕ ರಮೇಶ್ ಬಂಡಿಸಿದ್ದೇಗೌಡ.

ಮಳೆಗಾಗಿ ತಿಂಗಳ ಮಾಮನ ಮದುವೆ

ಗಂಡು ಮಕ್ಕಳಿಬ್ಬರನ್ನು ವಧು-ವರರಾಗಿ ಶೃಂಗರಿಸಿ ಮದುವೆ ಮಾಡಿ ಪ್ರಾರ್ಥನೆ

ಕಿಕ್ಕೇರಿ: ಹೋಬಳಿಯ ಗಡಿಭಾಗದ ಗೂಡೇಹೊಸಹಳ್ಳಿ ಗ್ರಾಮದಲ್ಲಿ ಮಳೆಗಾಗಿ ವರುಣ ದೇವರನ್ನು ಪ್ರಾರ್ಥಿಸಿ ರೈತಾಪಿ ಜನತೆ ತಿಂಗಳ ಮಾಮನಾದ ಚಂದಿರ ಮಾಮನ(ಸೂರ್ಯ–ಚಂದ್ರ) ಮದುವೆ ನಡೆಸಿದರು.

ಈ ರೀತಿಯ ಮದುವೆ ಮಾಡುವುದರಿಂದ ಸಕಾಲದಲ್ಲಿ ಸಮೃದ್ಧಿಯಾಗಿ ಮಳೆ ಬೀಳಲಿದೆ ಎಂಬ ಜಾನಪದ ನಂಬುಗೆ ಗ್ರಾಮೀಣ ಪ್ರದೇಶದಲ್ಲಿದ್ದು ಇಡೀ ಗ್ರಾಮಸ್ಥರು ಒಂದೆಡೆ ಕಲೆತು ವಿವಾಹದ ಸಂಭ್ರಮದ ಆಚರಣೆಯಲ್ಲಿ ಭಾಗಿಯಾಗಿದ್ದರು. ಗ್ರಾಮದ ಮಕ್ಕಳನ್ನು ವಾರದಿಂದ ಒಂದೆಡೆ ಕಲೆ ಹಾಕಿ ಮಳೆರಾಯ ಬರಲು ಜಾನಪದ ನಂಬುಗೆಯ ಮದುವೆ ಶಾಸ್ತ್ರ ಮಾಡಲು ಮುಂದಾದರು. ಮಕ್ಕಳನ್ನು ದೇವರಂತೆ ಪ್ರಾರ್ಥಿಸಿಕೊಂಡು ತಿಂಗಳ ಮಾಮನ ಮದುವೆ ನೆರವೇರಿಸಿದರೆ ಮಳೆ ತಪ್ಪದೆ ಬರಲಿದೆ ಎಂದು ಮದುವೆ ಶಾಸ್ತ್ರದ ವಿವಿಧ ಕಾರ್ಯಗಳಿಗೆ ಅಣಿಯಾದರು.

ಮದುವೆಗಾಗಿ ವರ ಹಾಗೂ ವಧುವಾಗಿ ಇಬ್ಬರನ್ನು ಗಂಡು ಮಕ್ಕಳನ್ನೆ ಗ್ರಾಮ ಮುಖಂಡರು ಹುಡುಕಾಡಿ ಆಯ್ಕೆ ಮಾಡಿಕೊಂಡರು. ವರವಾದ ಸೂರ್ಯದೇವನಾಗಿ ಕುಶಾಲ್, ಮಧುಮಗಳಾದ ಚಂದ್ರಮತಿಯಂತೆ ವಿಶಿತ್‌ರನ್ನು ಷುಮರಾಗಿ ಸಜ್ಜುಗೊಳಿಸಿದರು. ಕುಶಾಲ್‌ಗೆ ಮೈಸೂರು ಪೇಟ, ಬಿಳಿ ಷರ್ಟು, ಕಚ್ಚೆ ತೊಡಿಸಿದರೆ, ವಿಶಿತ್‌ಗೆ ಸೀರೆ ಕುಪ್ಪಸ, ಬಳೆ, ಒಡವೆ ತೊಡಿಸಿ ಶೃಂಗರಿಸಿದರು.

ವರನ ಕಡೆಯಿಂದ ಕೌಶಲ್ಯಾ ನಾಗೇಶ್ ಹಾಗೂ ವಧು ವಿನ ಕಡೆಯಿಂದ ಭಾರತಿ ಲೋಕೇಶ್ ತಿಂಗಳ ಮಾಮನ ಮದುವೆಗೆ ಸಾರಥ್ಯವಹಿಸಿದರು. ವಿವಾಹಕ್ಕೂ ಮುನ್ನ ವಾರದಿಂದ ಗ್ರಾಮದ ಪ್ರತಿಮನೆಗಳಿಗೆ ತೆರಳಿದ ಮಕ್ಕಳು ಮನೆ ಮನೆಗಳಲ್ಲಿ ಕೇಳಿ ರೊಟ್ಟಿ ಹಿಟ್ಟನ್ನು ತಂದರು. ಎಲ್ಲವನ್ನು ಒಂದೆಡೆ ಕಲೆಹಾಕಿ ನೀರಿನಿಂದ ಕಲೆಸಿ ಹದವಾಗಿ ರೊಟ್ಟಿ ತಯಾರಿಸಿದರು. 9 ದಿನಗಳ ಕಾಲ ನಡೆದ ಮದುವೆ ಶಾಸ್ತ್ರದಲ್ಲಿ ದಿನಕ್ಕೊಂದು ರೊಟ್ಟಿಯಂತೆ 9 ರೊಟ್ಟಿ ಹಾಗೂ 9 ಸಿಹಿ ಹೋಳಿಗೆ ತಯಾರಿಸಲಾಯಿತು. ರೊಟ್ಟಿಯ ಮೇಲೆ ನಿತ್ಯವೂ ಚಂದಿರನ ಚಿತ್ತಾರ ಬಿಡಿಸಿದರು. ಕಲೆಹಾಕಿದ್ದ ರೊಟ್ಟಿಗಳನ್ನು ಮದುವೆಯ ದಿನದಂದು ಮಕ್ಕಳು ಪೈಪೋಟಿಯಲ್ಲಿ ಪರಸ್ಪರ ಕಸಿಯಲು ಯತ್ನಿಸಿದರು. ಅಂತಿಮವಾಗಿ ಒಂದೆಡೆ ಕಲೆತು ಮಳೆರಾಯನ ಕುರಿತು ಹಾಡಿದರು. ನೃತ್ಯ ಮಾಡಿ 'ಬಾರೋ ಮಳೆರಾಯ' ಎಂದು ಮಳೆರಾಯನ ಕರೆದರು. ಪರಸ್ಪರ ನೀರು ಎರಚಾಡಿ ಸಂಭ್ರಮಿಸಿದರು. ಊರಿನ ಗ್ರಾಮಸ್ಥರು ಮಕ್ಕಳಿಗೆ ಸಾಥ್ ನೀಡಿ ಮಕ್ಕಳೊಂದಿಗೆ ತಾವು ನೃತ್ಯ ಮಾಡಿದರು.

ಗ್ರಾಮದಲ್ಲಿ ಮದುವೆ ಸಮಾರಂಭದಂತೆ ನಗುನಗುತ್ತ ವರಪೂಜೆ, ಬಳೆ, ಮಾಂಗಲ್ಯ ಶಾಸ್ತ್ರ ಸೇರಿದಂತೆ ವಿವಿಧ ಶಾಸ್ತ್ರಗಳನ್ನು ಆಚರಿಸಿ ವಿವಾಹ ಸಂಭ್ರಮವನ್ನು ಸವಿದರು. ಬಿಜುಗಿನ ಪೆಟ್ಟಿಗೆಯನ್ನು ಮಹಿಳೆಯರು ತಲೆಮೇಲೆ ಒತ್ತುಕೊಂಡು ಗಂಡು ಹೆಣ್ಣಿನ ಪರವಾಗಿ ಮುಖಂಡರೊಂದಿಗೆ ಆಂಜನೇಯ ದೇಗುಲದಿಂದ ವೆಂಕಟೇಶ್ವರ ದೇಗುಲದವರೆಗೆ ಮೆರವಣಿಗೆಯಲ್ಲಿ ಸಾಗಿದರು.

ಬಾವಿ ಮನೆ ಕುಮಾರ್, ನಾಗೇಶ್, ಜಿ.ಬಿ.ನಾಗೇಶ್, ರೇಣುಕಾ, ಜಯಮ್ಮ, ಭಾರತಿ, ಬೇಬಿ, ಲಕ್ಷ್ಮಮ್ಮ, ಶಾಂತಮ್ಮ ಮತ್ತಿತರರು ಭಾಗವಹಿಸಿದ್ದರು.



ಗೂಡೇಹೊಸಹಳ್ಳಿ ಗ್ರಾಮದಲ್ಲಿ ಮಳೆಗಾಗಿ ಚಂದಮಾಮನ ಮದುವೆ ಮೂಲಕ ಪೂಜೆ ಮಾಡಲಾಯಿತು.

ಎಳನೀರು ಕೀಳುವ ವೇಳೆ ವಿದ್ಯುತ್ ಅವಘಡ: ಕೃಷಿ ಕಾರ್ಮಿಕ ಸಾವು



ಕೆ.ಆರ್.ಪೇಟೆ: ಎಳನೀರು ಕುಯ್ಯುವ ವೇಳೆ ವಿದ್ಯುತ್ ತಂತಿ ತಗುಲಿ ಕೃಷಿ ಕಾರ್ಮಿಕ ಸಾವನ್ನಪ್ಪಿರುವ ಘಟನೆ ತಾಲೂಕಿನ ಅಕ್ಕಿಹೆಬ್ಬಾಳು ಹೋಬಳಿಯ ಸಾಕ್ಷಿಬೀಡು ಗ್ರಾಮದಲ್ಲಿ ಸಂಭವಿಸಿದೆ.

ಸಾಕ್ಷಿಬೀಡು ಗ್ರಾಮದ ಗೋವಿಂದೇಗೌಡ ಮತ್ತು ಸುಶೀಲಮ್ಮ ದಂಪತಿಗಳ ಪುತ್ರ ಅಭಿಷೇಕ್(28) ಮೃತ ದುರ್ದೈವಿ.

ಪ್ರತಿನಿತ್ಯ ತೆಂಗಿನ ಮರ ಹತ್ತಿ ಎಳನೀರು ಕುಯ್ಯುವ ಕೆಲಸ ಮಾಡುತ್ತಿದ್ದ ಮೃತ ಯುವಕ ಅಭಿಷೇಕ್ ಎಂದಿನಂತೆ ಸಾಕ್ಷಿಬೀಡು ಗ್ರಾಮದಲ್ಲಿ ತೆಂಗಿನ ಮರ ಹತ್ತಿ ಎಳನೀರು ಕುಯ್ಯುವ ಕೆಲಸ ಮಾಡುವ ಸಂದರ್ಭದಲ್ಲಿ ಮರಕ್ಕೆ ಸ್ಪರ್ಶಗೊಂಡಂತೆ ಇದ್ದ ವಿದ್ಯುತ್ ತಂತಿ ಅಭಿಷೇಕ್‌ಗೆ ತಗುಲಿದೆ ವಿದ್ಯುತ್ ಸ್ಪರ್ಶದಿಂದ ಅಸ್ವಸ್ಥಗೊಂಡಿದ್ದ ಅಭಿಷೇಕ್ ಅವರನ್ನು ಕೂಡಲೆ ಸ್ಥಳೀಯರು ಚಿಕಿತ್ಸೆಗಾಗಿ ಕೆ.ಆರ್.ಪೇಟೆ ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿದರು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾನೆ.

ವೈದ್ಯರು ಅಭಿಷೇಕ್ ಮೃತ ದೇಹವನ್ನು ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬದವರಿಗೆ ಹಸ್ತಾಂತರಿಸಿದರು.

ಜೀವನಕ್ಕಾಗಿ ಅಭಿಷೇಕ್ ಮರ ಹತ್ತಿ ಎಳನೀರು ಕಿತ್ತು ಹಣ ಸಂಪಾದಿಸಿ ಕುಟುಂಬಕ್ಕೆ ಆಧಾರವಾಗಿದ್ದ ಮಗನನ್ನು ಕಳೆದುಕೊಂಡ ಪೋಷಕರ ಆಕ್ರಂಧನ ಮುಗಿಲುಮುಟ್ಟಿತ್ತು.

ಈ ಸಂಬಂಧ ಕೆ.ಆರ್.ಪೇಟೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ.

ದೇಸಿ ಬೀಜ ಸಂರಕ್ಷಣೆ, ನೀರಿನ ಸದ್ಬಳಕೆಗೆ ರೈತರು ಒತ್ತು ನೀಡಬೇಕು



ಬೀಜೋತ್ಸವ ಹಾಗೂ ಪೂರ್ವ ಮುಂಗಾರು ಆಂದೋಲನ–2026 ಉದ್ಘಾಟಿಸುತ್ತಿರುವ ಗಣ್ಯರು.

ಮಂಡ್ಯ, ಮೇ 8– ಉತ್ತಮ ಬೀಜ ಬಳಕೆ ಮಾಡಿದಲ್ಲಿ ಬೆಳೆ ಉತ್ತಮವಾಗಿ ಬೆಳೆದು ರೈತರು ಹೆಚ್ಚಿನ ಇಳುವರಿ ಪಡೆದು ಆರ್ಥಿಕವಾಗಿ ಸದೃಢರಾಗಲು ಸಾಧ್ಯವಾಗುತ್ತದೆ. ಇಂದಿನ ಹವಾಮಾನ ವೈಪರೀತ್ಯ ಹಾಗೂ ನೀರಿನ ಕೊರತೆಯ ಪರಿಸ್ಥಿತಿಯಲ್ಲಿ ಕಡಿಮೆ ನೀರಿನಲ್ಲಿ ಬೆಳೆಯಬಹುದಾದ ಬೆಳೆಗಳನ್ನು ರೈತರು ಅಳವಡಿಸಿಕೊಳ್ಳಬೇಕು ಎಂದು ಮಂಡ್ಯ ಕೃಷಿ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಕೆ.ಸಿ.ನಾರಾಯಣಸ್ವಾಮಿ ಸಲಹೆ ನೀಡಿದರು.

ಶುಕ್ರವಾರ ತಾಲೂಕಿನ ವಿ.ಸಿ.ಫಾರಂನಲ್ಲಿರುವ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಬೀಜೋತ್ಸವ ಹಾಗೂ ಪೂರ್ವ ಮುಂಗಾರು ಆಂದೋಲನ–2026 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನೀರಿನ ಸದ್ಬಳಕೆಯನ್ನು ಸಮರ್ಪಕವಾಗಿ ನಿರ್ವಹಿಸುವುದರ ಜೊತೆಗೆ ಬೆಳೆಯಲ್ಲಿ ವೈವಿಧ್ಯತೆ ಅಳವಡಿಸಿಕೊಂಡಲ್ಲಿ ರೈತರು ಆರ್ಥಿಕ ಸಂಕಷ್ಟದಿಂದ ಪಾರಾಗಬಹುದು ಎಂದು ತಿಳಿಸಿದರು.

ದೇಸಿ ಬೀಜಗಳ ಮಹತ್ವವನ್ನು ಉಲ್ಲೇಖಿಸಿದ ಅವರು, ರೈತರು ದೇಸಿ ಬೀಜಗಳ ಸಂರಕ್ಷಣೆ ಮತ್ತು ಅಭಿವೃದ್ಧಿಗೆ ಹೆಚ್ಚಿನ ಗಮನ ಹರಿಸಬೇಕು. ರೈತರ ಬಳಿಯಲ್ಲಿ ಉತ್ತಮ ಗುಣಮಟ್ಟದ ಹಾಗೂ ವಿಶಿಷ್ಟ ಲಕ್ಷಣಗಳಿರುವ ದೇಸಿ ಬೀಜಗಳು ಕಂಡು ಬಂದಲ್ಲಿ ವಿಶ್ವವಿದ್ಯಾಲಯಕ್ಕೆ ತಿಳಿಸಲು ಮನವಿ ಮಾಡಿದರು.

ಜಿಕೆವಿಕೆಯ ನಿವೃತ್ತ ಕುಲಸಚಿವ ಡಾ. ಬಸವಗೌಡ ಮಾತನಾಡಿ, ಉತ್ತಮ ಬೀಜವನ್ನು ಉತ್ತಮ ಮಣ್ಣಿನಲ್ಲಿ ಬಿತ್ತಿದರೆ ರೈತರಿಗೆ ಉತ್ತಮ ಇಳುವರಿ ದೊರೆಯುತ್ತದೆ. ಇಂತಹ ವಿಶೇಷ ಕಾರ್ಯಕ್ರಮಗಳನ್ನು ಜಿಲ್ಲಾ ಮಟ್ಟದಲ್ಲಿಯೂ ಆಯೋಜಿಸುವ ಅಗತ್ಯವಿದ್ದು, ರೈತರಿಗೆ ಅನುಕೂಲವಾಗುವ ಈ ರೀತಿಯ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಉಚಿತ ಬಸ್ ಪಾಸ್ ಸೌಲಭ್ಯ ಕಲ್ಪಿಸಬೇಕು ಎಂದರು.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇನಲ್ಲಿ ದುರಂತ

ಡಿವೈಡರ್, ಖಾಸಗಿ ಬಸ್ಸಿಗೆ–ಕಾರು ಡಿಕ್ಕಿ: ತಂದೆ–ಮಗ ಸಾವು, ಪುತ್ರಿಗೆ ತೀವ್ರ ಗಾಯ

ಮಂಡ್ಯ: ಡಿವೈಡರ್ ಮತ್ತು ಖಾಸಗಿ ಬಸ್ಸಿಗೆ ಕಾರೊಂದು ಡಿಕ್ಕಿ ಹೊಡೆದ ಪರಿಣಾಮ ತಂದೆ–ಮಗ ಸ್ಥಳದಲ್ಲಿಯೇ ಸಾವನ್ನಪ್ಪಿರುವ ಘಟನೆ ಹೊಳಲು ಬಳಿ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಶುಕ್ರವಾರ ಸಂಜೆ ಸಂಭವಿಸಿದೆ.

ತಾಲೂಕಿನ ಕಚ್ಚಿಗೆರೆ ಗ್ರಾಮದ ಕಿರಣ್ (35) ಹಾಗೂ ಪುತ್ರ ಕಿಶೋರ(15) ಸಾವನ್ನಪ್ಪಿದರೆ, 10 ವರ್ಷದ ಪುತ್ರಿ ತೀವ್ರ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ಮೃತರು ಪಾಂಡವಪುರಕ್ಕೆ ತೆರಳಿ ನಂತರ ಮದ್ದೂರಿನ ಬೆಸಗರಹಳ್ಳಿ ಕಡೆಗೆ ಹೆದ್ದಾರಿಯಲ್ಲಿ ತೆರಳುತ್ತಿದ್ದರು. ಹೊಳಲು ಬಳಿ ಬರುತ್ತಿದ್ದಂತೆ ನಿಯಂತ್ರಣ ತಪ್ಪಿದ ಕಾರು ಹೆದ್ದಾರಿಯ ಡಿವೈಡರ್‌ಗೆ ಡಿಕ್ಕಿ ಹೊಡೆದು ಮೈಸೂರು ಕಡೆಗೆ ಹೋಗುತ್ತಿದ್ದ ಖಾಸಗಿ ಬಸ್‌ಗೆ ಡಿಕ್ಕಿ ಹೊಡೆದಿದೆ.

ಡಿಕ್ಕಿಯ ರಭಸಕ್ಕೆ ಕಾರು ನಜ್ಜುಗುಜ್ಜಾಗಿದ್ದು, ಕಾರು ಚಲಾಯಿಸುತ್ತಿದ್ದ ಕಿರಣ್ ಹಾಗೂ ಆತನ ಪುತ್ರ ಕಿಶೋರ ತೀವ್ರ ಗಾಯಗೊಂಡು ರಕ್ತಸ್ರಾವದಿಂದ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ ಎಂದು ತಿಳಿದು ಬಂದಿದೆ.

ಅಪಘಾತದಿಂದ ಹೆದ್ದಾರಿಯಲ್ಲಿ ಸುಮಾರು 1 ಗಂಟೆಗೂ ಹೆಚ್ಚು ಕಾಲ ವಾಹನಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಗಿತ್ತು. ಕೂಡಲೇ ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು ಪರಿಶೀಲನೆ ನಡೆಸಿ ನಂತರ ಶವಗಳನ್ನು ಜಿಲ್ಲಾಸ್ಪತ್ರೆಗೆ ಪಂಚನಾಮೆಗೆ ರವಾನಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ನಗರದ ಸೆಂಟ್ರಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಮಂಡ್ಯ, ಮೇ 8– ಚಿಕ್ಕಮಂಡ್ಯ ಎಂಯುಎಸ್‌ಎಸ್‌ನಿಂದ ಹೊರಡುವ ಎಫ್–12 ಗೋಪಾಲಪುರನ ಐ.ಪಿ ಮಾರ್ಗದ ಲಿಂಕ್ ಲೈನ್ ಕಾಮಗಾರಿ ಇರುವುದರಿಂದ ಮೇ 9 ರಂದು ಬೆಳಗ್ಗೆ 10 ರಿಂದ ಸಂಜೆ 6 ಗಂಟೆಯವರಿಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಮಂಡ್ಯ ಚಾವಿಸನಿನಿ ಪ್ರಕಟಣೆಯಲ್ಲಿ ತಿಳಿಸಿದೆ.

ಮೂರನೇ ಪುಟದಿಂದ

ಹೋಟೆಲ್ ನಿರ್ವಹಣೆ ಟೆಂಡರ್ ಅವಧಿ ವಿಸ್ತರಣೆ

ಮಳೆಗಾಲದಲ್ಲಿ ನೀರು ನಿಂತು ತಾರಸಿಯಲ್ಲಿ ವಸ್ತಿ ಹಿಡಿಯುತ್ತಿದೆ. ಈ ಹಿನ್ನೆಲೆಯಲ್ಲಿ ಇದನ್ನು ನವೀಕರಣ ಮಾಡುವ ಅಗತ್ಯವಿತ್ತು. ಈ ಸಂಬಂಧ ತಜ್ಞರ ಸಮಿತಿ ರಚನೆ ಮಾಡಿದ ಸರ್ಕಾರ ನವೀಕರಣಕ್ಕೆ ಅಂದಾಜು ವೆಚ್ಚದ ವರದಿ ನೀಡುವಂತೆ ಸೂಚಿಸಿತ್ತು. ತಜ್ಞರು ಹೋಟೆಲ್‌ಗೆ ಭೇಟಿ ನೀಡಿ ಸಮಗ್ರ ಪರಿಶೀಲನೆ ಮಾಡಿ ಸುಮಾರು 50 ಕೋಟಿ ವೆಚ್ಚ ಅಂದಾಜು ವರದಿ ನೀಡಿದ್ದರು. ಆದರೆ ಇಷ್ಟು ಹಣ ವೆಚ್ಚ ಮಾಡಿ, ನಿರ್ವಹಣೆ ಕಷ್ಟ ಎಂದು ಮನಗಂಡ ಸರ್ಕಾರ ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ನವೀಕರಣ, ನಿರ್ವಹಣೆಯನ್ನು ಖಾಸಗಿಯವರಿಗೆ 30 ವರ್ಷಕ್ಕೆ ಗುತ್ತಿಗೆ ನೀಡಲು ನಿರ್ಧರಿಸಿತ್ತು. ಇದಕ್ಕಾಗಿ ಗ್ಲೋಬಲ್ ಟೆಂಡರ್ (ಜಾಗತಿಕ ಟೆಂಡರ್) ಕರೆಯಲಾಗಿತ್ತು. ಈ ಸಂಬಂಧ ಇ–ಪ್ರಕ್ಯೂರ್‌ಮೆಂಟ್ (e-Procurement) ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಟೆಂಡರ್ ಸಲ್ಲಿಕೆಗೆ ಅವಕಾಶ ನೀಡಿ ಏಪ್ರಿಲ್ 30ರ ಗಡುವು ನೀಡಲಾಗಿತ್ತು.

ಈಗಾಗಲೇ ಟೆಂಡರ್ ಸಲ್ಲಿಸಿರುವ ಹಾಗೂ ಸಲ್ಲಿಸುವ ಕೆಲವು ಕಂಪನಿಗಳು ಗುತ್ತಿಗೆಗೆ ವಿಧಿಸಿರುವ ಕೆಲವು ಕಠಿಣ ನಿಯಮವನ್ನು ಸರಳೀಕರಣಗೊಳಿಸುವಂತೆ ಮನವಿ ಮಾಡಿವೆ. ಈ ಸಂಬಂಧ ತೀರ್ಮಾನ ಕೈಗೊಂಡರೆ ಹೋಟೆಲ್ ನಡೆಸಲು ನಮಗೂ ಅನುಕೂಲವಾಗುತ್ತದೆ ಎಂದು ಕಂಪನಿಗಳು ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್‌ಗೆ ಮನವಿ ಸಲ್ಲಿಸಿವೆ.

ಅಲ್ಲದೆ ಅಲ್ಲದೆ 30 ವರ್ಷಗಳಿಗೆ ಗುತ್ತಿಗೆ ಪಡೆಯುವ ಕಂಪನಿಯು ಹೋಟೆಲ್ ಅನ್ನು ಮೊದಲು ನವೀಕರಣ ಮಾಡಬೇಕು. ಸರ್ಕಾರ ರಚನೆ ಮಾಡುವ ತಜ್ಞರ ಸಲಹೆ, ಮಾರ್ಗದರ್ಶನದಂತೆಯೇ ನವೀಕರಿಸಬೇಕು ಎಂಬುದು ಸೇರಿದಂತೆ ಹಲವು ಕಠಿಣ ನಿಯಮಗಳ ಪಾಲನೆಗಾಗಿ ಷರತ್ತು ವಿಧಿಸಿದೆ. ಈ ನಿಯಮಗಳನ್ನು ಸರಳೀಕರಿಸಬೇಕು ಹಾಗೂ ಕೆಲವು ನಿಯಮ ಸಂಬಂಧ ಸ್ಪಷ್ಟನೆ ನೀಡಬೇಕು ಎಂದು ಕೋರಿವೆ.

ಲಲಿತ ಮಹಲ್ ಪ್ಯಾಲೆಸ್ ಹೋಟೆಲ್ ಗುತ್ತಿಗೆ ಪಡೆಯುವ ಕಂಪನಿಗೆ 3.76 ಕೋಟಿ ಟೆಂಡರ್ ಮೌಲ್ಯ ನಿಗದಿ ಮಾಡಿದೆ. ಈ ಸಂಬಂಧ 25 ಲಕ್ಷ ಇಎಂಡಿ ಪಾವತಿಗೆ ಸೂಚನೆ ನೀಡಿದೆ. ಗುತ್ತಿಗೆ ಪಡೆಯುವ ಕಂಪನಿ ರಾಜ್ಯ ಸರ್ಕಾರಕ್ಕೆ ಒಂದು ವರ್ಷಕ್ಕೆ 4 ಕೋಟಿ ನೀಡಬೇಕು. ಅಲ್ಲದೆ ಪ್ರತಿ ವರ್ಷ 4 ಕೋಟಿಗೆ ಶೇಕಡ 10ರಷ್ಟು ಹೆಚ್ಚುವರಿ ಹಣ ನೀಡುತ್ತಾ ಹೋಗಬೇಕು. ಅಂದರೆ ಟೆಂಡರ್ ಪಡೆದ ಮುಂದಿನ ವರ್ಷ 4.40 ಕೋಟಿ ಪಾವತಿ ಮಾಡಿದರೆ, ಅದರ ನಂತರದ ವರ್ಷ 4.80 ಕೋಟಿ ಪಾವತಿ ಮಾಡಬೇಕು. ಹೀಗೆ 30 ವರ್ಷದವರೆಗೆ ಹೆಚ್ಚುವರಿಯಾಗಿ ಶೇಕಡ 10ರಷ್ಟು ಹಣ ಪಾವತಿ ಮಾಡುತ್ತಾ ಹೋಗಬೇಕು. ಬಹು ಮುಖ್ಯವಾಗಿ ಇಷ್ಟು ಪ್ರಮಾಣದ ಹೆಚ್ಚುವರಿ ಹಣ ಪಾವತಿ ಸಾಧ್ಯವಿಲ್ಲ. ಹೋಟೆಲ್ ಅನ್ನು ಸುಪರ್ದಿಗೆ ಪಡೆದ ಕೂಡಲೇ ನವೀಕರಣಕ್ಕೆ ಸುಮಾರು 50 ಕೋಟಿ ವೆಚ್ಚ ಮಾಡಬೇಕಿದೆ. ತರುವಾಯ ವರ್ಷಕ್ಕೆ ಹೆಚ್ಚುವರಿಯಾಗಿ ಶೇಕಡ 10 ರಷ್ಟು ಹಣ ಪಾವತಿ ಮಾಡುವುದು ಕಷ್ಟ. ಇದರಿಂದ ನಷ್ಟವಾಗುವ ಸಾಧ್ಯತೆ ಇದೆ ಎಂದು ಈಗಾಗಲೇ ಟೆಂಡರ್ ಸಲ್ಲಿಸಿರುವ ಹಾಗೂ ಸಲ್ಲಿಸುವ ಕಂಪನಿಗಳು ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್‌ನ ವ್ಯವಸ್ಥಾಪಕ ನಿರ್ದೇಶಕ ಪ್ರಶಾಂತ್ ಅವರಿಗೆ ಮನವರಿಕೆ ಮಾಡಿದ್ದಾರೆ.

ಲಂಡನ್‌ನ ಸೈಂಟ್ ಪಾಲ್ಸ್ ಕ್ಯಾಥೆಡ್ರೆಲ್ ಮಾದರಿಯಲ್ಲಿರುವ ಐಷರಾಮಿ ಹೆರಿಟೇಜ್ ಕಟ್ಟಡವಾಗಿರುವ ಲಲಿತ ಮಹಲ್ ಪ್ಯಾಲೆಸ್ ಹೋಟೆಲ್ ನಡೆಸುವುದು ಪ್ರತಿಷ್ಠೆಯ ಪ್ರಶ್ನೆ ಎಂದು ಭಾವಿಸಿರುವ ಖಾಸಗಿ ಕಂಪನಿಗಳು ಶತಾಯ–ಗತಾಯ ತಾವೇ ಗುತ್ತಿಗೆ ಪಡೆಯಬೇಕೆಂದು ಪೈಪೋಟಿಗಿಳಿದಿವೆ. ಆದರೆ ಸರ್ಕಾರ ನಿಗದಿ ಮಾಡಿರುವ ಪ್ರಮಾಣದ ಹಣ ಕೊಟ್ಟರೆ ನಷ್ಟವಾಗಬಹುದು ಎಂಬ ಲೆಕ್ಕಾಚಾರ ಕೂಡ ಹಾಕಿವೆ.

ಅಲ್ಲದೆ ದೇಶಿಯ ಪ್ರವಾಸಿಗರಿಗಿಂತ ವಿದೇಶಿ ಪ್ರವಾಸಿಗರೇ ಲಲಿತ ಮಹಲ್ ಪ್ಯಾಲೆಸ್ ಹೋಟೆಲ್‌ನ ಪ್ರಮುಖ ಆಕರ್ಷಣೆಯಾಗಿದೆ. ಅಂದರೆ ಇದನ್ನು ನಡೆಸಲು ವಿದೇಶಿ ಪ್ರವಾಸಿಗರ ಮೇಲೆ ಅವಲಂಬಿತವಾಗಬೇಕು. ಒಂದು ವೇಳೆ ನಿರೀಕ್ಷಿತ ಪ್ರಮಾಣದಲ್ಲಿ ವಿದೇಶಿ ಪ್ರವಾಸಿಗರು ಹೋಟೆಲ್‌ಗೆ ಬಾರದಿದ್ದರೆ ಸರ್ಕಾರಕ್ಕೆ ಪ್ರತಿ ವರ್ಷ 4 ಕೋಟಿ ಜೊತೆಗೆ ಶೇಕಡ 10 ಹೆಚ್ಚುವರಿ ಹಣ ಪಾವತಿ ಅಸಾಧ್ಯವಾಗುತ್ತದೆ ಎಂದು ಖಾಸಗಿ ಕಂಪನಿಗಳು ಅಳೆದು ತೂಗುತ್ತಿವೆ.

ಈ ಹಿನ್ನೆಲೆಯಲ್ಲಿ ವರ್ಷಕ್ಕೆ 4 ಕೋಟಿ ಹಾಗೂ ಹೆಚ್ಚುವರಿಯಾಗಿ ಶೇಕಡ 10ರಷ್ಟು ಪಾವತಿ ಮಾಡುವುದಕ್ಕೆ ವಿನಾಯಿತಿ ನೀಡಬೇಕೆಂದು ಖಾಸಗಿ ಕಂಪನಿಗಳು ಕೋರುತ್ತಿವೆ. ಈ ಸಂಬಂಧ ಖಾಸಗಿ ಕಂಪನಿಗಳು ಮನವಿಯನ್ನು ಪರಿಶೀಲನೆ ನಡೆಸಲು ಟೆಂಡರ್‌ಗೆ ವಿಧಿಸಿದ್ದ ಏಪ್ರಿಲ್ 30ರ ಗಡುವನ್ನು ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ ವಿಸ್ತರಿಸಿದೆ.

ಎಕ್ಸ್‌ಪ್ರೆಷನ್ ಆಫ್ ಇಂಟ್ರೆಸ್ಟ್‌ನಲ್ಲಿ 8 ಕಂಪನಿಗಳ ಆಸಕ್ತಿ

ಮೈಸೂರಿನ ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ಅನ್ನು 30 ವರ್ಷ ಗುತ್ತಿಗೆ ಪಡೆಯಲು ಖಾಸಗಿ ಕಂಪನಿಗಳಿಂದ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಎಕ್ಸ್‌ಪ್ರೆಷನ್ ಆಫ್ ಇಂಟ್ರೆಸ್ಟ್ ಕರೆದಿತ್ತು.

ಈ ವೇಳೆ ಸುಮಾರು 8 ಕಂಪನಿಗಳು ಹೋಟೆಲ್ ಗುತ್ತಿಗೆ ಪಡೆಯಲು ಆಸಕ್ತಿ ತೋರಿ ಅರ್ಜಿ ಸಲ್ಲಿಸಿವೆ. ಇದಾದ ನಂತರ ಈಗ ಟೆಂಡರ್ ಕರೆಯಲಾಗಿದೆ.

ಈಗಾಗಲೇ ಹಲವು ಕಂಪನಿಗಳು ಟೆಂಡರ್ ಸಲ್ಲಿಸಿವೆ. ಟೆಂಡರ್ ಅರ್ಜಿ ಜೊತೆಗೆ 25 ಲಕ್ಷ ರೂಪಾಯಿಗಳ ಇಎಂಡಿ (ಅರ್ನೆಸ್ಟ್ ಮನಿ ಡೆಪಾಸಿಟ್) ಪಾವತಿ ಮಾಡಿವೆ. ಆದರೆ ಗ್ಲೋಬಲ್ ಟೆಂಡರ್‌ನ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಎಷ್ಟು ಕಂಪನಿಗಳು ಟೆಂಡರ್ ಸಲ್ಲಿಸಿವೆ ಎಂಬ ಮಾಹಿತಿ ಸದ್ಯ ತಿಳಿಯುವುದಿಲ್ಲ. ಪಾರದರ್ಶಕತೆ ಕಾಪಾಡುವ ನಿಟ್ಟಿನಲ್ಲಿ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್‌ನ ವ್ಯವಸ್ಥಾಪಕ ನಿರ್ದೇಶಕರಿಗೂ ಇದರ ಮಾಹಿತಿ ಇರುವುದಿಲ್ಲ. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡು ಅಂತಿಮವಾಗಿ ಟೆಂಡರ್ ತೆರೆದಾಗಲೇ ಎಷ್ಟು, ಯಾವ ಕಂಪನಿಗಳು ಟೆಂಡರ್‌ನಲ್ಲಿ ಪಾಲ್ಗೊಂಡಿವೆ ಎಂಬ ಮಾಹಿತಿ ತಿಳಿಯುತ್ತದೆ. ಆದರೆ ಎಕ್ಸ್‌ಪ್ರೆಷನ್ ಆಫ್ ಇಂಟ್ರೆಸ್ಟ್‌ನಲ್ಲಿ ಎಂಟು ಕಂಪನಿಗಳು ಆಸಕ್ತಿ ತೋರಿರುವುದನ್ನು ಗಮನಿಸಿದರೆ ಟೆಂಡರ್ ನಲ್ಲಿ ಹತ್ತಾರು ಕಂಪನಿಗಳು ಇಎಂಡಿ ಪಾವತಿಸಿ ಅರ್ಜಿ ಸಲ್ಲಿಸಿರುವ ಸಾಧ್ಯತೆ ಇದೆ. ಏಕೆಂದರೆ ಹಲವು ಕಂಪನಿಗಳು ವಿನಾಯಿತಿ ನೀಡುವಂತೆ ಈಗಾಗಲೇ ಮನವಿ ಸಲ್ಲಿಸಿವೆ.

ಆಡಳಿತ ಮಂಡಳಿ ಸಭೆಯಲ್ಲಿ ಅಂತಿಮ ತೀರ್ಮಾನ

ಮೈಸೂರಿನ ಲಲಿತ ಮಹಲ್ ಪ್ಯಾಲೆಸ್ ಹೋಟೆಲ್ ಅನ್ನು 30 ವರ್ಷದ ಗುತ್ತಿಗೆಗೆ ಪಡೆಯಲು ಕೆಲವು ನಿಯಮ ಸರಳೀಕರಣ ಮಾಡಿ, ಹಣ ಪಾವತಿಗೆ ವಿನಾಯಿತಿ ನೀಡುವಂತೆ ಖಾಸಗಿ ಕಂಪನಿಗಳು ಮನವಿ ಸಲ್ಲಿಸಿವೆ. ಈ ಸಂಬಂಧ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್‌ನ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚೆ ನಡೆಸಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು. ಅಲ್ಲಿವರೆಗೆ ಟೆಂಡರ್ ಸಲ್ಲಿಕೆಗೆ ವಿಧಿಸಲಾಗಿದ್ದ ಏಪ್ರಿಲ್ 30ರ ಗಡುವನ್ನು ವಿಸ್ತರಿಸಲಾಗಿದೆ. ಟೆಂಡರ್ ಸಲ್ಲಿಕೆಗೆ ಮತ್ತೆ ಅಂತಿಮ ಗಡುವು ದಿನಾಂಕವನ್ನು ಕೂಡ ಆಡಳಿತ ಮಂಡಳಿಯ ಸಭೆಯಲ್ಲಿ ನಿರ್ಧರಿಸಲಾಗುವುದು. ಸದ್ಯ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಹೋಟೆಲ್ ಅನ್ನು ನಡೆಸುತ್ತಿದ್ದು, ಯಾವುದೇ ತೊಂದರೆ ಇಲ್ಲ. ಅಲ್ಲದೆ ಹೋಟೆಲ್ ರೂಂಗಳು ಬುಕ್ ಆಗುತ್ತಿವೆ.

- ಪ್ರಶಾಂತ್, ವ್ಯವಸ್ಥಾಪಕ ನಿರ್ದೇಶಕ, ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್, ಬೆಂಗಳೂರು.

ಇಂದು ಪ್ರಮಾಣ ವಚನ

ಸವಾಲು ಹಾಕಿ ದ್ದರು. ಬಿಜೆಪಿಯ ಶಾಸಕಾಂಗ ಪಕ್ಷದ ನಾಯಕನ ಆಯ್ಕೆಗೆ ವೀಕ್ಷಕರಾಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಒಡಿಶಾ ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ಸಹಾಯಕ ವೀಕ್ಷಕ ರಾಗಿ ಪಶ್ಚಿಮ ಬಂಗಾಳಕ್ಕೆ ಆಗಮಿಸಿದ್ದು, ಇಂದು ಬಿಸ್ವಾ ಬಾಂಗ್ಲಾ ಕನ್ವೆನ್ಷನ್ ಸೆಂಟರ್‌ನಲ್ಲಿ ನೂತನ ಬಿಜೆಪಿ ಶಾಸಕರೊಂದಿಗೆ ಸಭೆ ನಡೆಸಿದರು. ಸಭೆ ಪ್ರಾರಂಭವಾಗುವ ಮೊದಲು, ಯಾವುದೇ ಬಿಜೆಪಿ ಶಾಸಕರು ಅಥವಾ ನಾಯಕರು ಮುಖ್ಯಮಂತ್ರಿ ಯಾರು ಎಂಬುದರ ಕುರಿತು ಮಾತನಾಡಿರಲಿಲ್ಲ. ಹಲವಾರು ಹೆಸರುಗಳ ಬಗ್ಗೆ ಚರ್ಚೆಯಾಗಿದ್ದರೂ ಸುವೇಂದು ಅಧಿಕಾರಿಯವರ ಹೆಸರಿಗೆ ಹೆಚ್ಚಿನ ಬೆಂಬಲ ವ್ಯಕ್ತವಾಯಿತು. ಅಂತಿಮವಾಗಿ ಸುವೇಂದು ಅಧಿಕಾರಿ ಅವರನ್ನು ವಿಧಾನಸಭಾ ನಾಯಕರನ್ನಾಗಿ ಅಮಿತ್ ಶಾ ಘೋಷಿಸಿದರು. ಇದಕ್ಕೂ ಮೊದಲು ಸಂಸದೀಯ ಪಕ್ಷದ ನಾಯಕರಾಗಿ ಸುವೇಂದು ಅಧಿಕಾರಿ ಅವರ ಹೆಸರನ್ನು ಪ್ರಸ್ತಾಪಿಸಿದರು. ಎರಡನೇ ಹೆಸರನ್ನು ಪ್ರಸ್ತಾಪಿಸಬೇಕು ಎಂದು ಹೇಳಲಾಗಿತ್ತು. ಅದಕ್ಕಾಗಿ ಸಮಯವನ್ನೂ ನೀಡಲಾಯಿತು. ಆದರೆ, ಯಾರೂ ಎರಡನೇ ಹೆಸರನ್ನು ಪ್ರಸ್ತಾಪಿಸಲಿಲ್ಲ. ಆದ್ದರಿಂದ, ಸುವೇಂದು ಅವರನ್ನು ಶಾಸಕಾಂಗ ಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡಲಾಯಿತು ಎಂದು ಹೇಳಿದರು.

ಬಂಗಾಳದ ಮೊದಲ ಬಿಜೆಪಿ ಸರ್ಕಾರದ ಪ್ರಮಾಣವಚನ ಸ್ವೀಕಾರ ಸಮಾರಂಭ ಶನಿವಾರ ಬೆಳಿಗ್ಗೆ 11 ಗಂಟೆಗೆ ಬ್ರಿಗೇಡ್ ಮೈದಾನದಲ್ಲಿ ನಡೆಯಲಿದೆ. ಪ್ರಧಾನಿ ನರೇಂದ್ರ ಮೋದಿ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್, ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ, ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಸೇರಿದಂತೆ ಅನೇಕ ಕೇಂದ್ರ ಸಚಿವರು, ಬಿಜೆಪಿ ನೇತೃತ್ವದ ಸುಮಾರು 20 ರಾಜ್ಯಗಳ ಮುಖ್ಯ ಮಂತ್ರಿಗಳು ಭಾಗವಹಿಸಲಿದ್ದಾರೆ. ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಎಲ್ಲಾ ಪಕ್ಷಗಳನ್ನು ಆಹ್ವಾನಿಸಲಾಗಿದೆ.

ನಾಳೆ ಸುವೇಂದು ಅಧಿಕಾರಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಪಶ್ಚಿಮ ಬಂಗಾಳದ ಮೊದಲ ಬಿಜೆಪಿ ಸರ್ಕಾರ ರಚನೆಯಾಗುತ್ತಿರುವುದರಿಂದ ಪಕ್ಷದ ಪಾಲಿಗೆ ಇದೊಂದು ಐತಿಹಾಸಿಕ ಕ್ಷಣವಾಗಲಿದೆ.

ತಮಿಳ್ನಾಡಲ್ಲಿ ಮುಂದುವರೆದ ಸರ್ಕಾರ ರಚನೆ ಕಸರತ್ತು!



ನೆಹರು ಕ್ರೀಡಾಂಗಣದಲ್ಲಿ ಟಿವಿಕೆ ಮುಖ್ಯಸ್ಥ ವಿಜಯ್ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ನಾವು ಬೆಂಬಲ ಪತ್ರವನ್ನು ವಿಜಯ್‌ಗೆ ನೀಡಿದ್ದೇವೆ. ಅವರು ರಾಜ್ಯಪಾಲರ ಬಳಿಗೆ ಹೋಗಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದ್ದಾರೆ. ರಾಜ್ಯಪಾಲರು ಸರ್ಕಾರ ರಚಿಸುವಂತೆ ವಿಜಯ್ ಅವರಿಗೆ ಸೂಚಿಸಿದ್ದಾರೆ. ಅದರ ನಂತರ, ಅವರು ನಮ್ಮ ಕಚೇರಿಗೆ ಬಂದು ನಾವು ಬೆಂಬಲ ನೀಡಿದ್ದಕ್ಕೆ ಧನ್ಯವಾದ ಹೇಳಿದ್ದಾರೆ ಎಂದು ಭಾರತ ಕಮ್ಯುನಿಸ್ಟ್ ಪಕ್ಷ–ಮಾರ್ಕ್ಸ್‌ವಾದಿ(ಸಿಪಿಐಎಂ) ನಾಯಕ ಕೆ.ಬಾಲಕೃಷ್ಣನ್ ಹೇಳಿದ್ದರು.

ಆದರೆ, ಕೆಲವೇ ಗಂಟೆಗಳಲ್ಲಿ ಪರಿಸ್ಥಿತಿ ಬದಲಾಗಿದೆ. ನಟ–ರಾಜಕಾರಣಿ ವಿಜಯ್ ಅವರಿಗೆ ಸಂಖ್ಯಾಬಲ ಇಲ್ಲ. ಬಹುಮತಕ್ಕೆ ಅಗತ್ಯವಾದ 118 ಶಾಸಕರ ಬೆಂಬಲ ಸಾಬೀತುಪಡಿಸಲು ವಿಫಲರಾದ ಕಾರಣ ಅವರಿಗೆ ನಾಳೆ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲು ಆಹ್ವಾನಿಸಲಾಗಿಲ್ಲ ಎಂದು ಲೋಕಭವನದ ಮೂಲಗಳು ಎನ್‌ಡಿಟಿವಿಗೆ ತಿಳಿಸಿರುವುದಾಗಿ ವರದಿಯಾಗಿದೆ. ಇದರೊಂದಿಗೆ ಸರ್ಕಾರ ರಚನೆ ಬಿಕ್ಕಟ್ಟು ಇನ್ನಷ್ಟು ಕಗ್ಗಂಟಾಗಿ ಪರಿಣಮಿಸಿದಂತಾಗಿದೆ.

ಬೆಂಬಲ ಪಡೆಯಲು ವಿಫಲ?: ಒಟ್ಟು 234 ಸದಸ್ಯ ಬಲದ ತಮಿಳುನಾಡು ವಿಧಾನ ಸಭೆ ಚುನಾವಣೆಯಲ್ಲಿ 108 ಸ್ಥಾನಗಳಲ್ಲಿ ವಿಜಯ್ ನೇತೃತ್ವದ ಟಿವಿಕೆ ಜಯಗಳಿಸಿ, ಅತೀ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದರೂ ಸರಳ ಬಹುಮತಕ್ಕಾಗಿ ಕಸರತ್ತು ನಡೆಸಬೇಕಾದ ಸ್ಥಿತಿ ಬಂದೊದಗಿದೆ. ವಿಜಯ್ ಎರಡು ಕ್ಷೇತ್ರಗಳಲ್ಲಿ ಗೆದ್ದಿರುವುದರಿಂದ ಶಾಸಕರ ಸಂಖ್ಯೆ 107 ಆಗಲಿದೆ. 5 ಸ್ಥಾನಗಳನ್ನು ಗೆದ್ದಿರುವ ಕಾಂಗ್ರೆಸ್ ಈಗಾಗಲೇ ವಿಜಯ್‌ಗೆ ಬೆಂಬಲ ವ್ಯಕ್ತಪಡಿಸಿದೆ. ಇನ್ನು ಸಿಪಿಐ, ಸಿಪಿಎಂ, ವಿಸಿಕೆಯ ತಲಾ ಎರಡು ಶಾಸಕರ ಬೆಂಬಲದೊಂದಿಗೆ ಮ್ಯಾಜಿಕ್ ಸಂಖ್ಯೆ 118 ದಕ್ಕಿದೆ ಎಂದು ಟಿವಿಕೆ ಕಾರ್ಯಕರ್ತರು ಸಿಹಿ ಹಂಚಿ ಸಂಭ್ರಮಿಸಿದ್ದರು. ಆದರೆ, ಬೆಂಬಲ ಕೋರಿ ವಿಸಿಕೆ, ಎಎಂಎಂಕೆ ಮತ್ತು ಐಯುಎಂಎಲ್ ಶಾಸಕರೊಂದಿಗೆ ಮಾತುಕತೆ ನಡೆಸಿದರೂ ಫಲಪ್ರದವಾಗಿಲ್ಲ ಎನ್ನಲಾಗಿದೆ.

ಮತ್ತೊಂದು ವರಸೆ: ಟಿವಿಕೆ ಸರ್ಕಾರ ರಚನೆಗೆ ರಾಜ್ಯಪಾಲರು ಬ್ರೇಕ್ ಹಾಕುತ್ತಿರುವ ಹಿನ್ನೆಲೆಯಲ್ಲಿ ಎಐಎಡಿಎಂಕೆ ಪಕ್ಷವು ವಿವಿಧ ರೀತಿಯ ಕಸರತ್ತು ನಡೆಸುತ್ತಿದೆ ಎನ್ನಲಾಗಿದೆ. ಅತಂತ್ರ ಪರಿಸ್ಥಿತಿ ನಿರ್ಮಾಣವಾದ ಹಿನ್ನೆಲೆಯಲ್ಲಿ ಬದ್ಧ ವೈರಿಗಳಾಗಿರುವ 47 ಸ್ಥಾನ ಪಡೆದಿರುವ ಎಐಎಡಿಎಂಕೆ ಮತ್ತು 59 ಸ್ಥಾನಗಳನ್ನು ಹೊಂದಿರುವ ಡಿಎಂಕೆ ನಡುವೆ ಮೈತ್ರಿ ಏರ್ಪಡಬಹುದು ಎಂಬ ವದಂತಿಗಳು ಜೋರಾಗಿವೆ. ಒಂದೆಡೆ ಟಿವಿಕೆ, ರಾಜ್ಯಪಾಲರ ಅನುಮತಿಗಾಗಿ ಕಸರತ್ತು ನಡೆಸಿದ್ದರೆ ಎಐಎಡಿಎಂಕೆ ಹಿಂಬಾಗಿಲ ರಾಜಕೀಯದ ಮೂಲಕ ಮೈತ್ರಿಕೂಟ ರಚಿಸಿಕೊಂಡು ಸರ್ಕಾರ ರಚನೆಗೆ ಯತ್ನಿಸುತ್ತಿದೆ ಎನ್ನಲಾಗುತ್ತಿದೆ. ಎಐಎಡಿಎಂಕೆ ಬಿಜೆಪಿಯೊಂದಿಗಿನ ಮೈತ್ರಿ ಕಡಿದುಕೊಂಡರೆ ಮಾತ್ರ ಈ ನಿಟ್ಟಿನಲ್ಲಿ ಯೋಚಿಸಬಹುದು ಎಂದು ಡಿಎಂಕೆ ಹೇಳಿರುವುದಾಗಿ ಚರ್ಚೆಯಾಗುತ್ತಿದೆ. ಒಂದು ವೇಳೆ ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಡಿಎಂಕೆ–ಎಐಎಡಿಎಂಕೆ ಮೈತ್ರಿ ಸರ್ಕಾರ ರಚನೆಯಾದರೆ ತಮ್ಮ 108 ಶಾಸಕರು ರಾಜೀನಾಮೆ ನೀಡುವುದಾಗಿ ಟಿವಿಕೆ ಎಚ್ಚರಿಸಿರುವುದಾಗಿ ಹೇಳಲಾಗುತ್ತಿದೆ.

ಈ ನಡುವೆ ಎಎಂಎಂಕೆ ಪಕ್ಷದ ಪ್ರಧಾನ ಕಾರ್ಯದರ್ಶಿ ಟಿಟಿವಿ ದಿನಕರನ್, ಎಐಎಡಿಎಂಕೆಯ ಎಡಪ್ಪಾಡಿ ಕೆ ಪಳನಿಸ್ವಾಮಿ ಅವರನ್ನು ಸರ್ಕಾರ ರಚಿಸಲು ಆಹ್ವಾನಿಸುವಂತೆ ರಾಜ್ಯಪಾಲರಿಗೆ ಪತ್ರ ಸಲ್ಲಿಸಿದ್ದಾರೆ. ಪಳನಿಸ್ವಾಮಿ ಅವರ ನೇತೃತ್ವದಲ್ಲಿ ಹೊಸ ಸರ್ಕಾರ ರಚಿಸುವಷ್ಟು ಬೆಂಬಲವಿದೆ ಎಂದು ತಿಳಿಸಿದ್ದಾರೆ. ಈ ಎಲ್ಲಾ ಬೆಳವಣಿಗೆ ಹಿನ್ನೆಲೆಯಲ್ಲಿ ಕಾಂಗ್ರೆಸ್‌ನ ಐವರು ಶಾಸಕರು ಹೈದರಾಬಾದ್‌ಗೆ ನಂತರ ಬೆಂಗಳೂರಿಗೆ ಆಗಮಿಸಿದ್ದು, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕಣ್ಗಾವಲಿನಲ್ಲಿದ್ದಾರೆ ಎಂದು ತಿಳಿದುಬಂದಿದೆ.

ಲಾಕ್ಡ್ ಹೌಸ್ ಬೀಟ್

ರಾತ್ರಿ ಕನಿಷ್ಠ ಎರಡು ಬಾರಿ ಪರಿಶೀಲಿಸಲಿದ್ದಾರೆ. ಹೆಚ್ಚುವರಿ ಸಿಬ್ಬಂದಿಯನ್ನು ನಿಯೋಜಿಸದೆ ಈಗಿರುವ ಬೀಟ್ ವ್ಯವಸ್ಥೆಯಲ್ಲೇ ಈ ಕಾರ್ಯಾಚರಣೆ ನಡೆಯಲಿದೆ.

ನಾಗರಿಕರು ಒಂದು ದಿನಕ್ಕಿಂತ ಹೆಚ್ಚು ಕಾಲ ಮನೆಗೆ ಬೀಗ ಹಾಕಿ ಹೊರಗಡೆ ಹೋಗುವ ಬಗ್ಗೆ ಮುಂಚಿತ ವಾಗಿ ಮಾಹಿತಿ ನೀಡಿದರೆ, ಪೊಲೀಸರು ಆ ಮನೆಗಳ ಮೇಲೆ ವಿಶೇಷ ನಿಗಾವಹಿಸಲು ಸಾಧ್ಯವಾಗುತ್ತದೆ. ಪ್ರತಿ ಬೀಟ್‌ಗೆ ನಿಯೋಜಿಸಲಾದ ಇಬ್ಬರಿಂದ ನಾಲ್ವರು ಸಿಬ್ಬಂದಿ, ಈ ಯೋಜನೆಯಡಿ ನೋಂದಾಯಿತ ಮನೆಗಳ ಮೇಲೆ ವಿಶೇಷ ಗಮನ ಹರಿಸಲಿದ್ದಾರೆ. ಮನೆ ಮಾಲೀಕರು ಹಂಚಿಕೊಳ್ಳುವ ಎಲ್ಲಾ ಮಾಹಿತಿಯೂ ಗೌಪ್ಯವಾಗಿರುತ್ತದೆ ಎಂದು ಡಿಸಿಪಿ ಹರ್ಷ ಪ್ರಿಯವದ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಏರಿಯಾ ಡಾಮಿನೇಷನ್ ಡ್ರೈವ್ : ನಗರದ ಸೂಕ್ಷ್ಮ ಪ್ರದೇಶಗಳಲ್ಲಿ 'ಏರಿಯಾ ಡಾಮಿನೇಷನ್ ಡ್ರೈವ್' ಹಾಗೂ ಸಿಸಿಟಿವಿ ನಿಗಾವನ್ನೂ ತೀವ್ರಗೊಳಿಸಲಾಗಿದೆ. ಮುಖ್ಯ ರಸ್ತೆಗಳಷ್ಟೇ ಅಲ್ಲದೆ ಗಲ್ಲಿಗಳು ಮತ್ತು ಬಡಾವಣೆಗ ಳಲ್ಲಿಯೂ ಗಸ್ತು ನಡೆಸಿ ಅನುಮಾನಾಸ್ಪದ ಚಟುವಟಿಕೆಗಳ ಮೇಲೆ ಕಣ್ಣಿಡಲಾಗಿದೆ. ಇದರಿಂದ ಮಾದಕ ವಸ್ತು ಬಳಕೆ, ವ್ಹೀಲಿಂಗ್ ಹಾಗೂ ಸಾರ್ವಜನಿಕ ಶಾಂತಿ ಭಂಗ ಉಂಟು ಮಾಡುವ ಚಟುವಟಿಕೆಗಳನ್ನು ತಡೆಯಲು ಈ ಕ್ರಮ ಪರಿಣಾಮಕಾರಿಯಾಗಿದೆ ಎಂದು ತಿಳಿಸಿದರು.

ಪುರಪ್ರವೇಶ; ಬೃಹತ್ ಮೆರವಣಿಗೆ

ಜನರಿಗೆ ಸಮಸ್ಯೆ ಆಗದಂತೆ ಸಕಲ ವ್ಯವಸ್ಥೆ ಕಲ್ಪಿಸಲಾಗಿದೆ. ಇಡೀ ಆವರಣ ಕೇಸರಿಮಯವಾಗಿದೆ.

ಅದ್ದೂರಿ ಪುರಪ್ರವೇಶ: ಇಂದು (ಮೇ.8) ಸಂಜೆ 5 ಗಂಟೆಗೆ ಬಿಎಸ್‌ವೈ ಚಿತ್ರದುರ್ಗ ಪುರ ಪ್ರವೇಶ ಮಾಡಿದರು. ನಗರದ ಕನಕ ವೃತ್ತದಿಂದ ಚಳ್ಳಕೆರೆ ಗೇಟಿನವರೆಗೆ ಅದ್ದೂರಿ ಮೆರವಣಿಗೆ ನಡೆಯಿತು. ಅಲಂಕೃತ ತೆರೆದ ವಾಹನದಲ್ಲಿ ರಾಜಾಹುಲಿ ಸಾಗಿದರು. ಮಹಿಳೆಯರು ಪೂರ್ಣಕುಂಭ ಹಿಡಿದು ಸ್ವಾಗತಿಸಿದರು. ವಿಶೇಷ ಎಂದರೆ ನಾರಿ ಶಕ್ತಿ ವಂದನ್ ಅಡಿಯಲ್ಲಿ ಮಹಿಳೆಯರು ಒನಕೆ ಹಿಡಿದು ಮೆರವಣಿಗೆಯಲ್ಲಿ ಸಾಗಿದರು. 25 ಜನಪದ ಕಲಾಮೇಳಗಳು ಹಾಗೂ ಯಡಿಯೂರಪ್ಪನವರ ಜೀವನ ಕಥನ ಸಾರುವ ಎಐ ತಾಂತ್ರಿಕತೆಯ 6 ಸ್ತಬ್ಧ ಚಿತ್ರಗಳು ಮೆರವಣಿಗೆಯ ಪ್ರಮುಖ ಆಕರ್ಷಣೆಯಾ ಗಿದ್ದವು. 25 ಜನಪದ ತಂಡಗಳು, ಕಲಾ ತಂಡಗಳು ಸಹ ಈ ಮೆರವಣಿಗೆ ಯಲ್ಲಿ ಭಾಗಿಯಾಗಿದ್ದವು. ಬಿ.ವೈ. ವಿಜಯೇಂದ್ರ, ಗೋವಿಂದ ಕಾರಜೋಳ ಸೇರಿದಂತೆ ಮಾಜಿ ಸಚಿವರ ದಂಡು ಮೆರವಣಿಗೆಯಲ್ಲಿ ಭಾಗಿಯಾಗಿತ್ತು. ಶನಿವಾರ ನಡೆಯಲಿರುವ ಸಮಾರಂಭಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಹೀಗಾಗಿ ಕೋಟೆನಾಡು ಚಿತ್ರದುರ್ಗ ಈಗ ಯಡಿಯೂರಪ್ಪನವರ ಅಭಿಮಾನಿಗಳ ಸಮುದ್ರವಾಗಿ ಮಾರ್ಪಟ್ಟಿದೆ. 50 ವರ್ಷಗಳ ರಾಜಕೀಯ ಹೋರಾಟದ ಹಾದಿಯನ್ನ ಮೆಲುಕು ಹಾಕಲು ಇಡೀ ಕೇಸರಿ ಪಡೆ ಸಜ್ಜಾಗಿದೆ.

ಮೈಸೂರು ಮಿತ್ರ

ಶನಿವಾರ 9 ಮೇ 2026

ಮೈಸೂರು ವಾಣಿ ವಿಲಾಸ ವಾಟರ್ ವರ್ಕ್ಸ್ ಕಟ್ಟಡ ಪಾರಂಪರಿಕ ಶೈಲಿಯಲ್ಲೇ ದುರಸ್ತಿಗೆ ಆಗ್ರಹ





ಮೈಸೂರಿನ ಯಾದವಗಿರಿಯಲ್ಲಿರುವ ವಾಣಿ ವಿಲಾಸ ನೀರು ಸರಬರಾಜು ಮಂಡಳಿಯ ಕಾರ್ಯಾಲಯದ ಪಾರಂಪರಿಕ ಕಟ್ಟಡದ ದುರಸ್ತಿ ಕಾರ್ಯ ಆರಂಭಿಸಲಾಗಿದೆ.

ಮೈಸೂರು, ಮೇ 8(ಎಂಟಿವೈ)– ಮೈಸೂರಿನ ವಾಣಿ ವಿಲಾಸ ನೀರು ಸರಬರಾಜು ಮಂಡಳಿಯ ಕಾರ್ಯಾಲಯದ ಪಾರಂಪರಿಕ ಕಟ್ಟಡ ದುರಸ್ತಿ ಕಾರ್ಯ ಆರಂಭಿಸಲಾಗಿದ್ದು, ಪಾರಂಪರಿಕ ಶೈಲಿಯಲ್ಲಿ ಸುಣ್ಣದ ಗಾರೆ ಬಳಸುವಂತೆ ಪಾರಂಪರಿಕ ತಜ್ಞರು ಸೂಚಿಸಿದ್ದಾರೆ.

ಮೈಸೂರಿಗೆ ಶುದ್ಧ ಕುಡಿಯುವ ನೀರು ಪೂರೈಸುವ ನಿಟ್ಟಿನಲ್ಲಿ 19ನೇ ಶತಮಾನದಲ್ಲಿ(1896–1900) ಮಹಾರಾಣಿ ಕೆಂಪನಂಜಮ್ಮಣ್ಣಿ ವಾಣಿ ವಿಲಾಸ ಅವರ ಗೌರವಾರ್ಥವಾಗಿ ನಿರ್ಮಿಸಲಾದ ವಾಣಿ ವಿಲಾಸ ನೀರು ಸರಬರಾಜು ಮಂಡಳಿ ಕಾರ್ಯಾಲಯದ ಈ ಕಟ್ಟಡವನ್ನ ಸುಣ್ಣದ ಗಾರೆ ಬಳಸಿ ಅಂದಿನ ತಂತ್ರಜ್ಞಾನಕ್ಕೆ ಅನುಗುಣವಾಗಿ ನಿರ್ಮಿಸಲಾಗಿತ್ತು 125 ವರ್ಷ ಇತಿಹಾಸವುಳ್ಳ ಈ ಪಾರಂಪರಿಕ ನಿರ್ಮಾಣದಲ್ಲಿ ಮಂಗಳೂರು ಹೆಂಚಿನ ಮೇಲ್ಛಾವಣಿಗೆ ಗೆದ್ದಲು ಹಿಡಿದು, ಮಳೆ ನೀರು ಸೋರಿಕೆಯಾಗುತ್ತಿತ್ತು. ಇದರಿಂದ ಕಟ್ಟಡದ ಗೋಡೆಗಳು ಶಿಥಿಲಗೊಳ್ಳುವ ಆತಂಕವಿತ್ತು. ಈ ಹಿನ್ನಲೆಯಲ್ಲಿ ಕಾರ್ಯಾಲಯದ ಎರಡು ಪ್ರಮುಖ ಕಟ್ಟಡಗಳನ್ನು ದುರಸ್ತಿ ಮಾಡುವ ಕಾರ್ಯ ಕೈಗೆತ್ತಿಗೊಳ್ಳಲಾಗಿದೆ.

ದುರಸ್ತಿ ಕಾರ್ಯ ಆರಂಭ: ಶತಮಾನದ ಇತಿಹಾಸ, ಪಾರಂಪರಿಕ ಮಹತ್ವವಿರುವ ವಾಣಿ ವಿಲಾಸ ನೀರು ಸರಬರಾಜು ಮಂಡಳಿಯ ಪ್ರಮುಖ ಎರಡು ಕಟ್ಟಡದ ದುರಸ್ತಿ ಕಾರ್ಯ ಆರಂಭಿಸಲಾಗಿದ್ದು, ಮೇಲ್ಛಾವಣಿಗಾಗಿ ಬಳಸಲಾಗಿದ್ದ, ಮಂಗಳೂರು ಹೆಂಚನ್ನು ಕೆಳಗಿಳಿಸಲಾಗಿದೆ. ಅಲ್ಲದೆ, ರೀಪರ್, ಜಂತಿಯನ್ನು ಗೆದ್ದಲು ತಿಂದುಕೊಂಡಿದ್ದು, ಅವುಗಳಲ್ಲಿ ಕೆಲವನ್ನು ಬದಲಿಸಬೇಕಾಗಿದೆ. ಈಗಾಗಲೇ ಕಳೆದ ಒಂದು ವಾರದಿಂದ ಮೇಲ್ಛಾವಣಿ ತೆರವು ಮಾಡಲಾಗಿದ್ದು, ಕಟ್ಟಡದ ಒಳಭಾಗದ ಗೋಡೆ ಗಾರೆ ತೆರವುಗೊಳಿಸಲಾಗಿದೆ. ಗೋಡೆಯನ್ನು ಮೇಲಿನಿಂದ ನೆಲಮಟ್ಟದವರೆಗೆ ಗಾರೆ ಚಕ್ಕೆ ತೆರವು ಮಾಡಲಾಗಿದ್ದು, ಹೊಸದಾಗಿ ಗಾರೆ ಹಾಕಿ ಪ್ಲಾಸ್ಟರಿ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಕಟ್ಟಡ ದುರಸ್ತಿಗೆ ಬೇಕಾದ ಸಾಮಗ್ರಿಗಳನ್ನು ತಂದಿಡಲಾಗಿದ್ದು, ತ್ವರಿತಗತಿಯಲ್ಲಿ ದುರಸ್ತಿ ಕಾಮಗಾರಿ ಪೂರ್ಣ ಗೊಳಿಸಲು ನಿರ್ಧರಿಸಲಾಗಿದೆ.

ಪಾರಂಪರಿಕ ಶೈಲಿಯಲ್ಲೇ ದುರಸ್ತಿ ಮಾಡಬೇಕು: ಪಾರಂಪರಿಕ ತಜ್ಞ ಪ್ರೊ.ಎನ್.ಎಸ್.ರಂಗರಾಜು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ವಾಣಿ ವಿಲಾಸ ನೀರು ಸರಬರಾಜು ಮಂಡಳಿಯ ಕಾರ್ಯಾಲಯದ ಕಟ್ಟಡ ಪಾರಂಪರಿಕ ಕಟ್ಟಡವಾಗಿದ್ದು, ಅದನ್ನು ಸಂರಕ್ಷಣೆ ಮಾಡಲು ಪಾರಂಪರಿಕ ಶೈಲಿಯಲ್ಲಿಯೇ ದುರಸ್ತಿ ಕಾರ್ಯ ನಡೆಸಬೇಕು. ಈ ಹಿಂದೆ ಈ ಕಟ್ಟಡವನ್ನು ಸುಣ್ಣದ ಗಾರೆಯಲ್ಲಿ ನಿರ್ಮಿಸಲಾಗಿದೆ ಅದಕ್ಕೆ ಈಗ ಸಿಮೆಂಟ್ ಗಾರೆ ಬಳಸಿ ಪ್ಲಾಸ್ಟರಿ ಮಾಡಿದರೆ ಅದು ಕೆಲ ತಿಂಗಳಷ್ಟೇ ಬಾಳಿಕೆ ಬರುತ್ತದೆ. ಆ ನಂತರ ಗಾರೆ ಚಕ್ಕೆ ಉದುರುತ್ತದೆ. ಈ ಕಾರಣದಿಂದ ಪಾರಂಪರಿಕ ಕಟ್ಟಡದ ಸಂರಕ್ಷಣೆಯಲ್ಲಿ ನಿಯಮ ಪಾಲಿಸಬೇಕು. ಸುಣ್ಣದ ಗಾರೆ ಸಿಗುತ್ತದೆ. ಆ ಸುಣ್ಣದ ಗಾರೆಯನ್ನೇ ಬಳಸಿ ದುರಸ್ತಿ (ಸಂರಕ್ಷಣೆ) ಮಾಡಬೇಕು ಎಂದು ಆಗ್ರಹಿಸಿದರು.

ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ವಿಚಾರದಲ್ಲಿ ನಿರ್ಲಕ್ಷ್ಯ ಮಾಡಬಾರದು. ಈ ಹಿಂದೆಯೂ ಮೈಸೂರು ಮಹಾನಗರ ಪಾಲಿಕೆ ಕಟ್ಟಡ ಸೇರಿದಂತೆ ಕೆಲ ಕಟ್ಟಡಕ್ಕೆ ಸಿಮೆಂಟ್ ಗಾರೆ ಬಳಸಲು ಮುಂದಾಗಿದ್ದಾಗ ಆಕ್ಷೇಪ ವ್ಯಕ್ತಪಡಿಸಿ, ಸುಣ್ಣದ ಗಾರೆಯನ್ನೇ ಬಳಸುವಂತೆ ಒತ್ತಾಯಿಸಲಾಗಿತ್ತು. ಬಳಿಕ ಸುಣ್ಣದ ಗಾರೆ ಬಳಸಿ ದುರಸ್ತಿ ಮಾಡಲಾಗಿದೆ. ಇದೀಗ ಆ ಕಟ್ಟಡ ಸುಭದ್ರವಾಗಿದೆ. ಈ ಹಿನ್ನೆಲೆಯಲ್ಲಿ ವಾಣಿ ವಿಲಾಸ ನೀರು ಸರಬರಾಜು ಮಂಡಳಿ ಪಾರಂಪರಿಕ ಕಟ್ಟಡವನ್ನು ಸಂರಕ್ಷಣೆ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಸಾವಿಗೆ ಮುನ್ನ 20 ಪ್ರಯಾಣಿಕರ ಪಾರು ಮಾಡಿದ ಬಸ್ ಚಾಲಕ!



ಡಿಕ್ಕಿ ಹೊಡೆದು ನಿಂತಿರುವ ಖಾಸಗಿ ಬಸ್

ಮಡಿಕೇರಿ, ಮೇ 8–ಹೃದಯಾಘಾತವಾಗಿ ನರಳುತ್ತಿದ್ದರೂ 20 ಪ್ರಯಾಣಿಕರ ಪ್ರಾಣ ಉಳಿಸಿ, ಬಳಿಕ ಬಸ್ ಚಾಲಕರೊಬ್ಬರು ಇಹಲೋಕ ತ್ಯಜಿಸಿದ್ದಾರೆ. ಈ ಮನಮಿಡಿಯುವ ಘಟನೆ ಮಡಿಕೇರಿ ಸಮೀಪದ ತಾಳತ್ತ ಮನೆ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಇಂದು ಮುಂಜಾನೆ ನಡೆದಿದೆ. ಖಾಸಗಿ ಬಸ್ ಚಾಲಕ ಬೆಂಗಳೂರು ಮೂಲದ ಶಿವಕುಮಾರ್(50) ಸಾವಿನಲ್ಲೂ ಸಾರ್ಥಕತೆ ಮೆರೆದವರಾಗಿದ್ದಾರೆ.

ಬೆಂಗಳೂರಿನಿಂದ ಮಡಿಕೇರಿ ಮಾರ್ಗವಾಗಿ ಸುಳ್ಯ ಕಡೆಗೆ ಇಂದು ಮುಂಜಾನೆ 4.45ರ ಸಮಯದಲ್ಲಿ ಈ ಬಸ್ ತೆರಳುತ್ತಿತ್ತು. ಈ ಸಂದರ್ಭ ತಾಳತ್ತಮನೆ ಬಳಿ ಚಾಲಕ ಶಿವ ಕುಮಾರ್‌ಗೆ ಹೃದಯ ಬೇನೆ ಕಾಣಿಸಿಕೊಂಡಿದೆ ಒಂದೆಡೆ ನೋವು ಜೀವ ಹಿಂಡುತ್ತಿದ್ದರೂ ಶಿವಕುಮಾರ್ ಮಾತ್ರ ಬಸ್ ಸಂಪೂರ್ಣ ನಿಯಂತ್ರಣಕ್ಕೆ ತರುವತ್ತ ಸರ್ವ ಪ್ರಯತ್ನ ನಡೆಸಿ, ಕೊನೆಗೆ ರಸ್ತೆ ಬದಿ ಚರಂಡಿಗೆ ಇಳಿಸಿದ್ದಾರೆ. ಈ ವೇಳೆ ಬಸ್ ಬಲಬದಿಯ ಬರೆಗೆ ಅಪ್ಪಳಿಸಿ ವಾಲಿಕೊಂಡು ನಿಂತಿದೆ. ಅಂತೂ ಬಸ್‌ನಲ್ಲಿದ್ದ ಸುಮಾರು 20 ಪ್ರಯಾಣಿಕರು ಅಪಾಯದಿಂದ ಪಾರಾಗಿದ್ದಾರೆ. ಇತ್ತ ಚಾಲಕ ಶಿವಕುಮಾರ್‌ರನ್ನು ಜಿಲ್ಲಾಸ್ಪತ್ರೆಗೆ ಸಾಗಿಸಲಾಯಿತಾದರೂ ಅಷ್ಟೊತ್ತಿಗಾಗಲೇ ಅವರು ಮೃತಪಟ್ಟಿರುವುದಾಗಿ ವೈದ್ಯರು ದೃಢಪಡಿಸಿದರು. ಘಟನೆ ಕುರಿತು ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಚಂದ್ರಶೇಖರ್ ವರ್ತನೆಯಿಂದ ಮೈಸೂರು ವಿವಿ ಘನತೆಗೆ ಧಕ್ಕೆ

ಸಿಂಡಿಕೇಟ್ ಸಭೆಯಲ್ಲಿ ಖಂಡನೆ



ಚಂದ್ರಶೇಖರ್

ಮೈಸೂರು, ಮೇ 8– ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯ ಟಿ.ಆರ್.ಚಂದ್ರಶೇಖರ್ ಆಧಾರ ರಹಿತ ಆರೋಪ ಮಾಡುತ್ತಿರುವುದಾಗಿ ವಿವಿಯ ಕಾರ್ಯಸೌಧದಲ್ಲಿ ನಡೆದ ಸಿಂಡಿಕೇಟ್‌ನ ಮೂರನೇ ಸಾಮಾನ್ಯ ಸಭೆಯಲ್ಲಿ ಖಂಡನೆ ವ್ಯಕ್ತಪಡಿಸಲಾಗಿದೆ.

ಸಿಂಡಿಕೇಟ್ ಸದಸ್ಯ ಟಿ.ಆರ್.ಚಂದ್ರಶೇಖರ್ ಅವರು ವಿವಿಯ ಆಡಳಿತ, ಟೆಂಡರ್ ಪ್ರಕ್ರಿಯೆ ಮತ್ತು ಆರ್ಥಿಕ ವಿಚಾರಗಳಿಗೆ ಸಂಬಂಧಿಸಿದಂತೆ ಆಧಾರ ರಹಿತ ಹಾಗೂ ದುರುದ್ದೇಶಪೂರಿತ ಆರೋಪ ಮಾಡುತ್ತಿದ್ದಾರೆ. ವಿವಿ ಅಧಿಕಾರಿಗಳ ಬಳಿ ಯಾವುದೇ ಸ್ಪಷ್ಟನೆ ಪಡೆಯದೆಯೇ ಮಾಧ್ಯಮಗಳು ಹಾಗೂ ಸಾಮಾಜಿಕ ಜಾಲತಾಣಗಳ ಮೂಲಕ ಸುಳ್ಳು ಆರೋಪ ಮಾಡುತ್ತಿದ್ದಾರೆ. ವಿವಿಯ ಹೆಸರು ಹಾಗೂ ಅಧಿಕೃತ ಲೋಗೋ ದುರ್ಬಳಕೆ ಮೂಲಕ ವಿವಿಯ ಘನತೆಗೆ ಧಕ್ಕೆಯನ್ನುಂಟು ಮಾಡುತ್ತಿದ್ದಾರೆ ಎಂದು ಸಭೆಯಲ್ಲಿ ಖಂಡಿಸಲಾಯಿತು.

ಚಂದ್ರಶೇಖರ್ ಅವರ ಹೇಳಿಕೆಗಳಿಂದ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಲ್ಲಿ ಗೊಂದಲ ಸೃಷ್ಟಿಯಾಗುವುದರೊಂದಿಗೆ ವಿವಿಯ ಪ್ರತಿಷ್ಠೆಗೆ ಹಾನಿಯಾಗಿದೆ. ಇವರ ನಡವಳಿಕೆಯನ್ನು ಸರ್ವಾನುಮತದಿಂದ ಖಂಡಿಸಿ, ರಾಜ್ಯ ಸರ್ಕಾರ ಹಾಗೂ ಕುಲಾಧಿಪತಿಗಳೂ ಆದ ರಾಜ್ಯಪಾಲರಿಗೆ ವರದಿ ಸಲ್ಲಿಸಿ, ಕಾನೂನು ಕ್ರಮಕ್ಕೆ ಮನವಿ ಮಾಡಲು ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಲಾಯಿತು.

ಇದೇ ವೇಳೆ ಟಿ.ಆರ್.ಚಂದ್ರಶೇಖರ್ ಅವರು ವಿವಿಯ ಅಧಿಕೃತ ಕಾರ್ಯ ನಿರ್ವಾಹಕ ಅಧಿಕಾರಿಯಲ್ಲ. ಅವರು ವಿವಿಯ ಆಂತರಿಕ ವಿಚಾರ ಕುರಿತಾಗಿ ನೀಡುತ್ತಿರುವ ಹೇಳಿಕೆಗಳು ವಿವಿಯ ಅಧಿಕೃತ ನಿಲುವಲ್ಲ ಎಂದು ಸ್ಪಷ್ಟಪಡಿಸಲಾಗಿದೆ

ರಜೆಯಲ್ಲಿರುವ ಮೈಸೂರು ವಿವಿ ಕುಲಸಚಿವರ ಹೆಸರಿನಲ್ಲಿ ಪತ್ರಿಕಾ ಪ್ರಕಟಣೆ; ಇಲ್ಲಿಯೂ ಅಧಿಕಾರ ದುರುಪಯೋಗ!

ತಮ್ಮ ವಿರುದ್ಧ ಖಂಡನೆಗೆ ಕಚೇರಿ ದುರ್ಬಳಕೆ; ಸಿಂಡಿಕೇಟ್ ಸದಸ್ಯ ಚಂದ್ರಶೇಖರ್ ಆರೋಪ

ಮೈಸೂರು, ಮೇ 8– ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆ ವಿಚಾರವಾಗಿ ರಜೆಯಲ್ಲಿರುವ ಕುಲಸಚಿವರ ಹೆಸರಿನಲ್ಲಿ ಅನಧಿಕೃತ ಪ್ರಕಟಣೆ ನೀಡಿ, ಅಧಿಕಾರ ದುರುಪಯೋಗಪಡಿಸಿಕೊಳ್ಳಲಾಗಿದೆ ಎಂದು ಸಿಂಡಿ ಕೇಟ್ ಸದಸ್ಯ ಟಿ.ಆರ್. ಚಂದ್ರಶೇಖರ್ ಆರೋಪಿಸಿದ್ದಾರೆ.

ತಮ್ಮ ವಿರುದ್ಧ ಸಿಂಡಿಕೇಟ್ ಸಭೆಯಲ್ಲಿ ಖಂಡನೆ ವ್ಯಕ್ತವಾಗಿರುವ ಸಂಬಂಧ ಪ್ರತಿಕ್ರಿಯಿಸಿರುವ ಅವರು, ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಹಾಗೂ ಕುಲಸಚಿವರ ಕಚೇರಿಯ ಇನ್‌ಚಾರ್ಜ್ ಎಂ.ಜೆ.ಮಂಜುನಾಥ್ ಅವರು ಕುಲಸಚಿವರ ಕಚೇರಿಯ ದುರುಪಯೋಗ ಮಾಡಿಕೊಂಡು ನನ್ನ ವಿರುದ್ಧ ಶಿಸ್ತಿನ ಕ್ರಮದ ಕಾನೂನುಬಾಹಿರ ನಿರ್ಣಯದ ಪ್ರಕಟಣೆ ನೀಡಿದ್ದಾರೆ ಎಂದು ತಿಳಿಸಿದ್ದಾರೆ.

ರಾಜ್ಯಪಾಲರಿಂದ ನೇಮಕಗೊಂಡಿರುವ ಸಿಂಡಿಕೇಟ್ ಸದಸ್ಯನಾಗಿ ವಿಶ್ವವಿದ್ಯಾನಿಲಯದ ಆಸ್ತಿ, ಸಾರ್ವಜನಿಕ ಹಣ ಹಾಗೂ ವಿದ್ಯಾರ್ಥಿಗಳ ಹಿತಾಸಕ್ತಿ ದೃಷ್ಟಿಯಿಂದ ಜವಾಬ್ದಾರಿ ನಿರ್ವಹಿಸುತ್ತಿದ್ದೇನೆ. ಕೋಟ್ಯಾಂತರ ಮೌಲ್ಯದ ಕಾನೂನು ಬಾಹಿರ ಟೆಂಡರ್‌ಗಳು ಹಾಗೂ ಆಡಳಿತಾತ್ಮಕ ಪಾರದರ್ಶಕತೆಯ ಉಲ್ಲಂಘನೆಯನ್ನು ದಾಖಲೆ ಸಹಿತ ಬಹಿರಂಗಪಡಿಸಿದ್ದೇನೆ. ಆದರೆ, ಅಕ್ರಮಗಳ ಬಗ್ಗೆ ತನಿಖೆ ಮಾಡುವ ಬದಲು, ನನ್ನ ವಿರುದ್ಧವೇ ಕ್ರಮ ಕೈಗೊಳ್ಳುವ ಕಾನೂನು ಬಾಹಿರ ಸಿಂಡಿಕೇಟ್ ನಿರ್ಣಯ ಕೈಗೊಂಡಿರುವುದಲ್ಲದೆ, ಇದಕ್ಕೆ ಕುಲಸಚಿವರ ಕಚೇರಿಯನ್ನು ನಿಯಮಬಾಹಿರವಾಗಿ ಬಳಸಿಕೊಳ್ಳಲಾಗಿದೆ ಎಂದು ದೂರಿದ್ದಾರೆ.

ಕುಲಸಚಿವರಾದ ಎಂ.ಕೆ.ಸವಿತಾ ಅವರು ಮೇ 7ರಿಂದ 10 ದಿನಗಳ ಕಾಲ ರಜೆಯಲ್ಲಿದ್ದು, ಕಚೇರಿಯ ಇನ್‌ಚಾರ್ಜ್ ಅನ್ನು ಹಣಕಾಸು ಅಧಿಕಾರಿ ಪ್ರೊ.ಎಂ.ಜೆ.ಮಂಜುನಾಥ್ ಅವರಿಗೆ ವಹಿಸಲಾಗಿದೆ. ಕಚೇರಿ ನಿರ್ವಹಣೆ ಹೊರತು ಕುಲಸಚಿವರ ಯಾವುದೇ ಮಹತ್ವದ ಅಧಿಕಾರ ಚಲಾಯಿಸುವಂತಿಲ್ಲ. ಆದರೆ, ಕುಲಪತಿ ಪ್ರೊ.ಲೋಕನಾಥ್ ಅವರ ನೇರ ನಿರ್ದೇಶನದಂತೆ ಮಂಜುನಾಥ್ ಅವರು ಕುಲಸಚಿವರ ಹೆಸರಿನಲ್ಲಿ ಮೇ 7ರಂದು ನನ್ನ ವಿರುದ್ಧ ಪತ್ರಿಕಾ ಪ್ರಕಟಣೆ ಬಿಡುಗಡೆ ಮಾಡಿದ್ದಾರೆ. ತಾವು ಪ್ರಕಟಣೆ ನೀಡಿಲ್ಲ ಎಂದು ಕುಲಸಚಿವರೇ ಮಾಧ್ಯಮದವರಿಗೆ ಸ್ಪಷ್ಟಪಡಿಸಿದ್ದಾರೆ ಎಂದು ತಿಳಿದುಬಂದಿದೆ. ಇದು ಕೇವಲ ಆಡಳಿತಾತ್ಮಕ ಲೋಪವಲ್ಲ, ಓರ್ವ ಅಧಿಕಾರಿಯ ಗುರುತಿನ ದುರ್ಬಳಕೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಬಿಎಸ್‌ವೈ ಪುರಪ್ರವೇಶ; ಸನ್ಮಾನ



ಚಿತ್ರದುರ್ಗದಲ್ಲಿ ಶನಿವಾರ 'ಬಿಎಸ್‌ವೈ ಅಭಿಮಾನೋತ್ಸವ' ಸಮಾರಂಭ ಏರ್ಪಡಿಸಿರುವ ಹಿನ್ನೆಲೆಯಲ್ಲಿ ಶುಕ್ರವಾರ ಪುರಪ್ರವೇಶ ಮಾಡಿದ ರಾಜಕೀಯ ಮುತ್ಸದಿ ಬಿ.ಎಸ್.ಯಡಿಯೂರಪ್ಪ ಅವರನ್ನು ಮೈಸೂರು ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಸನ್ಮಾನಿಸಿ, ಗೌರವಿಸಿದರು. ಈ ವೇಳೆ ಹಿರಿಯ ಮುಖಂಡರಾದ ಶಂಕರ್ ರಾವ್, ಶಿವಮೊಗ್ಗ ಸಂಸದ ಬಿ.ವೈ.ರಾಘವೇಂದ್ರ, ಚೇತನ್, ಹೇಮಾ ಶಂಕರ್ ಮತ್ತಿತರರಿದ್ದರು.

ವ್ಯಕ್ತಿ ನಾಪತ್ತೆ



ಮೈಸೂರು, ಮೇ 8– ನಗರದ ನಜರ್‌ಬಾದ್ ಪೊಲೀಸ್ ಠಾಣೆ ವ್ಯಾಪ್ತಿಯ ನಿವಾಸಿ ಚಂದ್ರ ಎಂಬ ವ್ಯಕ್ತಿಯು ಕಳೆದ ಏ.23ರಿಂದ ನಾಪತ್ತೆಯಾಗಿರುವುದಾಗಿ ದೂರು ದಾಖಲಾಗಿದೆ.

ಸುಮಾರು 36 ವರ್ಷದ ಇವರು ಎತ್ತರವಾಗಿದ್ದು, ನಾಪತ್ತೆಯಾದ ದಿನ ಸಿಮೆಂಟ್ ಬಣ್ಣದ ಟೋಪಿ, ತಿಳಿನೀಲಿ ಬಣ್ಣದ ಜೀನ್ಸ್ ಪ್ಯಾಂಟ್, ಜರ್ಕಿನ್ ಧರಿಸಿದ್ದರು. ಇವರ ಬಗ್ಗೆ ಸುಳಿವು ದೊರೆತರೆ ನಜರ್‌ಬಾದ್ ಪೊಲೀಸ್ ಠಾಣೆ(0821–2418308/2418305) ಸಂಪರ್ಕಿಸಿ, ಮಾಹಿತಿ ನೀಡುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.

ಮೈಸೂರು ಜಿಲ್ಲಾ ಪೊಲೀಸರಿಗೆ ಯೋಗ ತರಬೇತಿ

ಪೊಲೀಸರ ಆರೋಗ್ಯ ಚೆನ್ನಾಗಿದ್ದರೆ, ಸಮಾಜದ ಆರೋಗ್ಯ ಚೆನ್ನಾಗಿರಲಿದೆ



ಮೈಸೂರು ಜಿಲ್ಲಾ ಪೊಲೀಸರಿಗಾಗಿ ಜ್ಯೋತಿನಗರದಲ್ಲಿರುವ ಡಿಎಆರ್ ಮೈದಾನದ ಆವರಣದಲ್ಲಿ ಯೋಗ ಶಿಬಿರ ನಡೆಸಲಾಯಿತು.

ಮೈಸೂರು, ಮೇ 8(ಜಿಎ)–ಪೊಲೀಸರಲ್ಲಿ ಏಕಾಗ್ರತೆ ಹೆಚ್ಚಿಸಲು ಮತ್ತು ಸಾರ್ವಜನಿಕರೊಂದಿಗೆ ಮತ್ತಷ್ಟು ಸಂಯಮದಿಂದ ವರ್ತಿಸಲು ಯೋಗವು ರಾಮಬಾಣ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

ಮೈಸೂರು ಜಿಲ್ಲಾ ಪೊಲೀಸರಿಗಾಗಿ ಜ್ಯೋತಿನಗರದಲ್ಲಿರುವ ಡಿಎಆರ್ ಮೈದಾನದ ಆವರಣದಲ್ಲಿ ಇಲಾಖೆ ವತಿಯಿಂದ ಏರ್ಪಡಿಸಿದ್ದ 5 ದಿನಗಳ ಯೋಗ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಪೊಲೀಸರ ಆರೋಗ್ಯ ಚೆನ್ನಾಗಿದ್ದರೆ ಮಾತ್ರ ಸಮಾಜದ ಆರೋಗ್ಯ ಚೆನ್ನಾಗಿರಲು ಸಾಧ್ಯ. ಹೀಗಾಗಿ ನೀವುಗಳು ಯೋಗದ ಜೊತೆಗೆ ಪ್ರತೀ ದಿನ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಬೇಕು. ಈ ಮೂಲಕ ನೀವುಗಳು ದೈಹಿಕ ಹಾಗೂ ಮಾನಸಿಕವಾಗಿ ಸದೃಢರಾಗಿರಬೇಕು. ಇದರಿಂದ ಇಲಾಖೆಗೂ ತಮಗೂ ಒಳ್ಳಿತಾಗಲಿದೆ ಎಂದರು.

ಪೊಲೀಸರು ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಲು ಹಗಲಿರುಳು ಶ್ರಮಿಸುತ್ತಾರೆ. ಈ ವೇಳೆ ನಮ್ಮ ಪೊಲೀಸ್ ಸಿಬ್ಬಂದಿ ಎಷ್ಟು ಒತ್ತಡದಲ್ಲಿರುತ್ತಾರೆ ಎಂಬುದು ನಮಗೆಲ್ಲರಿಗೂ ಗೊತ್ತು. ಅಂತಹ ಒತ್ತಡದ ವಾತಾವರಣವನ್ನು ಯೋಗಾಭ್ಯಾಸ ತಿಳಿಗೊಳಿಸುತ್ತದೆ ಎಂದರು.

ಅಂತರಾಷ್ಟ್ರೀಯಮಟ್ಟದ ಯೋಗ ಗುರು ಡಾ.ಭಾಗೀರಥಿ ಅವರು 400 ಮಂದಿ ಜಿಲ್ಲಾ ಪೊಲೀಸರಿಗೆ ಪ್ರತಿ ದಿನ ಬೆಳಿಗ್ಗೆ ಯೋಗ ತರಬೇತಿ ನೀಡಿದ್ದು, ಅವರ ಮಾರ್ಗದರ್ಶನದಲ್ಲಿ ಪೊಲೀಸರು ಸೂರ್ಯ ನಮಸ್ಕಾರ, ಸುಖಾಸನ, ತಾಡಾಸನ, ಭುಜಂಗಾಸನ ಮತ್ತು ವಜ್ರಾಸನ ಸೇರಿದಂತೆ ವಿವಿಧ ಆಸನಗಳ ತರಬೇತಿ ಪಡೆದುಕೊಂಡ ಜೊತೆಗೆ ಪ್ರಾಣಾಯಾಮ ಮತ್ತು ಧ್ಯಾನದ ಮೂಲಕ ಕೆಲಸದ ಒತ್ತಡವನ್ನು ಹೇಗೆ ನಿಯಂತ್ರಿಸುವುದರ ಬಗ್ಗೆ ತಿಳಿಸಲಾಯಿತು. ಎಸ್‌ಪಿ.ಮಲ್ಲಿಕಾರ್ಜುನ ಬಾಲದಂಡಿ ಅವರು ಕೂಡ ಐದು ದಿನವೂ ಯೋಗ ಶಿಬಿರದಲ್ಲಿ ಪಾಲ್ಗೊಂಡಿದ್ದುದು ವಿಶೇಷವಾಗಿತ್ತು. ಸಮಾರೋಪ ಕಾರ್ಯಕ್ರಮದಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ನಾಗೇಶ್, ಸಿ.ಮಲ್ಲಿಕ್, ಡಿಎಆರ್ ಡಿವೈಎಸ್‌ಪಿ ವೀರಣ್ಣ ಮತ್ತಿತರರು ಪಾಲ್ಗೊಂಡಿದ್ದರು.

ತಲೆ ಮೇಲೆ ಕಲ್ಲು ಎತ್ತಿ ಹಾಕಿ ಕೊಲೆ; ಸ್ನೇಹಿತನ ಬಂಧನ



ಉಮರ್

ಮೈಸೂರು, ಮೇ 8(ಎಂಕೆ)– ಮೈಸೂರಿನ ಉದಯಗಿರಿಯಲ್ಲಿ ಇತ್ತೀಚೆಗೆ ಮೊಹಮ್ಮದ್ ಉಮರ್(37) ಎಂಬಾತನ ತಲೆಯ ಮೇಲೆ ಕಲ್ಲು ಎತ್ತಿ ಹಾಕಿ ಬರ್ಬರವಾಗಿ ಕೊಲೆ ಮಾಡಿದ್ದ ಆರೋಪಿಯನ್ನು ಉದಯಗಿರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೂಲತಃ ದಾವಣಗೆರೆಯ ಕೆಟಿಜೆ ನಗರದ ನಿವಾಸಿ ಖಾಸಿಮ್ ಸಾಬ್ ಎಂಬುವರ ಮಗ ಬಾಬು(43) ಬಂಧಿತ ಆರೋಪಿ. ಮೈಸೂರಿನ ಕ್ಯಾತಮಾರನಹಳ್ಳಿಯಲ್ಲಿ ಬಾಡಿಗೆ ರೂಂನಲ್ಲಿ ವಾಸವಿದ್ದ ಆರೋಪಿ ಬಾಬು ಮತ್ತು ಕೊಲೆಯಾದ ಗೌಸಿಯಾನಗರದ ಮೊಹಮ್ಮದ್ ಉಮರ್ ಜೊತೆಯಲ್ಲೇ ಗಾರೆ ಕೆಲಸ ಮಾಡುತ್ತಿದ್ದರು.

ಕೂಲಿ ಕೆಲಸ ಮಾಡಿದ ನಂತರ ಇಬ್ಬರು ಕುಡಿದು ಬಾರ್ ಮುಂದೆಯೇ ಮಲಗುತ್ತಿದ್ದರು. ವಿಪರೀತ ಕುಡಿಯುತ್ತಿದ್ದ ಉಮರ್, ಆಗಾಗ ಹಣ ಕೊಡುವಂತೆ ಪೀಡಿಸುತ್ತಿದ್ದ ಎನ್ನಲಾಗಿದೆ. ಅದರಂತೆ ಮೇ 5ರ ಮುಂಜಾನೆ ಬಾಬು ಬಳಿ ಹಣ ಕೊಡುವಂತೆ ಪೀಡಿಸಿದಾಗ ಇಬ್ಬರ ನಡುವೆ ಮಾತಿಗೆ ಮಾತು ಬೆಳೆದು ಜಗಳವಾಗಿದೆ. ಈ ವೇಳೆ ಆರೋಪಿ ಬಾಬು, ಅಲ್ಲೇ ಇದ್ದ ಚಪ್ಪಡಿ ಕಲ್ಲನ್ನು ಉಮರ್ ತಲೆ ಮೇಲೆ ಎತ್ತಿ ಹಾಕಿ ಕೊಲೆ ಮಾಡಿದ್ದಾನೆ ಎಂದು ಉದಯಗಿರಿ ಠಾಣೆ ಪೊಲೀಸರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಮಳೆಗಾಗಿ ದೈವದ ಮೊರೆ



ಮಳೆಗಾಗಿ ಮೈಸೂರು ಕೆ.ಜಿ.ಕೊಪ್ಪಲಿನ ಉಸ್ತಾದ್ ಲಿಂಗೇಗೌಡರ ಹತ್ತು ಜನಗಳ ಗರಡಿ ವತಿಯಿಂದ ಶುಕ್ರವಾರ ಶ್ರೀ ರಾಮನ ಮೆರವಣಿಗೆ ನೆರವೇರಿಸಲಾಯಿತು. ಇದರ ಅಂಗವಾಗಿ ಸಾವಿರಾರು ಜನರಿಗೆ ಅನ್ನದಾನ ಏರ್ಪಡಿಸಲಾಗಿತ್ತು.

ಫಿನ್ ಆಲೆನ್ ರೌದ್ರಾವತಾರಕ್ಕೆ ತತ್ತರಿಸಿದ ಡೆಲ್ಲಿ ಕ್ಯಾಪಿಟಲ್ಸ್

ಕೊಲ್ಕತ್ತಾ, ಮೇ 8(ವಿವಿಹೆಚ್)– ಫಿನ್ ಆಲೆನ್ ಅವರ ಅಜೇಯ ಶತಕದಾಟದ ಬಲದಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು 8 ವಿಕೆಟ್‌ಗಳಿಂದ ಮಣಿಸಿದ ಕೊಲ್ಕತ್ತಾ ನೈಟ್ ರೈಡರ್ಸ್, ಟೂರ್ನಿಯಲ್ಲಿ ಸತತ ನಾಲ್ಕನೇ ಗೆಲುವು ದಾಖಲಿಸಿತು.

ಇಲ್ಲಿನ ಈಡೆನ್ ಗಾರ್ಡನ್ ಮೈದಾನದಲ್ಲಿ ಶುಕ್ರವಾರ ನಡೆದ ಐಪಿಎಲ್–2026ರ 51ನೇ ಲೀಗ್ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ ಕ್ಯಾಪಿಟಲ್ಸ್ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 142 ರನ್ ಗಳಿಸಲಷ್ಟೆ ಶಕ್ತವಾಯಿತು. ಈ ಸಾಧಾರಣ ಮೊತ್ತ ಬೆನ್ನತ್ತಿದ ಕೊಲ್ಕತ್ತಾ ನೈಟ್ ರೈಡರ್ಸ್ 14.2 ಓವರ್‌ಗಳಲ್ಲಿ ಕೇವಲ 2 ವಿಕೆಟ್ ಕಳೆದುಕೊಂಡು 147 ರನ್ ಗಳಿಸಿ ಗೆಲುವಿನ ನಗೆ ಬೀರಿತು.

ತವರಿನಂಗಳದಲ್ಲಿ ಗುರಿ ಬೆನ್ನತ್ತಿದ ಕೆಕೆಆರ್ ಪರ ಫಿನ್ ಆಲೆನ್ ರೌದ್ರಾವತಾರ ಪ್ರದರ್ಶಿಸಿದರು. ಆರಂಭದಲ್ಲಿ ನಿಧಾನ ಗತಿಯ ಬ್ಯಾಟಿಂಗ್ ಆಡಿದ ಅವರು ನಂತರ ಡೆಲ್ಲಿ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದರು. ಕೊನೆಯ 5 ಓವರ್‌ಗಳಲ್ಲಿ ಒಬ್ಬರೇ ಬರೋಬ್ಬರಿ 9 ಸಿಕ್ಸರ್ ಬಾರಿಸುವ ಮೂಲಕ ತಂಡಕ್ಕೆ ಸುಲಭದ ಗೆಲುವು ತಂದುಕೊಟ್ಟರು.

ಆಲೆನ್ 47 ಎಸೆತ ಎದುರಿಸಿ, 4 ಬೌಂಡರಿ ಹಾಗೂ 10 ಭರ್ಜರಿ ಸಿಕ್ಸರ್‌ಗಳ ಸಹಾಯದಿಂದ ಅಜೇಯ 100 ರನ್ ಬಾರಿಸಿದರು. ಇವರಿಗೆ ಸಾಥ್ ನೀಡಿದ ಕ್ಯಾಮರೋನ್ ಗ್ರೀನ್ 27 ಎಸೆತಗಳಲ್ಲಿ 33 ರನ್ ಗಳಿಸಿ ಕ್ರೀಜ್‌ನಲ್ಲಿದ್ದು, ತಂಡಕ್ಕೆ ಗೆಲುವು ತಂದುಕೊಟ್ಟರು. ಇವರಿಗೂ ಮೊದಲು ಬ್ಯಾಟಿಂಗ್ ಮಾಡಿದ್ದ ನಾಯಕ ಅಜಿಂಕ್ಯಾ ರಹಾನೆ 13(9), ಅಂಗ್‌ಕ್ರಿಶ್ ರಘುವಂಶಿ 1(3) ರನ್ ಗಳಿಸಿ ಔಟಾದರು.

ಡೆಲ್ಲಿ ಪರ ನಾಯಕ ಅಕ್ಷರ್ ಪಟೇಲ್ ಒಂದು ವಿಕೆಟ್ ಕಿತ್ತರು. ಇದಕ್ಕೂ ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ ಕ್ಯಾಪಿಟಲ್ಸ್ ಪರ ಆರಂಭಿಕ ಬ್ಯಾಟರ್ ಪಥುಮ್ ನಿಸ್ಸಾಂಕ 50(29), ಕೆ.ಎಲ್. ರಾಹುಲ್ 23(14) ಉತ್ತಮ ಆರಂಭ ಒದಗಿಸಿಕೊಟ್ಟರು. ಈ ಇಬ್ಬರ ಬಳಿಕ ಕ್ರೀಸ್‌ಗಿಳಿದ ಬ್ಯಾಟರ್‌ಗಳು ಕೆಕೆಆರ್ ಬೌಲಿಂಗ್ ದಾಳಿಗೆ ಮಂಕಾದರು.

ನಿತೀಶ್ ರಾಣಾ 8(10), ಸಮೀರ್ ರಿಜ್ವಿ 3(7), ಟ್ರಿಸ್ಟನ್ ಸ್ಟಬ್ಸ್ 2(4), ನಾಯಕ ಅಕ್ಷರ್ ಪಟೇಲ್ 11(22), ಮಿಚೆಲ್ ಸ್ಟಾರ್ಕ್ ಡಕ್‌ಔಟ್ ಆಗುವ ಮೂಲಕ ವೈಫಲ್ಯ ಅನುಭವಿಸಿದರು.

ಈ ವೇಳೆ ಅಲ್ಪ ಹೋರಾಟ ತೋರಿದ ಅಶುತೋಶ್ ಶರ್ಮಾ 28 ಎಸೆತಗಳಲ್ಲಿ 39 ರನ್ ಗಳಿಸಿ ತಂಡದ ಮೊತ್ತ ನೂರರ ಗಡಿ ದಾಟಿಸಿದರು. ವಿಪ್ರಾಜ್ ನಿಗಮ್ ಅಜೇಯ 3(3), ಲುಂಗಿ ಎನ್‌ಗಿಡಿ ಅಜೇಯ 1(1) ರನ್ ಗಳಿಸುವ ಮೂಲಕ ತಂಡ ಅಲ್ಪ ಮೊತ್ತಕ್ಕೆ ಕುಸಿಯಿತು.

ಚಿಣ್ಣರ ವನ ಬೇಸಿಗೆ ಶಿಬಿರ ಸಮಾರೋಪ



ಚಿಣ್ಣರ ವನ ಸಮಾರೋಪ ಸಮಾರಂಭದಲ್ಲಿ ಶಿಬಿರದ ಮಕ್ಕಳು ಸಾಮೂಹಿಕ ಗೀತೆ ಪ್ರಸ್ತುತಪಡಿಸಿದರು.

ಮೈಸೂರು, ಮೇ 8(ವಿವಿಹೆಚ್)– ಸೂತ್ರ ಫೌಂಡೇಶನ್ ವತಿಯಿಂದ ಹಿನಕಲ್‌ನ ವಿಜಯ ಶಿಕ್ಷಣ ಸಂಸ್ಥೆಯಲ್ಲಿ ಆಯೋಜಿಸಿದ್ದ 5ನೇ ವರ್ಷದ 'ಚಿಣ್ಣರ ವನ' ಮಕ್ಕಳ ಬೇಸಿಗೆ ಶಿಬಿರ ಯಶಸ್ವಿಯಾಗಿ ಸಮಾರೋಪಗೊಂಡಿತು.

ಶಿಬಿರದಲ್ಲಿ ಸುಮಾರು 65 ಮಕ್ಕಳು ಭಾಗವಹಿಸಿ, ರಂಗಾಯಣ, ನೀನಾಸಂ ಹಾಗೂ ಕಾವಾ ಕಾಲೇಜಿನ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ ಪಡೆದರು. ಮಕ್ಕಳು ಜಾನಪದ ಹಾಡುಗಳು, ನೃತ್ಯಗಳಾದ ಕಂಸಾಳೆ, ಪಟಕುಣಿತ, ಮಾರಿ ಕುಣಿತ ಮೊದಲಾದ ಕಲೆಗಳನ್ನು ಅಭ್ಯಾಸಿಸಿದರು.

ಇದೇ ವೇಳೆ ಚಿತ್ರಕಲೆ, ಪೇಪರ್ ಕ್ರಾಫ್ಟ್, ಮುಖವಾಡ ತಯಾರಿಕೆ, ಮುಖವರ್ಣಿಕೆ, ನಾಟಕ, ಕರಾಟೆ, ದೇಸಿ ಆಟಗಳು, ರಂಗಗೀತೆಗಳು ಸೇರಿದಂತೆ ಮಕ್ಕಳಲ್ಲಿ ನಾಯಕತ್ವ ಗುಣಗಳನ್ನು ಬೆಳೆಸುವ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಯಿತು. ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಉದ್ದೇಶಿಸಿ ಶಿಬಿರದಲ್ಲಿ ಸಾಂಸ್ಕೃತಿಕ, ಕ್ರೀಡಾ ಹಾಗೂ ಶೈಕ್ಷಣಿಕ ಚಟುವಟಿಕೆಗಳನ್ನು ಆಯೋಜಿಸಲಾಗಿತ್ತು. ಗ್ರಾಮೀಣ ಕ್ರೀಡೆಗಳ ಪರಿಚಯಕ್ಕಾಗಿ 'ಕೆಸರು ಗದ್ದೆ' ಕ್ರೀಡೆಯಲ್ಲಿ ಭಾಗವಹಿಸಿದ್ದರು.

ಇನ್ನು ವಾಸನ್ ಐ ಕೇರ್ ಸಹಯೋಗದಲ್ಲಿ ಉಚಿತ ಕಣ್ಣು ಪರೀಕ್ಷಾ ಶಿಬಿರವನ್ನು ನಡೆಸಲಾಗಿದ್ದು, ಮಕ್ಕಳು ಹಾಗೂ ಪೋಷಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪ್ರಯೋಜನ ಪಡೆದುಕೊಂಡರು.

ಸಮಾರೋಪ ಸಮಾರಂಭದಲ್ಲಿ ರಂಗ ನಿರ್ದೇಶಕ ದಿನೇಶ್ ಚಮ್ಮಾಳಿಗೆ, ಕಿರುತೆರೆ ಹಾಸ್ಯ ಕಲಾವಿದ ನಿಂಗರಾಜು ಮಂಡ್ಯ, ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕೈಗಾರಿಕೋದ್ಯಮಿಗಳ ಉತ್ಪನ್ನ ಹಾಗೂ ಮಾರಾಟ ಸಹಕಾರ ಸಂಘದ ರಾಜ್ಯಾಧ್ಯಕ್ಷ ಆರ್. ಮಂಜುನಾಥ್, ಮಕ್ಕಳ ರಂಗಭೂಮಿ ತಜ್ಞೆ ರಾಣಿ ಡಿ.ಎಂ ಹಾಗೂ ಸೂತ್ರ ಫೌಂಡೇಶನ್ ಸಂಸ್ಥಾಪಕ ಕಾರ್ಯದರ್ಶಿ ಜಗದೀಶ್ ಕುಮಾರ್.ಜಿ ಉಪಸ್ಥಿತರಿದ್ದರು.

ಡೊನೇಷನ್ ವಿರೋಧಿಸಿ ಎಸ್‌ಎಫ್‌ಐ ಪ್ರತಿಭಟನೆ

ಮಡಿಕೇರಿ, ಮೇ 8–ಡೊನೇಷನ್ ಹಾವಳಿ ವಿರೋಧಿಸಿ, ಜಿಲ್ಲಾ ಶಿಕ್ಷಣ ರೆಗ್ಯುಲೇಟಿಂಗ್ ಪ್ರಾಧಿಕಾರವನ್ನು ರಚಿಸುವಂತೆ ಹಾಗೂ ವಂತಿಗೆ ವಸೂಲಿ ಮಾಡುತ್ತಿರುವ ಶಿಕ್ಷಣ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ ರಾಜ್ಯ ಸಮಿತಿ ರಾಜ್ಯಾದ್ಯಂತ ಪ್ರತಿಭಟನೆ ನಡೆಸಲು ನೀಡಿದ ಕರೆಯ ಮೇರೆಗೆ ವಿರಾಜಪೇಟೆಯಲ್ಲೂ ಪ್ರತಿಭಟನೆ ನಡೆಸಲಾಯಿತು.

ವಿರಾಜಪೇಟೆ ತಹಸೀಲ್ದಾರ್ ಕಚೇರಿ ಎದುರು ಪ್ರತಿಭಟನೆ ನಡೆಸಿದ ವಿದ್ಯಾರ್ಥಿ ಫೆಡರೇಷನ್ ಕಾರ್ಯಕರ್ತರು ಉಪ ತಹಶೀಲ್ದಾರರ ಮೂಲಕ ಮುಖ್ಯಮಂತ್ರಿ ಹಾಗೂ ಜಿಲ್ಲಾಧಿಕಾರಿಗಳಿಗೆ 11 ಬೇಡಿಕೆಗಳನ್ನೊಳಗೊಂಡ ಮನವಿ ಪತ್ರವನ್ನು ಸಲ್ಲಿಸಿದರು.



ಡೊನೇಷನ್ ವಸೂಲಿ ವಿರೋಧಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ ರಾಜ್ಯ ಸಮಿತಿ ವಿರಾಜಪೇಟೆಯಲ್ಲಿ ಪ್ರತಿಭಟನೆ ನಡೆಸಿತು.

ಎಸ್‌ಎಫ್‌ಐ ರಾಜ್ಯ ಉಪಾಧ್ಯಕ್ಷ ಎಸ್. ಬಸವರಾಜ ಮಾತನಾಡಿ, ದಾಖಲಾತಿ ಹೆಸರಲ್ಲಿ ಖಾಸಗಿ ಶಾಲೆಗಳ ಆಡಳಿತ ಮಂಡಲಿ ಡೊನೇಷನ್ ಹಣವನ್ನು ಮನಬಂದಂತೆ ವಸೂಲಿ ಮಾಡಲು ಮುಂದಾಗಿದ್ದಾರೆ. ಡೊನೇಷನ್ ಪಿಡುಗಿನಿಂದಾಗಿ ಬಡ, ಹಿಂದುಳಿದ, ದಲಿತ, ಅಲ್ಪಸಂಖ್ಯಾತರ ಮಕ್ಕಳು ಖಾಸಗಿ ಶಾಲೆಗಳಲ್ಲಿ ಶಿಕ್ಷಣ ಪಡೆಯುವುದು ಅಸಾಧ್ಯವಾಗುತ್ತಿದೆ ಎಂದು ಆರೋಪಿಸಿದರು.

ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ವಿಜಯಕುಮಾರ್ ಮಾತನಾಡಿ, ವಿದ್ಯಾರ್ಥಿಗಳ ಸಂಖ್ಯೆ, ಕಲಿಕಾ ಮಾಧ್ಯಮ, ಶುಲ್ಕದ ವಿವರ, ಕ್ರೀಡಾಂಗಣ, ಶೌಚಾಲಯ, ಶಿಕ್ಷಕರ ಸಂಖ್ಯೆ ಮುಂತಾದ ಮಾಹಿತಿಯನ್ನು ಶಾಲಾ ಆವರಣದಲ್ಲಿ ಫ್ಲೆಕ್ಸ್ ಪ್ರಕಟಿಸಬೇಕು, ಇದೇ ಮಾಹಿತಿಯನ್ನು ಇಲಾಖೆ ವೆಬ್‌ಸೈಟ್‌ನಲ್ಲೂ ಪ್ರಕಟಿಸಬೇಕೆಂದು ಶಿಕ್ಷಣ ಇಲಾಖೆ ಆದೇಶಿಸಿದ್ದರೂ ಸಹ ಇದನ್ನು ಖಾಸಗಿ ಶಿಕ್ಷಣ ಸಂಸ್ಥೆಗಳವರು ಈವರೆಗೂ ಜಾರಿಗೆ ತಂದಿಲ್ಲ ಎಂದು ಆರೋಪಿಸಿದರು.

ಡಿವೈಎಫ್‌ಐ ರಾಜ್ಯಾಧ್ಯಕ್ಷೆ ಲವಿತ್ರ ವಸ್ತ್ರದ್, ಎಸ್‌ಎಫ್‌ಐ ರಾಜ್ಯ ಜಂಟಿ ಕಾರ್ಯದರ್ಶಿ ವಿನುಷ್ ರಮಣ, ಅನಂತರಾಜ್, ಮುಖಂಡರಾದ ರಮೇಶ್ ವಿರಾಪೂರ, ಮಂಜುನಾಥ ಡಗ್ಗಿ, ಸಾದಿಕ್, ಚಂದ್ರಶೇಖರ್, ರಾಘವೇಂದ್ರ, ದಿಲೀಪ್, ಎಂ. ಮಿಥುನ್, ಎಸ್.ಸಾಕ್ಷಿ, ಎಮ್. ಗೌತಮಿ, ಎ.ಸಿ.ಸಾಬು ಸೇರಿದಂತೆ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸಿಎಂಐಡಿಪಿ ಯೋಜನೆಯಡಿ
ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ

ಕುಶಾಲನಗರ, ಮೇ 8–ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆ (ಸಿಎಂಐಡಿಪಿ)ಅನುದಾನದ ಸುಮಾರು 5.50 ಕೋಟಿ ರೂ ವೆಚ್ಚದಲ್ಲಿ ಪುರಸಭೆ ವ್ಯಾಪ್ತಿಯಲ್ಲಿ ಅನೇಕ ಕಾಮಗಾರಿಗಳಿಗೆ ಶಾಸಕ ಡಾ. ಮಂತರ್ ಗೌಡ ಭೂಮಿಪೂಜೆ ನೆರವೇರಿಸಿದರು.

ಈಗ ಆಗಿರುವ ದೊಡ್ಡಮ್ಮ ತಾಯಿಯ ದೇವಾಲಯ ರಸ್ತೆಗೆ ಇರುವ ಕಮಾನನ್ನು 5ಲಕ್ಷ ರೂ.ಗಳ ವೆಚ್ಚದಲ್ಲಿ ಶಾಸಕರ ನಿಧಿಯಿಂದ ಪೂರೈಸಲಾಗಿದೆ. ಇದನ್ನು ಹೊರತುಪಡಿಸಿ, ಮುಖ್ಯಮಂತ್ರಿಗಳ ವಿಶೇಷ ಪ್ಯಾಕೇಜ್‌ನಲ್ಲಿ ಪುರಸಭೆ ವ್ಯಾಪ್ತಿ ರಸ್ತೆಗಳ ಅಭಿವೃದ್ಧಿಗಾಗಿ ವಿಶೇಷವಾಗಿ ಈ ಅನುದಾನವನ್ನು ಬಳಕೆ ಮಾಡಲಾಗುವುದು. ರಸ್ತೆಗಳ ಅಭಿವೃದ್ಧಿಯಾದರೆ, ನಗರದ ಅಭಿವೃದ್ಧಿ ಆಗುತ್ತದೆ ಎಂದರು.


ಅಭಿವೃದ್ಧಿ ಕಾರ್ಯಗಳಿಗೆ ಶಾಸಕ ಡಾ. ಮಂತರ್ ಗೌಡ ಭೂಮಿಪೂಜೆ ನೆರವೇರಿಸಿದರು.

ಪುರಸಭೆ ವ್ಯಾಪ್ತಿಯ ಸೋಮೇಶ್ವರ ದೇವಸ್ಥಾನದಿಂದ ಗುಂಡೂರಾವ್ ಬಡಾವಣೆಯ ಮಂಜುನಾಥ್ ಗುಂಡೂರಾವ್ ಮನೆತನಕ ರಸ್ತೆ ಅಭಿವೃದ್ಧಿಗಾಗಿ, ಆಸ್ಪತ್ರೆ ಸರ್ಕಲ್ ಬಳಿ ಇರುವ ಬಿಜಿಎಸ್ ವೃತ್ತದಿಂದ ಐಬಿವರೆಗೆ, ಹಳೆ ಮಾರುಕಟ್ಟೆ ರಸ್ತೆಯಲ್ಲಿಯ ನೌಶಾದ್ ಆಟೋ ಪಾರ್ಟ್ಸ್ ಕಲಿಮುಲ್ಲ ಅವರ ಮನೆತನಕ, ರಸ್ತೆ ಮತ್ತು ಎರಡು ಬದಿಯಲ್ಲೂ ಚರಂಡಿ ನಿರ್ಮಾಣ, ಆದರ್ಶ ದ್ರಾವಿಡ ಕಾಲೋನಿಯ ಸಮುದಾಯ ಭವನಕ್ಕೆ ತಡೆಗೋಡೆ ನಿರ್ಮಾಣ, ದಂಡಿನಪೇಟೆಯಲ್ಲಿರುವ ಅಜೀಜ್ ಮನೆಯಿಂದ ಮುನ್ನ ಅವರ ಮನೆತನಕ ರಸ್ತೆ ನಿರ್ಮಾಣ ಮತ್ತು ನಝೀಮಾ ಅವರ ಮನೆಯಿಂದ ಮೆಹರುನೀಸರ ಮನೆತನಕ ರಸ್ತೆ ನಿರ್ಮಾಣ, ಕಾಮಗಾರಿಗಳಿಗೆ ಸ್ಥಳೀಯ ನಿವಾಸಿಗಳ ಸಮಕ್ಷಮದಲ್ಲಿ ಭೂಮಿಪೂಜೆ ನಡೆಯಿತು.

ಕುಡಾ ಅಧ್ಯಕ್ಷ ಪ್ರಮೋದ್ ಮುತ್ತಪ್ಪ, ಪುರಸಭಾ ಮುಖ್ಯಾಧಿಕಾರಿ ಟಿ.ಎಸ್.ಗಿರೀಶ್, ಕೆಪಿಸಿಸಿ ಸದಸ್ಯ ಮಂಜುನಾಥ್, ಗುಂಡೂರಾವ್ ನಗರ ಕಾಂಗ್ರೆಸ್ ಅಧ್ಯಕ್ಷ ಜೋಸೆಫ್ ವಿಕ್ಟರ್ ಸೋನ್ಸ್, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಜಿ.ಆರ್. ಪುಷ್ಪಲತಾ, ಕಾಂಗ್ರೆಸ್ ಮುಖಂಡರಾದ ಎನ್.ಟಿ.ಜೋಸೆಫ್, ಶಜಿ, ರಾಯ್, ಡಿಸಿಸಿ ಸದಸ್ಯ ಸಜಿ, ಖಲೀಮುಲ್ಲಾ, ಎಂ.ಕೆ. ದಿನೇಶ್, ಎಂ.ಎಂ. ಪ್ರಕಾಶ್, ಜಗದೀಶ್, ಮುಳುಸೋಗೆ ಪಟೇಲ್ ಹರೀಶ್, ಉದ್ಯಮಿಗಳಾದ ಎಂ.ಕೆ. ದಿನೇಶ್, ಗೋಂದಿ ಬಸವನಹಳ್ಳಿ ಗೋವಿಂದಪ್ಪ, ನಾಗೇಗೌಡ ಬಡಾವಣೆಯ ಕೃಷ್ಣಪ್ಪ ಮೊದಲಾದವರಿದ್ದರು.

ಮೇ 12ರಿಂದ ಸಿಎನ್‌ಸಿಯಿಂದ ಅಹೋರಾತ್ರಿ ಸತ್ಯಾಗ್ರಹ

ಮಡಿಕೇರಿ: ಕ್ಷೇತ್ರ ಪುನರ್ ವಿಂಗಡಣೆಯ ಸಂದರ್ಭ ಕೊಡವರಿಗೆ ಪ್ರತ್ಯೇಕ ವಿಧಾನ ಸಭೆ ಮತ್ತು ಲೋಕಸಭಾ ಕ್ಷೇತ್ರವನ್ನು ರಚಿಸಬೇಕೆಂದು ಆಗ್ರಹಿಸಿ 48 ಗಂಟೆಗಳ ಅಹೋರಾತ್ರಿ ಸತ್ಯಾಗ್ರಹ ನಡೆಸಲು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ನಿರ್ಧರಿಸಿದೆ. ಮಡಿಕೇರಿಯ ಕೊಡವ ಮಂದ್‌ನಲ್ಲಿ ಮೇ 12ರಂದು ಬೆಳಿಗ್ಗೆ 10.30 ಗಂಟೆಯಿಂದ ಮೇ 14ರ ಬೆಳಿಗ್ಗೆ 10.30 ರವರೆಗೆ ಸತ್ಯಾಗ್ರಹ ನಡೆಸಲಾಗುವುದು. ಸತ್ಯಾಗ್ರಹದಲ್ಲಿ ವಿವಿಧ ಹಕ್ಕೊತ್ತಾಯಗಳನ್ನು ಮಂಡಿಸಿ, ಕೊಡವರಿಗೆ ಪ್ರತ್ಯೇಕ ವಿಧಾನ ಸಭೆ ಮತ್ತು ಲೋಕಸಭಾ ಕ್ಷೇತ್ರ ನೀಡಬೇಕೆಂದು ಆಗ್ರಹಿಸಿರುವ ಮನವಿ ಪತ್ರವನ್ನು ಭಾರತದ ರಾಷ್ಟ್ರಪತಿಗಳು, ಪ್ರಧಾನಮಂತ್ರಿಗಳು ಹಾಗೂ ಮುಖ್ಯ ಚುನಾವಣಾ ಆಯುಕ್ತರಿಗೆ ಸಲ್ಲಿಸಲಾಗುವುದು ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.


ಎನ್.ಯು.ನಾಚಪ್ಪ

ಕೊಡವರಿಗೆ ಮಾತ್ರ ಮೀಸಲಾದ ವಿಶೇಷ ಸಂಸದೀಯ ಮತ್ತು ವಿಧಾನ ಸಭಾ ಕ್ಷೇತ್ರಗಳನ್ನು ನೀಡಬೇಕು ಅಥವಾ ಸಿಕ್ಕಿಂನ ಸಂಘ ಕ್ಷೇತ್ರದ ಮಾದರಿಯಲ್ಲಿ ಕೊಡವ ಕ್ಷೇತ್ರಗಳನ್ನು ಸೃಷ್ಟಿಸಬೇಕು. ಶೇ.33ರ ಮಹಿಳಾ ಮೀಸಲಾತಿಯೊಳಗೆ ಕೊಡವ ಮಹಿಳೆಯರಿಗೆ ಒಳ ಮೀಸಲಾತಿ ನೀಡಬೇಕೆಂದು ಆಗ್ರಹಿಸಲಾಗುವುದು ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಪರ್ಯಾಯ ರಾಜಕಾರಣಕ್ಕಾಗಿ ಸಿಪಿಐಎಂನ ಅಧ್ಯಯನ ಶಿಬಿರ ಯಶಸ್ವಿ

ವಿರಾಜಪೇಟೆ, ಮೇ 8–ರಾಜ್ಯಮಟ್ಟದ ಅಧ್ಯಯನ ಶಿಬಿರವನ್ನು ನಡೆಸುವ ಮೂಲಕ ರಾಜ್ಯದಲ್ಲಿ ಪರ್ಯಾಯ ರಾಜಕಾರಣಕ್ಕಾಗಿ ಸಿಪಿಐಎಂ ಪಕ್ಷವನ್ನು ಬಲಪಡಿಸುವ ನಿಟ್ಟಿನಲ್ಲಿ ಯಶಸ್ವಿಯಾಗಿದ್ದಾಗಿ ಸಿಪಿಐಎಂ. ಪಕ್ಷದ ಗೌರವ ಅಧ್ಯಕ್ಷ ಡಾ.ಐ. ಆರ್.ದುರ್ಗಾಪ್ರಸಾದ್ ತಿಳಿಸಿದ್ದಾರೆ.

ಭಾರತ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ ವತಿಯಿಂದ ಅಂಬೇಡ್ಕರ್ ಭವನದ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ರಾಜ್ಯ ಮಟ್ಟದ ಅಧ್ಯಯನ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ಶಿಬಿರದಲ್ಲಿ ಸೈದ್ಧಾಂತಿಕ ತಿಳುವಳಿಕೆ ಹೆಚ್ಚಿಸುವ ಮೂಲಕ, ಪ್ರಸ್ತುತ ರೈತ ಕಾರ್ಮಿಕರು ಮತ್ತು ಸಾಮಾನ್ಯ ಜನರ ಮೂಲ ಪ್ರಶ್ನೆಗಳಿಗೆ ಚಳವಳಿ ರೂಪಿಸುವ ವಿಧಾನದ ಬಗ್ಗೆ ಹಾಗೂ ಪಕ್ಷವನ್ನು ಬಲಪಡಿಸುವ ನಿಟ್ಟಿನಲ್ಲಿ ರಾಜ್ಯ ಮಟ್ಟದ ಅಧ್ಯಯನ ನಡೆಸಲು ಉತ್ತಮ ಅವಕಾಶ ದೊರಕಿದಂತಾಯಿತು ಎಂದರು.



ಸಿಪಿಐಎಂನ ಅಧ್ಯಯನ ಶಿಬಿರದ ಸಮಾರೋಪದಲ್ಲಿ ಪಕ್ಷದ ಗೌರವ ಅಧ್ಯಕ್ಷ ಡಾ.ಐ.ಆರ್. ದುರ್ಗಾಪ್ರಸಾದ್ ಮಾತನಾಡಿದರು.

ಸಿಪಿಐಎಂ ರಾಜ್ಯ ಕಾರ್ಯದರ್ಶಿ ಡಾ. ಕೆ. ಪ್ರಕಾಶ್, ಪಕ್ಷದ ರಾಜ್ಯ ಕಾರ್ಯದರ್ಶಿ ಯಾದವಶೆಟ್ಟಿ, ರಾಜ್ಯ ಸಮಿತಿ ಸದಸ್ಯೆ ಕೆ. ವಿಮಲಾ, ಜಿಲ್ಲಾ ಕಾರ್ಯದರ್ಶಿ ಹೆಚ್.ಪಿ. ರಮೇಶ್, ಪಕ್ಷದ ಗೌರವ ಸಲಹೆಗಾರ ಐ.ಆರ್.ಪ್ರಮೋದ್, ಪ್ರಮುಖ ಎ.ಅರ್. ಕುಟ್ಟಪ್ಪ ಸಭೆಯನ್ನುದ್ದೇಶಿಸಿ ಮಾತನಾಡಿದರು, ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಯು.ಬಸವರಾಜು, ಬಿ.ಬಿ. ರಾಘವಲು, ಮೀನಾಕ್ಷಿ ಸುಂದರಾಂ ಭಾಗವಹಿಸಿದ್ದರು. ಅಧ್ಯಯನ ಶಿಬಿರದ ಮುಂದಾಳತ್ವ ವಹಿಸಿದ್ದ ಪಿ.ಆರ್.ಭರತ್, ಎ.ಸಿ.ಸಾಬು, ಶಾಜಿ ರಮೇಶ್, ಮತ್ತಿತರರು ಉಪಸ್ಥಿತರಿದ್ದರು. ಪಕ್ಷದ ಅಧ್ಯಯನ ಶಿಬಿರದಲ್ಲಿ ಸೇವೆಸಲ್ಲಿಸಿದ ಸದಸ್ಯರಿಗೆ ವೇದಿಕೆಯಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

ಮೇ 12, ಮಡಿಕೇರಿಯಲ್ಲಿ ಮಿನಿ ಉದ್ಯೋಗ ಮೇಳ

ಮಡಿಕೇರಿ ಮೇ 8–ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಮೇ 12 ರ ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆವರೆಗೆ ಮಿನಿ ಉದ್ಯೋಗಮೇಳ ನಡೆಯಲಿದೆ.

ಈ ಉದ್ಯೋಗ ಮೇಳದಲ್ಲಿ ಮೈಸೂರಿನ ಪಿರಾಮಲ್ ಫೈನಾನ್ಸ್ ಲಿಮಿಟೆಡ್, ಇನ್‌ಸ್ಟಂಟ್ ಐಟಿ ಟೆಕ್ನಾಲಜಿ, ಮುತ್ತೂಟ್ ಮನಿ ಫೈನಾನ್ಸ್, ಇವೊಲೋ ಬ್ಯಾಕ್ ರೆಸಾರ್ಟ್, ಮಡಿಕೇರಿಯ ಹ್ಯೂಂಡಾಯಿ ಕಾರ್ ಶೋ ರೂಮ್ ಮತ್ತು ಕಲ್ಯಾಣಿ ಮೋಟಾರ್ಸ್ ಕಾರ್ ಶೋ ರೂಮ್‌ಗಳವರು ತಮ್ಮ ಸಂಸ್ಥೆಗಳಲ್ಲಿ ಖಾಲಿಯಿರುವ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಿದ್ದಾರೆ.

ಈ ಮೇಳದಲ್ಲಿ ಖಾಸಗಿ ಕಂಪೆನಿಗಳು ಭಾಗವಹಿಸಿ, ತಮ್ಮಲ್ಲಿ ಖಾಲಿಯಿರುವ ಹುದ್ದೆಗಳನ್ನು ಮಿನಿ ಉದ್ಯೋಗಮೇಳದ ಮೂಲಕ ನೇಮಕಾತಿ ಮಾಡಿಕೊಳ್ಳಲಿದ್ದಾರೆ. ಈ ಮೇಳದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಡಿಪ್ಲೊಮಾ, ಪದವಿ ಹಾಗೂ ಸ್ನಾತಕೋತ್ತರ ಪದವಿ ಹೊಂದಿರುವ ಅಭ್ಯರ್ಥಿಗಳು ಭಾಗವಹಿಸಿ, ಉದ್ಯೋಗದ ನೆರವನ್ನು ಪಡೆಯಬಹುದಾಗಿದೆ. ಅಭ್ಯರ್ಥಿಗಳು ವಿದ್ಯಾರ್ಹತೆಯ ಮೂಲ ದಾಖಲಾತಿಗಳು, ಅನುಭವ ಪ್ರಮಾಣ ಪತ್ರ (ಅನ್ವಯಿಸುವವರಿಗೆ ಮಾತ್ರ) ಹಾಗೂ ಸ್ವ–ವಿವರವನ್ನೊಳಗೊಂಡ ಪ್ರತಿಗಳೊಂದಿಗೆ ಉದ್ಯೋಗ ಮೇಳಕ್ಕೆ ಹಾಜರಾಗುವಂತೆ ಜಿಲ್ಲಾ ಉದ್ಯೋಗಾಧಿಕಾರಿ ಸಿ.ಬಿ.ಮಂಜುನಾಥ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗೆ ಉದ್ಯೋಗ ಸಂವಹನಾಧಿಕಾರಿ (ಮೊಬೈಲ್ ನಂ.8296020826) ಯವರನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಸಂತ ಅಂತೋಣಿ ದೇವಾಲಯದ ವಾರ್ಷಿಕ ಮಹೋತ್ಸವಕ್ಕೆ ಧರ್ಮ ಗುರುಗಳು ಚಾಲನೆ ನೀಡಿದರು.

ಸಂತ ಅಂತೋಣಿ ದೇವಾಲಯದ ವಾರ್ಷಿಕ ಮಹೋತ್ಸವಕ್ಕೆ ವಿದ್ಯುಕ್ತ ಚಾಲನೆ

ಸುಂಟಿಕೊಪ್ಪ, ಮೇ 8– ಇಲ್ಲಿನ ಸಂತ ಅಂತೋಣಿ ದೇವಾಲಯದ ವಾರ್ಷಿಕ ಮಹೋತ್ಸವ ಮೇ 10ರವರೆಗೆ ನಡೆಯಲಿದೆ. ಮೈಸೂರು ಧರ್ಮಕ್ಷೇತ್ರದ ವಿದ್ಯಾಸಂಸ್ಥೆಗಳ ಕಾರ್ಯದರ್ಶಿ ರೆ.ಫಾ. ಎಡ್ವರ್ಡ್ ವಿಲಿಯಂ ಸಲ್ಡಾನಾ ಧ್ವಜಾರೋಹಣ ನೆರವೇರಿಸುವ ಮೂಲಕ ವಾರ್ಷಿಕ ಮಹೋತ್ಸವಕ್ಕೆ ವಿದ್ಯುಕ್ತ ಚಾಲನೆ ನೀಡಿದರು.

ದೇವಾಲಯದ ಆವರಣದಲ್ಲಿ ಧ್ವಜಾರೋಹಣವನ್ನು ನೆರವೇರಿಸುವ ಮೂಲಕ ಆಡಂಬರ ದಿವ್ಯ ಬಲಿಪೂಜೆಯನ್ನು ಮೈಸೂರು ಧರ್ಮಕ್ಷೇತ್ರದ ವಿದ್ಯಾ ಸಂಸ್ಥೆಗಳ ಕಾರ್ಯದರ್ಶಿ ರೆ.ಫಾ. ಎಡ್ವರ್ಡ್ ವಿಲಿಯಂ ಸಲ್ಡಾನಾ ಹಾಗೂ ವಲಯ ಧರ್ಮಗುರು ಮತ್ತು ಸಂತ ಮೈಕಲರ ದೇವಾಲಯದ ಧರ್ಮಗುರು ಜಾರ್ಜ್ ದೀಪಕ್, ಬೆಂಗಳೂರಿನ ಧರ್ಮಗುರು ಹಾಗೂ ಸಂತ ಅಂತೋಣಿ ದೇವಾಲಯದ ಧರ್ಮಗುರು ವಿಜಯಕುಮಾರ್ ನೆರವೇರಿಸಿದರು. ಹಬ್ಬದ ಸಿದ್ಧತೆಯಾಗಿ 2ನೇ ದಿನದ ಶುಕ್ರವಾರದಂದು ಸಂಜೆ 5.30 ಗಂಟೆಗೆ ಬಲಿಪೂಜೆ ಹಾಗೂ ಆರಾಧನೆಯನ್ನು ಕೆ.ಆರ್.ಪೇಟೆ ಬಾಲಯೇಸುವಿನ ದೇವಾಲಯದ ಧರ್ಮಗುರು ಟಿ.ಪೌಲೂಸ್ ನೆರವೇರಿಸಿದರು.

ಮುತ್ತಮ್ಮ ನಿಧನ

ನಾಪೋಕ್ಲು, ಮೇ 8–ಸಮೀಪದ ಪಾಲೂರು ಗ್ರಾಮದ ನಿವಾಸಿ ದಿ. ವೆಂಕಪ್ಪ ಪೂಜಾರಿ ಅವರ ಪತ್ನಿ ಬಿ.ವಿ.ಮುತ್ತಮ್ಮ (80) ಗುರುವಾರ ನಿಧನರಾದರು.



ಮೃತರು ಪುತ್ರ, ಐವರು ಪುತ್ರಿಯರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಶುಕ್ರವಾರ ಸ್ವಗ್ರಾಮದಲ್ಲಿ ಜರುಗಿತು.

ಚಾ.ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಕ್ರಮ ವಹಿಸಿ

ನೀರಿನ ತೊಂದರೆಯಿರುವ ಗ್ರಾಮಗಳಿಗೆ ಟ್ಯಾಂಕರ್‌ನಲ್ಲಿ ನೀರು ಕಳುಹಿಸಲು ಉಸ್ತುವಾರಿ ಸಚಿವರ ಸೂಚನೆ

ಚಾಮರಾಜನಗರ: ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಅಧಿಕಾರಿಗಳು ಕ್ರಮ ವಹಿಸಬೇಕು. ನೀರಿನ ಸಮಸ್ಯೆ ಉಲ್ಬಣವಾಗಿರುವ ಗ್ರಾಮಗಳಿಗೆ ಟ್ಯಾಂಕರ್‌ನಿಂದ ನೀರು ಪೂರೈಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಸೂಚನೆ ನೀಡಿದರು.



ಚಾ.ನಗರದ ಜಿಪಂ ಕೆಡಿಪಿ ಸಭಾಂಗಣದಲ್ಲಿ ವಿವಿಧ ಇಲಾಖೆಗಳ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಸಚಿವ ಕೆ. ವೆಂಕಟೇಶ್ ಮಾತನಾಡಿದರು.

ನಗರದ ಜಿಲ್ಲಾ ಪಂಚಾಯತ್ ಕೆಡಿಪಿ ಸಭಾಂಗಣದಲ್ಲಿ ವಿವಿಧ ಇಲಾಖೆಗಳ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯ ಚಾಮರಾಜನಗರ, ಕೊಳ್ಳೇಗಾಲ, ಯಳಂದೂರು, ಗುಂಡ್ಲುಪೇಟೆ, ಹನೂರು ತಾಲೂಕಿನಲ್ಲಿ ಯಾವ–ಯಾವ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯುಂಟಾಗಿದೆ. ಎಷ್ಟು ಗ್ರಾಮಕ್ಕೆ ಟ್ಯಾಂಕರ್ ಮೂಲಕ ಪೂರೈಸಲಾಗುತ್ತಿದೆ ಎಂಬ ಮಾಹಿತಿಯನ್ನು ಸಚಿವರು ಪಡೆದರು.

ಈ ವೇಳೆ ಚಾಮರಾಜನಗರ ತಾಪಂ ಇಓ ಮಾತನಾಡಿ, ಪುಣಜನೂರು ಗ್ರಾಪಂ ವ್ಯಾಪ್ತಿಯ ಎತ್ತೇಗೌಡನದೊಡ್ಡಿ, ದಡದಹಳ್ಳಿ, ಭೋಗಾಪುರ, ಜ್ಯೋತಿಗೌಡನಪುರ, ಬೇಡಗುಳಿ, ಕಾಡಿಗೆರೆ ಗ್ರಾಮಗಳಲ್ಲಿ ನೀರಿನ ಸಮಸ್ಯೆ ಇದ್ದು, 6 ಗ್ರಾಮಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಸಲಾಗುತ್ತಿದೆ ಎಂದರು.

ನೀರು ಬರದಿದ್ದರೂ ಪೈಪ್‌ಲೈನ್: ನಂತರ ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಭೋಗಾಪುರ ಗ್ರಾಪಂನಲ್ಲಿ ಕೊಳವೆ ಬಾವಿ ಕೊರೆಸಿದರೂ, ನೀರು ಬಂದಿಲ್ಲ. ಪೈಪ್ ಲೈನ್ ಕಾಮಗಾರಿ ನಡೆಸಿ, ಮೋಟಾರ್ ಅಳವಡಿಸಲಾಗಿದೆ ಎಂದು 3.50 ಲಕ್ಷ ಹಣ ಡ್ರಾ ಮಾಡಲಾಗಿದೆ. ನೀರೇ ಬಂದಿಲ್ಲ. ಹಣ ಡ್ರಾ ಮಾಡಿರುವುದು ಹೇಗೆ ಎಂದು ಪ್ರಶ್ನಿಸಿದರು.

ಕ್ಷೇತ್ರದ ಹಲವಾರು ಗ್ರಾಮಗಳಿಗೆ ಬಹುಗ್ರಾಮ ಯೋಜನೆಯಿಂದ ನೀರು ಪೂರೈಸಲಾಗುತ್ತಿದೆ. ಕುಡಿಯುವ ನೀರು ಸರಬರಾಜಿನಲ್ಲಿ ವ್ಯತ್ಯಯವಾದಾಗ ಸರಿಪಡಿಸಲೆಂದೇ ಸರ್ಕಾರ 5 ಕೋಟಿ ಮೀಸಲಿಡುತ್ತಿದೆ. ಇದಕ್ಕೆ ಸಂಬಂಧಿಸಿದಂತೆ ಎಷ್ಟು ಹಣ ಖರ್ಚು ಮಾಡಿದ್ದೀರಿ, ಮಾಹಿತಿ ನೀಡಿ ಎಂದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಎಂಜಿನಿಯರ್ ಅವರನ್ನು ತರಾಟೆಗೆ ತೆಗೆದುಕೊಂಡರು.

ಸುಳ್ಳು ಮಾಹಿತಿ ನೀಡಿದರೆ ಕ್ರಮ: ಶಾಸಕರ ಪ್ರಶ್ನೆಗೆ ಅವರಿಂದ ಯಾವುದೇ ಸಮರ್ಪಕ ಉತ್ತರಸಿಗಲಿಲ್ಲ. ಆ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಮಾತನಾಡಿ, ಸಭೆಯಲ್ಲಿ ಸುಳ್ಳು ಮಾಹಿತಿ ಸಬೂಬು ಹೇಳುವ ಅಧಿಕಾರಿಗಳಿಗೆ ಗೇಟ್‌ಪಾಸ್ ನೀಡುವುದು ನಮಗೆ ಗೊತ್ತಿದೆ ಎಂದು ಎಚ್ಚರಿಕೆ ನೀಡಿದರು.

ಆಡಳಿತಾತ್ಮಕ ಅನುಮೋದನೆಯಾಗದೇ ಹಣ ವೆಚ್ಚ ಮಾಡಿರುವವರ ವಿರುದ್ಧ ತನಿಖೆ ನಡೆಸಿ, ಸರ್ಕಾರಕ್ಕೆ ವರದಿ ಸಲ್ಲಿಸಬೇಕು ಎಂದು ಜಿಪಂ ಸಿಇಓಗೆ ಆದೇಶಿಸಿದರು.

> ಪುಣಜನೂರು ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ಮನೆ–ಮನೆಗೆ ಗಂಗಾ ಅಥವಾ ಬಹು ಗ್ರಾಮ ಯೋಜನೆ ಸೌಲಭ್ಯವಿಲ್ಲ. ಬೇಡಗುಳಿಯ ಬೆಟ್ಟದ ಬುಡದಲ್ಲಿ ನೀರಿನ ಝರಿ ಹರಿಯುತ್ತಿದ್ದು, ಅದಕ್ಕೆ ಪೈಪ್‌ಲೈನ್ ಕಾಮಗಾರಿ ನಡೆಸಿ, ನೀರು ಕೊಡಬಹುದಾಗಿದೆ. ನಾಳೆಯಿಂದಲೇ ಅಧಿಕಾರಿಗಳು ಕಾಮಗಾರಿ ಪ್ರಾರಂಭಿಸಬೇಕು.
>
> –ಸಿ.ಪುಟ್ಟರಂಗಶೆಟ್ಟಿ, ಶಾಸಕರು.

292 ಜನವಸತಿ ಪ್ರದೇಶದಲ್ಲಿ ನೀರಿನ ಸಮಸ್ಯೆ: ನಂತರ ಹನೂರು ಶಾಸಕ ಎಂ.ಆರ್. ಮಂಜುನಾಥ್ ಮಾತನಾಡಿ, ಹನೂರು ವಿಧಾನ ಸಭೆಯ 292 ಜನವಸತಿ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು, ಇದರ ನಿವಾರಣೆಗಾಗಿ ಕಾಮಗಾರಿ ಆರಂಭವಾಗಿ ಎರಡು ವರ್ಷವೇ ಕಳೆದಿದೆ. ಆದರೆ ಇನ್ನು ಪೂರ್ಣಗೊಂಡಿಲ್ಲ. ಆದಷ್ಟು ಬೇಗನೆ ಕಾಮಗಾರಿ ಪೂರ್ಣಗೊಳಿಸಿ ಹನೂರು ಭಾಗದಲ್ಲಿ ಗ್ರಾಮಗಳಿಗೆ ಕುಡಿಯುವ ನೀರೊದಗಿಸಬೇಕು ಎಂದು ಎಂಜಿನಿಯರ್‌ಗಳಿಗೆ ಖಡಕ್ ಸೂಚನೆ ನೀಡಿದರು.

ಇದೇ ವೇಳೆ ಕೃಷಿ ಇಲಾಖೆ ಜಂಟಿ ನಿರ್ದೇಶಕಿ ಸುಷ್ಮಾ ಅವರು ಜನವರಿಯಿಂದ ಮೇ ವರೆಗೆ ಸುರಿದ ಮಳೆಯ ಪ್ರಮಾಣ, ಬಿತ್ತನೆ ಬೀಜ, ರಸಗೊಬ್ಬರ ದಾಸ್ತಾನು ಬಗ್ಗೆ ಸಭೆಯಲ್ಲಿ ತಿಳಿಸಿದರು.

ಸಭೆಯಲ್ಲಿ ಶಾಸಕ ಎಚ್.ಎಂ. ಗಣೇಶಪ್ರಸಾದ್, ಚುಡಾಧ್ಯಕ್ಷ ಮಹಮದ್ ಅಸ್ಗರ್, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಎಚ್.ವಿ.ಚಂದ್ರು, ಜಿಪಂ ಕೆಡಿಪಿ ನಾಮನಿರ್ದೇಶನ ಸದಸ್ಯರಾದ ಶಂಕ್ರಪ್ಪ, ಸೈಯದ್ ಮುಜಾಯಿದ್, ಭವ್ಯ ಮುನಿರಾಜು, ಡಿಸಿ ಶ್ರೀರೂಪಾ, ಜಿಪಂ ಸಿಇಓ ಮೋನಾರೋತ್ ಹಾಜರಿದ್ದರು.

ಮೂಡ್ಲುಪುರ ಕೆರೆ ಮೀನುಗಳ ಮಾರಣಹೋಮ


ಚಾಮರಾಜನಗರ: ನಗರದ ಹೊರವಲಯದಲ್ಲಿರುವ ಮೂಡ್ಲುಪುರದ ಸಮೀಪವಿರುವ ಕೆರೆಗೆ ಒಳಚರಂಡಿ ನೀರು ನುಗ್ಗಿ ಮೀನುಗಳ ಮಾರಣಹೋಮವಾಗಿದೆ ಎಂದು ಕರ್ನಾಟಕ ಕಬ್ಬು ಬೆಳೆಗಾರರ ಸಂಘದ ಜಿಲ್ಲಾಧ್ಯಕ್ಷ ನಾಗರಾಜು ಆರೋಪಿಸಿದರು.



ನಗರಸಭೆಯ 7ನೇ ವಾರ್ಡ್ ಆಗಿರುವ ಮೂಡ್ಲುಪುರ ಗ್ರಾಮದಲ್ಲಿ ಮ್ಯಾನ್ ಹೋಲ್ ಹೊಡೆದು ಕೊಳಚೆ ನೀರು ಕೆರೆಗೆ ಸೇರಿದ ಪರಿಣಾಮ ಕೆರೆಯಲ್ಲಿದ್ದ ಮೀನುಗಳೆಲ್ಲ ಸತ್ತು ಹೋಗಿದ್ದು, ಇದಕ್ಕೆ ನಗರಸಭೆ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಆರು ತಿಂಗಳ ಹಿಂದೆಯೇ ಈ ಮ್ಯಾನ್‌ಹೋಲ್ ಪೈಪ್ ಹೊಡೆದು ಹೋಗಿದ್ದು, ಇದನ್ನು ದುರಸ್ತಿಪಡಿಸುವಂತೆ ಜಿಲ್ಲಾಡಳಿತ, ನಗರಸಭೆ ಅಧಿಕಾರಿಗಳಿಗೆ ಹಲವು ಬಾರಿ ಮನವಿ ನೀಡಲಾಗಿತ್ತು. ಆದರೆ, ಅಧಿಕಾರಿಗಳು ಯಾವುದೇ ಕ್ರಮವನ್ನು ವಹಿಸದ ಕಾರಣ ಇಂದು ಮೀನುಗಳು ಸತ್ತುಹೋಗಿವೆ. ಅಲ್ಲದೇ ಈ ಕೆರೆಯಲ್ಲಿ ಜಾನುವಾರುಗಳು ಸಹ ನೀರು ಕುಡಿಯುತ್ತವೆ. ಒಂದು ವೇಳೆ ಈ ನೀರು ಕುಡಿದು ಜಾನುವಾರುಗಳು ಮೃತಪಟ್ಟರೇ ಅದಕ್ಕೆ ನಗರಸಭೆ ಅಧಿಕಾರಿಗಳೇ ಪರಿಹಾರ ಕಟ್ಟಬೇಕಾಗುತ್ತದೆ ಎಂದು ಎಚ್ಚರಿಸಿದರು. ಅಲ್ಲದೇ ಕೂಡಲೇ ಮ್ಯಾನ್ ಹೋಲ್ ಅನ್ನು ಸರಿಪಡಿಸಬೇಕು ಎಂದು ಆಗ್ರಹಿಸಿದರು.

ಬಿ.ವಿ.ನಾಗರಾಜಶೆಟ್ಟಿ ನಿಧನ



ಬೇಗೂರು: ಗ್ರಾಮದ ದಾಸ ಬಣಜಿಗ ಸಮಾಜದ ಮುಖಂಡ ಹಾಗೂ ವಾಣಿಜ್ಯ ತೆರಿಗೆ ಇಲಾಖೆಯ ನಿವೃತ್ತ ನೌಕರ ಬಿ.ವಿ. ನಾಗರಾಜಶೆಟ್ಟಿ (67) ಗುರುವಾರರಾತ್ರಿ ನಿಧನರಾದರು.

ಮೃತರಿಗೆ ಪತ್ನಿ ಮಂಜುಳ, ಪುತ್ರ ಗ್ರಾಪಂ ಮಾಜಿ ಸದಸ್ಯ ಬಿ.ಎನ್.ಪುನೀತ್ ಕುಮಾರ್, ಪುತ್ರಿಯರಾದ ಪೂರ್ಣಿಮ, ಆಶಾರಾಣಿ, ಸೊಸೆ ಧನುಶ್ರೀ ಹಾಗೂ ಸಂಬಂಧಿ ಮಹೇಶ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯ ಸಂಸ್ಕಾರ ಬೇಗೂರು ಗ್ರಾಮದ ದಾಸ ಬಣಜಿಗರ ರುದ್ರಭೂಮಿಯಲ್ಲಿ ಶುಕ್ರವಾರ ಮಧ್ಯಾಹ್ನ ನೆರವೇರಿತು.

ಬಿ.ವಿ.ನಾಗರಾಜಶೆಟ್ಟಿ ನಿಧನಕ್ಕೆ ಶಾಸಕ ಎಚ್.ಎಂ.ಗಣೇಶ್ ಪ್ರಸಾದ್,ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಎಚ್.ಎಸ್.ನಂಜುಂಡಪ್ರಸಾದ್ ಶ್ರೀರಾಮ ಸೇನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜೆ.ಮಂಜುನಾಥ್, ಪತ್ರಕರ್ತ ಬೇಗೂರು ನಾಗೇಶ್, ತಾಲೂಕು ವೀರಶೈವ ಸಂಘದ ಮಾಜಿ ಅಧ್ಯಕ್ಷ ಶಿವಪ್ರಸಾದ್ (ಕಮರಹಳ್ಳಿ ರವಿ) ಸಂತಾಪ ಸೂಚಿಸಿದ್ದಾರೆ.

ಕಾಗಲವಾಡಿಗೆ ಜಿಲ್ಲಾ ಉಸ್ತುವಾರಿ ಸಚಿವರ ಭೇಟಿ

ಸ್ತ್ರೀ ಸೌಖ್ಯ ಕಾರ್ಯಕ್ರಮದಡಿ ಹಮ್ಮಿಕೊಂಡಿದ್ದ ಕ್ಯಾನ್ಸರ್ ತಪಾಸಣಾ ಶಿಬಿರ ವೀಕ್ಷಣೆ

ಚಾಮರಾಜನಗರ: ಸ್ತ್ರೀ ಸೌಖ್ಯ ಕಾರ್ಯಕ್ರಮದಡಿ ಮಹಿಳೆಯರಲ್ಲಿ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಿ ಆರಂಭದಲ್ಲಿಯೇ ರೋಗ ಪತ್ತೆಹಚ್ಚಿ ಚಿಕಿತ್ಸೆ ನೀಡುವ ಸಲುವಾಗಿ ನಡೆಸಲಾಗುತ್ತಿರುವ ಕ್ಯಾನ್ಸರ್ ತಪಾಸಣಾ ಶಿಬಿರಕ್ಕೆ ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಇಂದು ಭೇಟಿ ನೀಡಿ ವೀಕ್ಷಿಸಿದರು.


ಕ್ಯಾನ್ಸರ್ ತಪಾಸಣಾ ಶಿಬಿರಕ್ಕೆ ಸಚಿವ ಕೆ. ವೆಂಕಟೇಶ್ ಭೇಟಿ ನೀಡಿ ವೀಕ್ಷಿಸಿದರು.

ಚಾಮರಾಜನಗರ ತಾಲೂಕಿನ ಕಾಗಲವಾಡಿಯ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರಿನ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದ್ದ ಕ್ಯಾನ್ಸರ್ ತಪಾಸಣಾ ಶಿಬಿರಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು ಬೆಳಿಗ್ಗೆಯೇ ಭೇಟಿ ನೀಡಿ ವೀಕ್ಷಣೆ ಮಾಡಿದರು.

ಇದುವರೆಗೆ ಎಷ್ಟು ಕಡೆ ಇಂತಹ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಎಷ್ಟು ಮಂದಿ ನೋಂದಾಯಿಸಿಕೊಳ್ಳುತ್ತಿದ್ದಾರೆ. ತಪಾಸಣೆ, ಚಿಕಿತ್ಸೆಗೆ ಒಳಗಾಗಿರುವವರ ಸಂಖ್ಯೆ ಎಷ್ಟು ಎಂಬುದನ್ನು ಜಿಲ್ಲಾ ಉಸ್ತುವಾರಿ ಸಚಿವರು ಪ್ರಶ್ನಿಸಿ ಮಾಹಿತಿ ಪಡೆದುಕೊಂಡರು.

ಜಿಲ್ಲಾಧಿಕಾರಿ ಶ್ರೀರೂಪ, ವಿವರಿಸಿ ಗರ್ಭಕಂಠ ಕ್ಯಾನ್ಸರ್, ಸ್ತನ ಕ್ಯಾನ್ಸರ್ ತಪಾಸಣೆಯನ್ನು ಮಹಿಳೆಯರಿಗೆ ನಡೆಸಲಾಗುತ್ತಿದೆ. ಪುರುಷರಿಗೆ ಬಾಯಿ ಕ್ಯಾನ್ಸರ್ ತಪಾಸಣೆಯನ್ನೂ ಸಹ ಮಾಡಲಾಗುತ್ತಿದೆ. ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯು ಮೊಬೈಲ್ ಕ್ಯಾನ್ಸರ್ ತಪಾಸಣಾ ಘಟಕ (ಪಿಂಕ್ ಬಸ್) ದೊಂದಿಗೆ ವೈದ್ಯರು ಸಿಬ್ಬಂದಿ ಸ್ಥಳಕ್ಕೆ ಬಂದು ತಪಾಸಣೆ ಮಾಡುತ್ತಿದ್ದಾರೆ. ಈ ಘಟಕದಲ್ಲಿಯೇ ಎಲ್ಲಾ ವೈದ್ಯಕೀಯ ಪರೀಕ್ಷೆಗಳ ವ್ಯವಸ್ಥೆಗಳು ಇವೆ ಎಂದು ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್. ಚಿದಂಬರ ಅವರು ಮಾತನಾಡಿದರು.

ಕ್ಯಾನ್ಸರ್ ತಪಾಸಣೆಗಾಗಿ ಚಾಮರಾಜನಗರ ಜಿಲ್ಲೆಯು ವಿಶೇಷವಾಗಿ ರೂಪಿಸಿರುವ ಸ್ತ್ರೀ ಸೌಖ್ಯ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಲಿ. ಜಿಲ್ಲೆಯ ಜನರಿಗೆ ಅನುಕೂಲವಾಗಲಿ ಎಂದು ಜಿಲ್ಲಾ ಉಸ್ತುವಾರಿ ಸಚಿವರು ಹೇಳಿದರು. ಬಳಿಕ ಕಾಗಲವಾಡಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸಿದ ಜಿಲ್ಲಾ ಉಸ್ತುವಾರಿ ಸಚಿವರು ಅಲ್ಲಿ ಜನರಿಗೆ ಒದಗಿಸಲಾಗುತ್ತಿರುವ ವೈದ್ಯಕೀಯ ಚಿಕಿತ್ಸೆ, ಸೇವೆ ಕುರಿತು ಮಾಹಿತಿ ಪಡೆದರು. ಅಲ್ಲಿನ ವೈದ್ಯರು, ಇನ್ನಿತರ ಸಿಬ್ಬಂದಿಯೊಂದಿಗೆ ಮಾತನಾಡಿ ಪ್ರತಿನಿತ್ಯ ಎಷ್ಟು ಮಂದಿ ಆರೋಗ್ಯ ಸೇವೆಗಾಗಿ ಭೇಟಿ ನೀಡುತ್ತಿದ್ದಾರೆ. ಅವರಿಗೆ ನೀಡಲಾಗುತ್ತಿರುವ ಚಿಕಿತ್ಸೆ ಉತ್ತಮವಾಗಿದೆಯೇ, ಔಷಧೋಪಚಾರ ಚೆನ್ನಾಗಿ ನೀಡಲಾಗುತ್ತಿದೆಯೇ ಎಂದು ಪ್ರಶ್ನಿಸಿದರು.

ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಬಂದಿದ್ದ ಸಾರ್ವಜನಿಕರೊಂದಿಗೂ ಸಚಿವ ವೆಂಕಟೇಶ್ ಮಾತನಾಡಿ, ಅಲ್ಲಿನ ಸೇವೆಯ ಬಗ್ಗೆ ತಿಳಿದುಕೊಂಡರು. ಜಿಪಂ ಸಿಇಓ ಮೋನಾ ರೋತ್, ಜಿಲ್ಲಾ ಎಸ್‌ಪಿ ಎಂ. ಮುತ್ತುರಾಜು, ತಹಶೀಲ್ದಾರ್ ಗಿರಿಜಾ, ಜಿಲ್ಲಾ ಅಸಾಂಕ್ರಾಮಿಕ ರೋಗಗಳ ನಿವಾರಣಾಧಿಕಾರಿ ಡಾ.ಪಿ. ಚಂದ್ರಶೇಖರ್, ರಾಜೇಶ್ ಕುಮಾರ್, ಇತರರು ಇದ್ದರು.

ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕಾಗಿ ಪೂರಕ ವ್ಯವಸ್ಥೆ ಕಲ್ಪಿಸುವೆ

ಗುಂಡ್ಲುಪೇಟೆ: ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಾಂಸ್ಕೃತಿಕ, ಕ್ರೀಡೆ, ರಾ.ಸೇ.ಯೋ., ರೋವರ್ಸ್ ಮತ್ತು ರೇಂಜರ್ಸ್, ರೆಡ್‌ಕ್ರಾಸ್ ಹಾಗೂ ವಿವಿಧ ಸಮಿತಿಯ ಚಟುವಟಿಕೆಗಳ ಸಮಾರೋಪ ಸಮಾರಂಭ ನಡೆಯಿತು.

ಈ ಕಾರ್ಯಕ್ರಮವನ್ನು ಉದ್ಘಾಟಿಸಿದ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಮಾತನಾಡಿ, ಕಾಲೇಜಿನ ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗಿರಲಿ. ಅದಕ್ಕೆ ಬೇಕಾದ ಪೂರಕ ವ್ಯವಸ್ಥೆಗಳನ್ನು ಮಾಡಿಕೊಡಲಾಗುವುದು ಎಂದು ಭರವಸೆಯನ್ನು ನೀಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಅಪರ ಜಿಲ್ಲಾಧಿಕಾರಿ ಟಿ.ಜವರೇಗೌಡ ಮಾತನಾಡಿ, ವಿದ್ಯಾರ್ಥಿಗಳು ಕನಸುಗಳನ್ನು ಕಾಣಬೇಕು. ಎದೆಗುಂದಬಾರದು. ಆಲೋಚನೆಗಳು ಸಕರಾತ್ಮಕವಾಗಿರಬೇಕು. ಸತತ ಪ್ರಯತ್ನ ಇದ್ದರೆ ಗುರಿ ತಲುಪಲು ಸಾಧ್ಯ. ವಿದ್ಯಾರ್ಥಿಗಳು ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಉದ್ಯೋಗ ಪಡೆಯಲು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ವಿ ಕಾಣಬೇಕು ಎಂದು ತಿಳಿಸಿದರು.

ತಹಸೀಲ್ದಾರ್ ತನ್ಮಯ್ ಅವರು ವಿದ್ಯಾರ್ಥಿಗಳು ಭವಿಷ್ಯ ರೂಪಿಸಿಕೊಳ್ಳಲು ಶಿಕ್ಷಣ ಪ್ರಮುಖವಾದದು ಎಂದು ತಿಳಿಸಿದರು. ಕಾಲೇಜು ಅಭಿವೃದ್ಧಿ ಸಮಿತಿ ಕಾರ್ಯಾಧ್ಯಕ್ಷ ಕುಮಾರಸ್ವಾಮಿ.ಬಿ ಅವರು ವಿದ್ಯಾರ್ಥಿಗಳಿಗೆ ಹಿತ ನುಡಿಗಳನ್ನು ನುಡಿದರು.

ಪ್ರಾಂಶುಪಾಲ ಡಾ. ಮದನಕುಮಾರ್ ಎ.ಆರ್ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಸಾಂಸ್ಕೃತಿಕ ಸಂಚಾಲಕರಾದ ಲಕ್ಷ್ಮೀ ಎಸ್ ಎಸ್, ಕ್ರೀಡಾ ಸಂಚಾಲಕ ಪುಟ್ಟರಾಜು ಎಸ್.ಜೆ, ರಾ.ಸೇ.ಯೋ ಘಟಕಗಳ ಸಂಚಾಲಕರಾದ ಕವಿತಾ.ಎ, ಕೃಷ್ಣಮೂರ್ತಿ, ರೋವರ್ಸ್, ಸಂಚಾಲಕರಾದ ಡಾ. ತುಳಸಿರಾಮ್ ಎಸ್, ರೇಂಜರ್ಸ್ ಘಟಕದ ಸಂಚಾಲಕರಾದ ದಿವ್ಯಾಭಾರತಿ ಜೆ, ರೆಡ್ಕ್ರಾಸ್ ಘಟಕದ ಸಂಚಾಲಕರಾದ ಸಂಯುಕ್ತ ಸಿಂಗ್.ಟಿ, IQAC ಸಂಚಾಲಕರಾದ ವಿಜಯ್ ಕುಮಾರ್, ಗ್ರಂಥಪಾಲಕ ಶ್ರೀನಿವಾಸ ನಾಯಕ ಮತ್ತು ಇತರರು ಇದ್ದರು. ಡಾ. ಜ್ಯೋತಿ .ಕೆ.ಎಸ್ ಸ್ವಾಗತಿಸಿದರು. ಬಿ.ಎಸ್ಸಿ ವಿದ್ಯಾರ್ಥಿನಿ ಯಶೋಧ ನಿರೂಪಿಸಿದರು.


ಕಾರ್ಯಕ್ರಮವನ್ನು ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಉದ್ಘಾಟಿಸಿದರು

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

SITE FOR SALE
30X40 N/F in Srinagara 'C' Block
20x40 S/F in YESH Smart City (Beerihundi)
8971261355
9591810822

ನಿವೇಶನ ಮಾರಾಟಕ್ಕಿದೆ
ಮೊಹಲಂನಗರ
40x60 ಉತ್ತರ ದಿಕ್ಕು
ರಿಂಗ್ ರೋಡ್ ಹತ್ತಿರ
9739826533

SITE FOR SALE
30X53, W/F, E KATHA, Sapthamatruka,
Sri Enclave, IT City,
Near Prasanthchaya Layout, Before JSS University
Sq. Ft. Rs. 2300/-
8088839853

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

ಪ್ರವಾಸ
9 ದಿನಗಳ ಅಯೋಧ್ಯಾ ನೇಪಾಳ ಮುಕ್ತಿನಾಥ ಪ್ರವಾಸ 4–6–26.
4 ದಿನಗಳ ಕಾಶಿ ಪ್ರವಾಸ 4–6–26.
10 ದಿನಗಳ ಕಾಶ್ಮೀರ ಲೇಹ್ ಲಡಾಕ್ ಪ್ರವಾಸ 16–6–26.
13 ದಿನಗಳ ಚಾರ್ ಧಾಮ್ ಪ್ರವಾಸ 26–5–26
ಸುವರ್ಣ ಯಾತ್ರಾ
9019462508 / 9008381022

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದಲ್ಲಿನ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಪುರುಷ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ
ವಿದ್ಯಾರ್ಹತೆ : SSLC ಮೇಲ್ಪಟ್ಟು,
ವಯೋಮಿತಿ : 50 ವರ್ಷದೊಳಗೆ
ಸಂಬಳ: 18000 (8 ಗಂಟೆ, 26 ದಿನಗಳು)
ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ.
9620777819

ಶ್ರೀ ಗೌರೀಶಂಕರ ಟ್ರಾವೆಲ್ಸ್
29–5–2026 (13 ದಿನ): ಹರಿದ್ವಾರ್, ಋಷಿಕೇಷ್, ಗಂಗೋತ್ರಿ, ಉತ್ತರ ಕಾಶಿ, ಯಮುನೋತ್ರಿ, ಗುಪ್ತಕಾಶಿ, ಬದರಿನಾಥ್, ಕೇದಾರ್‌ನಾಥ್, ದೇವಪ್ರಯಾಗ್, ದೆಹಲಿ.
(ವಿಮಾನ, ಬಸ್, ಊಟ, ರೂಂ)
Mob: 9620002114

SITE FOR SALE
20x30 North Face
Dream city layout.
MUDA Approved
Bogadi Road,
Owner Meeting
Rate : 25 Lakhs
8861220989

SITE FOR SALE
ಪೊಲೀಸ್ ಬಡಾವಣೆ,
J.S.S. ಬಡಾವಣೆ,
ಬನ್ನೂರು ರಸ್ತೆಗಳಲ್ಲಿ
30x40, 40x60
ನಿವೇಶನಗಳು ಲಭ್ಯವಿದೆ.
9448447035

ಬೇಕಾಗಿದ್ದಾರೆ

ಗ್ಯಾಸ್ ಏಜನ್ಸಿಯಲ್ಲಿ ಸಿಲಿಂಡರ್ ಡೆಲಿವರಿ ಮಾಡಲು ಹುಡುಗರು ಬೇಕಾಗಿದ್ದಾರೆ. ಸರಕು ಸಾಗಾಣೆ ಮಾಡುವ ಆಟೋ/ಮಿನಿ ವ್ಯಾನ್ ಇದ್ದವರಿಗೆ ಮೊದಲ ಆದ್ಯತೆ. ಸಂಪರ್ಕಿಸಿ
7975409456
9686202867

TEACHERS WANTED
1. PUC, D.Ed-02, 2. B.Sc (PCM), B.Ed 02
3. B.Sc (CBZ), B.Ed-02, 4. B.A., B.Ed (Hindi and English)-01, 5. BA, B.P.Ed.
PT Teacher-01, 6. Office Assistant-01, (PUC with Computer Knowledge)
GAYATHRI VIDYALAYA, Hosa undavadi, KR Sagara, Srirangapatna Taluk
Mandya Send Your Resumes to gayathrieducationtrust.krs@gmail.com
Contact: 8892927318/ 8088848807/6360302911



Solar Water Heater
SALES & SERVICE
SUNZONE SOLAR SYSTEM
VM Double Road, Kuvempunagar, Mysuru
9845175443

ತಕ್ಷಣ ಬೇಕಾಗಿದ್ದಾರೆ
ಅನುಭವವುಳ್ಳ ಆಫ್‌ಸೆಟ್ ಮೆಷಿನ್ ಪ್ರಿಂಟರ್ (ಸಿಂಗಲ್ ಕಲರ್) ಮತ್ತು ಫೋಲ್ಡಿಂಗ್ ಮೆಷಿನ್ ಆಪರೇಟರ್ ಹಾಗೂ ಸಹಾಯಕರು ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುವುದು. ಕೂಡಲೆ ಸಂಪರ್ಕಿಸಿ
ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್
ಈವನಿಂಗ್ ಬಜಾರ್ ಹಿಂಭಾಗ, ಶಿವರಾಂಪೇಟೆ, ಮೈಸೂರು-570001
9902639593

S.K. CONSTRUCTION
ಸ್ವಂತ ಮನೆ ಕಟ್ಟಬೇಕೆ ಚಿಂತೆ ಬೇಡ ಅತಿ ಉತ್ತಮ ಗುಣಮಟ್ಟದಲ್ಲಿ, 3-D. Plan ಸಹಿತ ನಿಮ್ಮ ಕೈಗೆಟುಕುವ ಬೆಲೆಯಲ್ಲಿ ವಾಸ್ತು ಪ್ರಕಾರ ಮನೆ ಕಟ್ಟಿಕೊಡುತ್ತೇವೆ. Loan ಸಹಿತ
9620528490

SITE FOR SALE
Owner meeting
Site for sale
40x60 south face
40 feet Road,
Athmandasagara,
Phase-1. Rate : 40 Lakhs
8861220989

SITES FOR SALE
40x60, Wippro Layout, KRS Road,
30x40 KBL Gardenia, Vijayanagar
9742315583

DOCUMENT LOST
I, L. Ramesh Singh, R/a No. 21, Sai Ganapa 13th Main, Bengaluru South, Bengaluru-560078, have lost the possession certificate and Allottment letter in original pertains to property bearing No. 1528, Police Layout, Mysuru.
Finders Please Contact :
94826 17122 / 93412 71480

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535175624

ತಕ್ಷಣ ಬೇಕಾಗಿದ್ದಾರೆ
ಹೂಟಗಳ್ಳಿ, ಹೆಬ್ಬಾಳ್ ಮತ್ತು ಮೇಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ
ವಿದ್ಯಾರ್ಹತೆ : SSLC ಮೇಲ್ಪಟ್ಟು,
ಸಂಬಳ: 20500+ W/o(8 hrs)
ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ.
9880727819
9620667819

ನೇರ ಆಯ್ಕೆ ಉದ್ಯೋಗವಕಾಶ
ವರ್ಕ್ ಫ್ರಮ್ ಮನೆಯಿಂದಲೇ ಕೆಲಸ ಪಾರ್ಟ್ ಟೈಮ್ ಅಂಡ್ ಫುಲ್ ಟೈಮ್ ವರ್ಕ್‌ಗಳಿಗೆ ವಿದ್ಯಾರ್ಥಿಗಳಿಗೆ ಮಹಿಳೆಯರಿಗೆ, ವಯಸ್ಕರಿಗೆ ಮೊದಲ ಆದ್ಯತೆ. ಕೊರಿಯರ್ ಸೌಲಭ್ಯವಿದೆ.
7th, 10th, PUC, Any Degree ಪಾಸ್ / ಫೇಲ್ ಆದವರು 18,000 ದಿಂದ 25,000.
Mob: 7090177661

WANTED 2 BHK / DUPLEX FOR RENT OR LEASE
Near Paper Mill Circle, Vijayanagara, KBL Silicon city,MMG Pragathi, Yelawala rcad, Nearby Layouts
Rent : 15 to 20 K
Lease : 10 to 15 Lakhs
Call : 8884616461

30 X 40 WEST SITE SALE
At JJ Enclave
Gaddige Road, Bogadi, (Near Sourish Layout)
Call : 9880273834

SITES/HOUSES FOR SALE
40 x 60 N/F Site, Vijayanagar 2nd Stage
40 x 60 E/F Site, Vijayanagar 1st Stage
30x40 N/F Site, Near Yelwala Bus stand
40x60 S/F Old House, Vijayanagar 2nd Stage,
40x60 E/F Brindavan, Extn. House,
40x70 E/F, Gokulam, House (OLD)
9483315583

60 X 40 HOUSE FOR RENT
2 BHK Ground Floor, Semi Furnished, North Face Door, Open Parking space, near T.K.Layout, Opp. to Apollor Pharmacy
9739003906

30X40 MUDA APPROVED SITE FOR SALE
At Koorgalli, Chethana HBCS.
36 Lakhs.
9972811940

ತಕ್ಷಣ ಬೇಕಾಗಿದ್ದಾರೆ
ಕೆಂಪಮ್ಮ ಚೌಡೇಗೌಡ ಪೆಟ್ರೋಲ್ ಬಂಕ್ ಬಂಡಿಪಾಳ್ಯ ಎಪಿಎಂಸಿ ಹಿಂಭಾಗ ಹೊಸ ಹುಂಡಿ ಗೇಟ್ ಮೈಸೂರ್
6am to 2pm ಸಂಬಳ 13000
2pm to 10pm, ಸಂಬಳ 13000
9900339977

ಓಮಿನಿ ಕಾರ್ ಡ್ರೈವರ್ ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ
9731305656

ರೇಡಿಯಂ ಸ್ಟಿಕ್ಕರ್ ಕೆಲಸಕ್ಕೆ ಹುಡುಗರು
ಬೇಕಾಗಿದಾರೆ.
ಶಿವರಾಮ್ ಆರ್ಟ್ಸ್
9731305656

SITE FOR SALE
40 x 40 North face
Panchacharya Layout (Vijayanagar 4th Stage)
Call : 9740088990

SITE FOR SALE
60 x 80
South East Corner
Roopa Nagara
Call : 9880273834

40 x 60, MUDA SITE
1) N/FACE VIJAY NGR IV II Phase, ₹ 180 LACS
2) 25 x 80, KUVEMPU NGR CORNER, ₹ 160 LACS
3) 32 x 52 VASANTH NGR CORNER ₹ 80 LACS
94481 82899

ಸೈಟ್ ಬೇಕಾಗಿದೆ
ಟಿ.ನರಸೀಪುರ ರಸ್ತೆ, ಲಾಲ್ ಬಹದ್ದೂರ್ ಶಾಸ್ತ್ರಿನಗರ, ಲಲಿತಾದ್ರಿನಗರ, ಶಾಂತವೇರಿ ಗೋಪಾಲಗೌಡ ನಗರ, ವಸಂತನಗರ, ಡಾ|| ರಾಜ್‌ಕುಮಾರ್ ರಸ್ತೆ, ಶಕ್ತಿನಗರ, ನೇರ ಮಾಲೀಕರು ಸಂಪರ್ಕಿಸಿ.
9187593627

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

100% TEAK WOOD
FACTORY FINISH DOORS & FRAMES
@ FACTORY DEPOT RATES
10 YEARS WARRANTY*

9901291267
9731591267

ಬೇಕಾಗಿದ್ದಾರೆ
ತರಂಗ ಕೆಫೆ ಸರಸ್ವತಿಪುರಂ, ಮೈಸೂರು
ಬೇಕರ್ & ಶೆಫ್, ಕಿಚನ್ ಸಹಾಯಕರು, 2 ಮಹಿಳಾ ವೇಯಿಟರ್ & ಸರ್ವರ್, ಕ್ಲೀನಿಂಗ್,ವಾಷಿಂಗ್, ಹೌಸ್‌ಕೀಪಿಂಗ್ ಆಸಕ್ತಿಯಿರುವ ಅಭ್ಯರ್ಥಿಗಳಿಗೆ ಮಹಿಳೆಯರಿಗೆ ಮೊದಲ ಆದ್ಯತೆ
9036750751
9620541530

ಬೇಕಾಗಿದ್ದಾರೆ
ಮೊಬೈಲ್ ಅಂಗಡಿಗೆ ಹುಡುಗ ಅಥವಾ ಹುಡುಗಿ ಕೆಲಸಕ್ಕೆ ಬೇಕಾಗಿದ್ದಾರೆ ಮೊಬೈಲ್, ಎಲೆಕ್ಟ್ರಾನಿಕ್ಸ್ ಅಥವಾ ಟೆಲಿ ಕಮ್ಯುನಿಕೇಷನ್ ಅಂಗಡಿಗಳಲ್ಲಿ ಅಥವಾ ಯಾವುದೇ ಸಂಬಂಧಿತ ಕ್ಷೇತ್ರದಲ್ಲಿ ಅನುಭವಹೊಂದಿರಬೇಕು. ವಯಸ್ಸು : 20 ರಿಂದ 25, ಗೋಕುಲಂ ಹತ್ತಿರ ಅಥವಾ ಅದರ ಸುತ್ತಮುತ್ತಲಿನವರಿಗೆ ಆದ್ಯತೆ ವಿದ್ಯಾರ್ಹತೆ : ಯಾವುದೇ ಪದವಿ, ಅಕ್ಷಯ ಮೊಬೈಲ್ಸ್, 1ನೇ ಮುಖ್ಯರಸ್ತೆ, 2ನೇ ಹಂತ, ಮೈಸೂರು–570022
9901850002

ಸಂಪು ಟ್ಯಾಂಕ್ ಕ್ಲೀನಿಂಗ್
ಕೋರ್ ಕಟಿಂಗ್
ಸೋಲಾರ್ ಸರ್ವೀಸ್
ಸ್ಲ್ಯಾಬ್ ಕಟಿಂಗ್, ಗ್ಯಾಸ್ ಲೈನ್, ಪ್ಲಂಬಿಂಗ್ ವರ್ಕ್. ಸಂಪರ್ಕಿಸಿ:
6362150462 / 7795749881

2BHK ಮನೆ OFFICE ಗೆ ಲಭ್ಯ
ವಿದ್ಯಾರಣ್ಯಪುರಂ, NIE ಕಾಲೇಜ್, ಸಿಲ್ಕ್ ಫ್ಯಾಕ್ಟರಿ ಸರ್ಕಲ್, ಸಾರ್ವಜನಿಕ ಶಾಲೆ ಹತ್ತಿರ, ಮೊದಲ ಮಹಡಿಯ ACC ಶೀಟ್‌ನ ನವೀಕರಿಸಿದ 2 BHK ಮನೆ ಬಾಡಿಗೆಗೆ ಇದೆ. ಆಫೀಸ್‌ಗಳಿಗೂ ಕೂಡ ಲಭ್ಯವಿದೆ.
9342101495

ಮಳಿಗೆ ಬಾಡಿಗೆಗೆ ಇದೆ
ನೂರ್ ಅಲಿಷಾ ಮಕಾನ್ ರಸ್ತೆ, ಕೆ.ಟಿ. ಸ್ಟ್ರೀಟ್, 1ನೇ ಕ್ರಾಸ್
10 X 20 ಅಳತೆ
9900284843

ವಾಣಿಜ್ಯ ನಿವೇಶನಗಳು ಮಾರಾಟಕ್ಕಿದೆ
1) 45 X 60 ಉತ್ತರ ಮುಖ ಆದಿಚುಂಚನಗಿರಿ 80 ಅಡಿ ರಸ್ತೆ, ಕೆ.ಎಸ್.ಆರ್.ಟಿ.ಸಿ ಬಸ್ ಡಿಪೋ ಹತ್ತಿರ, 'ಎನ್' ಬ್ಲಾಕ್, ಕುವೆಂಪುನಗರ, ಮೈಸೂರು.
2) 50 X 80 ಪಶ್ಚಿಮ ಮುಖ ಅಪೊಲೊ ಆಸ್ಪತ್ರೆ ರಸ್ತೆ, ಆದಿಚುಂಚನಗಿರಿ 80 ಅಡಿ ರಸ್ತೆ, ಆರ್.ಎಂ.ಪಿ. ಹತ್ತಿರ, ಕೆಹೆಚ್.ಬಿ. 5ನೇ ಫೇಸ್, ಕುವೆಂಪುನಗರ, ಮೈಸೂರು.
9448166798

HOUSE RENT
ಮನೆ ಬಾಡಿಗೆಗೆ ಮತ್ತು ಭೋಗ್ಯಕ್ಕೆ ವಿದ್ಯಾರಣ್ಯಪುರಂ, ಜೆ.ಪಿ.ನಗರ, ಸರಸ್ವತಿಪುರಂ, ಕುವೆಂಪುನಗರ, ರಾಮಕೃಷ್ಣನಗರ ಸುತ್ತಾಮುತ್ತಾ
9902506368

ಧೀರ್ಘಾವಧಿಗೆ ಜಮೀನು ಬಾಡಿಗೆಗೆ
ಬೋಗಾದಿ ಸಿಗ್ನಲ್‌ನಿಂದ 4 ಕಿ.ಮೀ ದೂರದಲ್ಲಿ ಎಲ್ಲಾ ಸೌಕರ್ಯವಿರುವ 1 ¼ ಎಕರೆ ಅಲಿನೇಷನ್ ಜಮೀನು ಚ.ಅ.99 ಪೈಸೆಗೆ, ರೆಸಾರ್ಟ್, ಹೋಂ ಸ್ಟೇ, ಕೃಷಿ, ಪಶು, ಕೈಗಾರಿಕಾ ಇತರೆ ಉದ್ದೇಶಕ್ಕೆ ಬಾಡಿಗೆಗಿದೆ.
8197609290

ನಿವೇಶನ ಬೇಕಾಗಿದೆ
ಇಲವಾಲದ ಸರ್ಕಾರಿ ಆಸ್ಪತ್ರೆ ಹಿಂಭಾಗ ಅಥವಾ ಆಶೀರ್ವಾದ್ ಹೋಟೆಲ್ ಹಿಂಭಾಗಕ್ಕೆ ಇರುವ ಅಳತೆ : 30 X 40 E/F
ಮಾಲೀಕರು ನೇರವಾಗಿ ಸಂಪರ್ಕಿಸಿ
9480266468
9845448740

ಬೇಕಾಗಿದ್ದಾರೆ
ಮೈಸೂರಿನಲ್ಲಿರುವ ಜೆ.ಎಸ್.ಎಸ್. ಆಸ್ಪತ್ರೆಯ ಕ್ಯಾಂಟೀನ್ ಮತ್ತು ಡಯಟರಿಯಲ್ಲಿ ಕೆಲಸ ಮಾಡಲು ಇಂಗ್ಲಿಷ್ ಮತ್ತು ಕನ್ನಡ ಓದಲು ಬರೆಯಲು ಬರುವ, ಎಸ್.ಎಸ್.ಎಲ್.ಸಿ ಅಥವಾ ಪಿ.ಯು.ಸಿ ಪಾಸ್ ಅಥವಾ ಫೇಲ್ ಆದ ಹುಡುಗರು ಮತ್ತು ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳ : 15,000/- ರಿಂದ 20,000/- ವರೆಗೆ ಇರುತ್ತದೆ. ಪಿ.ಎಫ್ ಮತ್ತು ಇಎಸ್‌ಐ ತಿಂಗಳಿಗೆ 4 ರಜೆ ಇರುತ್ತದೆ. ಹಾಗೂ ಊಟ, ತಿಂಡಿ ಸೌಲಭ್ಯವಿರುತ್ತದೆ. ವಯಸ್ಸು 18 ತುಂಬಿರಬೇಕು.
9740491192

20x30 ಅಳತೆಯ ಸೈಟ್ ಮಾರಾಟಕ್ಕಿದೆ
ಇಲವಾಲದ ಬಸ್ ನಿಲ್ದಾಣದಿಂದ 1 k.m. ಅಂತರದಲ್ಲಿರುವ ಕಟ್ಟೀಲ್‌ನಗರ D.T.C.P. ಬಡಾವಣೆಯಲ್ಲಿ ಡೈರೆಕ್ಟ್ ಓನರ್ ವ್ಯಾಪಾರ ಬೆಲೆ 20 ಲಕ್ಷ ನೆಗೋಷಿಯಬಲ್
ಸಿಪಾಯಿ ನಂಜುಂಡಸ್ವಾಮಿ ಹೆಚ್.ಎಸ್.
9483862050

For sale ರಿಂಗ್ ರಸ್ತೆ ಸಮೀಪ
ವಿಜಯನಗರ 30x40 - 1.2 Cr.
ವಸಂತನಗರ 40x75 - 1.24 Cr.
ಜೆ.ಪಿ. ನಗರ 50x80 - 2.5 Cr. / 40x60 - 1.12 Cr.
ದಟ್ಟಗಳ್ಳಿ–ರಾಯಲ್ ಓಕ್ ಸಿಗ್ನಲ್ 1.15 Cr.
10–20 ಗುಂಟೆ ಲ್ಯಾಂಡ್ 6–8 ಲಕ್ಷ ಗುಂಟೆಗೆ (ಸಿಟಿಗೆ ಕೇವಲ 12 ರಿಂದ 15 ಕಿ.ಮೀ).
ವಿಜಯನಗರ, ಬಸವನಳ್ಳಿ 30x40 - 64 ಲಕ್ಷ.
Call: 8123075038
BROKERS EXCUSE

MUDA / DTCP SITES
ತಕ್ಷಣ ಮನೆ ಕಟ್ಟಲು ನಮ್ಮ ಲೇಔಟ್‌ನಲ್ಲಿ
ಜೆ.ಪಿ ನಗರ ರಿಂಗ್ ರಸ್ತೆ ಹತ್ತಿರ 24 ಲಕ್ಷ
ಬೋಗಾದಿ ಟ್ರೆಂಡ್ಸ್ ಫ್ಲಾಟ್ ಹತ್ತಿರ 36 ಲಕ್ಷ
ವಿದ್ಯಾವಿಕಾಸ್, MPRO ಹಿಂಬಾಗ 34.75 ಲಕ್ಷ
ವಸಂತನಗರ/ಪೋಲೀಸ್ ಲೇಔಟ್ ಪಕ್ಕ 32 ಲಕ್ಷ
ಹುಣಸೂರು ರಸ್ತೆ, ಇಲವಾಲ 27–36 ಲಕ್ಷ
Call : 81230 75038
Broker Excuse 0% Commission

ನಿವೃತ್ತ ನೌಕರರಿಗೆ ಉದ್ಯೋಗಾವಕಾಶ ಸೆಮಿನಾರ್
ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. Benefits : Fixed Salary + PF + ESI + ಇತರೆ. ಭತ್ಯೆಗಳು ಲಭ್ಯವಿರುತ್ತದೆ. ಬೇಕಾಗುವ ದಾಖಲಾತಿಗಳು: ಎಸ್.ಎಸ್.ಎಲ್.ಸಿ. ಮಾರ್ಕ್ಸ್‌ಕಾರ್ಡ್. ಬ್ಯಾಂಕ್ ಪಾಸ್ ಪುಸ್ತಕ, ಸ್ಥಳ : SHREE GURU RESIDENCY
Near Metropole Circle, JLB Road, Mysore
Time : 11.00 am tnd Date : 12/05/2026
Followed by Luch
9448376423, 9886883858

ಮಕ್ಕಳ ಆರೋಗ್ಯ ಬೇಸಿಗೆ ಶಿಬಿರ ಮತ್ತು ಸ್ಮರಣ ಶಕ್ತಿ ಯೋಗ
ಮಕ್ಕಳಲ್ಲಿ ಏಕಾಗ್ರತೆ, ಜ್ಞಾಪಕ ಶಕ್ತಿವೃದ್ಧಿ ಶಿಸ್ತು, ಜವಾಬ್ದಾರಿ, ನಾಯಕತ್ವಗುಣ.
ದಿನಾಂಕ: 10/05/2026ನೇ ಭಾನುವಾರ ದಿಂದ 20/05/2026 ರವರೆಗೆ (10 ದಿನ)
ಸ್ಥಳ : ಋಷಿ ಸಂಸ್ಕೃತಿ ವಿದ್ಯಾಕೇಂದ್ರ, ಕುವೆಂಪುನಗರ, ಮೈಸೂರು. ನೋಂದಣಿಗಾಗಿ
9448458050/8618762110

ಕೆಲಸಕ್ಕೆ ಬೇಕಾಗಿದ್ದಾರೆ
ಡ್ರೈವಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ ಹೆಲ್ಪರ್ ಕೆಲಸಕ್ಕೆ ಮಹಿಳೆಯರು ಹಾಗೂ ಪುರುಷರು ಬೇಕಾಗಿದ್ದಾರೆ.
ಸಂಬಳ: 9,000 ರಿಂದ 15,000 ವರೆಗೆ
ಮಧ್ಯಾಹ್ನ ಊಟ ಸೌಲಭ್ಯ ಇದೆ
ಕೆಲಸದ ಸ್ಥಳ: ವಿದ್ಯಾರಣ್ಯಪುರಂ
7022776672

ಬೇಕಾಗಿದ್ದಾರೆ
ಮೈಸೂರಿನ ಕಾಳಿದಾಸ ರಸ್ತೆಯಲ್ಲಿ ಇರುವ ಶುದ್ಧ ಸಸ್ಯಾಹಾರಿ ಹೋಟೆಲಿಗೆ ಕೆಲಸಕ್ಕೆ ಬೇಕಾಗಿದ್ದಾರೆ, ಉತ್ತಮ ಸಂಬಳ /ESI ಕೊಡಲಾಗುವುದು
ದೋಸಾ ಚೆಫ್, ವೆಟರ್ / Supplier ಕ್ಲೀನಿಂಗ್ / ವಾಷಿಂಗ್ (2nd Shift) ಕೌಂಟರ್ / ಫುಡ್ ಪ್ಯಾಕಿಂಗ್ Continental Commis
9380587027
8884066266

WANTED TEACHERS
JNANAJYOTHI VIDYALAYA
BEERIHUNDI.
English-1 Social Science-1 for High-School. Hindi-1 Mathematics-1 for Primary.
Immediately Contact
9845390377 / 8197057626

30X40 ಸೈಟ್ ಬೇಕಾಗಿದೆ
ಬೋಗಾದಿ ರಿಂಗ್ ರಸ್ತೆ ಅಕ್ಕ–ಪಕ್ಕದಲ್ಲಿ ಮತ್ತು ಶಾರದಾದೇವಿ ನಗರ ಅಥವಾ ಯುಬಿ ಸಿಟಿಯಲ್ಲಿ ಬೇಕಾಗಿದೆ.
ತಕ್ಷಣ ವ್ಯವಹರಿಸಲಾಗುವುದು
9008079931 / 8073356191

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ 50 ವರ್ಷದೊಳಗಿನ ಪುರುಷರು ಬೇಕಾಗಿದ್ದಾರೆ. ಎಸ್‌ಎಸ್‌ಎಲ್‌ಸಿ ವಿದ್ಯಾರ್ಹತೆ ಇರಬೇಕು. ಕೂರ್ಗಳ್ಳಿ, ಹೆಬ್ಬಾಳು, ವಿಜಯನಗರ, ಮೇಟಗಳ್ಳಿ, ಗೋಕುಲಂ ಸುತ್ತಮುತ್ತಲಿನವರು ಸಂಪರ್ಕಿಸಿ:
7259598615

ಮೈಸೂರು ನಗರದ ಸುತ್ತ ಮುತ್ತ ಕೈಗಾರಿಕಾ ಪ್ರದೇಶ ಕಾರ್ಖಾನೆಗಳಲ್ಲಿ, ಕಂಪನಿಗಳಲ್ಲಿ ಹಾಗೂ ಉನ್ನತ ಆಸ್ಪತ್ರೆಗಳಲ್ಲಿ, ಶಾಲೆಗಳಲ್ಲಿ, ಚಿಕ್ಕ ದೊಡ್ಡ ಅಂಗಡಿಗಳಲ್ಲಿ ಹೋಟೆಲ್‌ಗಳಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್, ಹೌಸ್ ಕೀಪಿಂಗ್, ಹೆಲ್ಪರ್ಸ್, ಸ್ಕೂಲ್ ಅಟೆಂಡರ್, ಹೋಟೆಲ್ ಸಪ್ಲೈಯರ್‌ಗಳು ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ. ಕೆಲಸಕ್ಕೆ ಬೇಕಾಗುವ ಸ್ಥಳ : ಹೆಬ್ಬಾಳು, ಮೇಟಗಳ್ಳಿ, ಶಾರದಾದೇವಿನಗರ, ದಟ್ಟಗಳ್ಳಿ, ಸಿದ್ಧಾರ್ಥನಗರ, ಚೆರೆಲಿಯನ್ ಕಾಲೇಜ್ ಹತ್ತಿರ, ಆಲನಹಳ್ಳಿ, ಉತ್ತಮ ಸಂಬಳ ಹಾಗೂ ಇಎಸ್‌ಐ ಮತ್ತು ಪಿಎಫ್ ಸೌಲಭ್ಯವಿರುತ್ತದೆ. ಕೋ-ಆಪರೇಟಿವ್ ಸೊಸೈಟಿ, ಹಿನಕಲ್ ಇಲ್ಲಿ ಪಿಗ್ಮಿ ಕಲೆಕ್ಟರ್, ಫೀಲ್ಡ್ ಎಕ್ಸಿಕ್ಯೂಟಿವ್ ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ (Full Time & Part Time Job Available) ಸಂಪರ್ಕಿಸಿ :
7795367205, 9611208553, 9036461347

ಸಂಪು, ಟ್ಯಾಂಕ್ ಕ್ಲೀನಿಂಗ್, ಸೋಲಾರ್ ಸರ್ವೀಸ್.
8197383645, 9008711654

ಬೇಕಾಗಿದ್ದಾರೆ
ಭಾರತದ ಪ್ರತಿಷ್ಠಿತ ಕಂಪನಿಯಾದ ಶ್ರೀರಾಮ್ ಗ್ರೂಪ್ಸ್‌ನಲ್ಲಿ ಕೆಲವು ಹುದ್ದೆಗಳು ಖಾಲಿಯಿದ್ದು, ಈ ಹುದ್ದೆಗಳಿಗೆ ನೇರ ಸಂದರ್ಶನ ಏರ್ಪಡಿಸಲಾಗಿದೆ.
ವಿದ್ಯಾರ್ಹತೆ : ಎಸ್.ಎಸ್.ಎಲ್.ಸಿ, ಪಿ.ಯು.ಸಿ, ಯಾವುದೇ ಡಿಗ್ರೀ
9148887233

3 BHK HOUSE FOR LEASE
in Vijayanagara 1st Stage, Specious sit-out & Balcony with car parking and garden facilities available
7899831216
Brokers Excuse

ತೇಜಸ್ವಿನಿ ಟೂರಿಸ್ಟ್
23–06–2026 ರಿಂದ 18 ದಿನ. ಗುಜರಾತ್, ಮಧ್ಯಪ್ರದೇಶ್, ರಾಜಸ್ಥಾನ. 20–07–2026 ರಿಂದ 10 ದಿನ, 14 ದಿನ ಕಾಶಿ, ಅಯೋಧ್ಯ, ಪ್ರಯಾಗ್‌ರಾಜ್ ಆಗ್ರಾ, ದೆಹಲಿ ಇತ್ಯಾದಿ, 02–08–2026 ರಿಂದ ಚಾರ್‌ಧಾಮ್ ಯಾತ್ರೆ, ಕೇದಾರನಾಥ್, ಬದ್ರಿನಾಥ್, ಗಂಗೋತ್ರಿ, ಯಮುನೋತ್ರಿ ಇತ್ಯಾದಿ.
26–05–2026 ರಿಂದ 7 ದಿನ ತಮಿಳುನಾಡು, ಕನ್ಯಾಕುಮಾರಿ, ರಾಮೇಶ್ವರ ತ್ರಿವೇಂದ್ರಂ, ಶ್ರೀರಂಗ, ತಂಜಾವೂರು ಇತ್ಯಾದಿ.
9379792644

ಹೋಟೆಲ್‌ಗೆ ಬೇಕಾಗಿದ್ದಾರೆ
ಮಡಿಕೇರಿಯಲ್ಲಿರುವ ಹೋಟೆಲ್‌ಗೆ ಸರ್ವಿಸ್ ಬಾಯ್ಸ್, ಕಿಚನ್‌ಹೆಲ್ಪರ್, ಕ್ಲೀನಿಂಗ್ ಬಾಯ್ಸ್ ಬೇಕಾಗಿದ್ದಾರೆ. ಊಟ, ವಸತಿ ಸೌಲಭ್ಯ ಹಾಗೂ ಆಕರ್ಷಕ ವೇತನ ನೀಡಲಾಗುವುದು. ಆಸಕ್ತರು ಸಂಪರ್ಕಿಸಿ:
9482276536 / 9380439954

ಬೇಕಾಗಿದ್ದಾರೆ
ಕುವೆಂಪು ನಗರದಲ್ಲಿ ಇರುವ ನಿಧಿ ಬೋಟಿಕ್ ಅಲ್ಲಿ ಕೆಲಸ ಮಾಡಲು ಹುಡುಗಿ ಬೇಕಾಗಿದ್ದಾರೆ.
8296695765 / 7348843351

WANTED
BEAUTICIAN
For women's saloon
JP Nagar, Mysore
Professional behavior and hygiene required. Salary will depend on experience and skill. Contact:
Mob: 9663781292

ಮನೆ ಮಾರಾಟಕ್ಕಿದೆ
ಕೊಪ್ಪಲೂರು, ನಾಚನಹಳ್ಳಿ
30x40, 2 BHK
9844163178
BROKERS EXCUSE

ನಿವೇಶನ ಮಾರಾಟಕ್ಕಿದೆ
ನಿವೇಶನ ಸಂಖ್ಯೆ 5
33 x 50 ft (1646 Sq.Ft)
10.2M x 15.0M (153Sq. Meter)
ಹೆರಿಟೇಜ್ ನಗರ, ಸರ್ವೇ ಆಫೀಸ್ ಹತ್ತಿರ, ಉತ್ತನಹಳ್ಳಿ ಹಿಂಭಾಗ, ಮೈಸೂರು.
9964612218

JSS ಹಳೇ ವಿದ್ಯಾರ್ಥಿಗಳ ಸಂಘ
ಲೇಔಟ್ ವರುಣ S/E Corner, ಇನ್ನೊಂದು 6 ಲೇನ್ ರೋಡ್ ಪಕ್ಕ ಇಲವಾಲ S/F. ಎರಡೂ ಸ್ವಂತದ 60x40 ಸೈಟು ಮಾರಾಟಕ್ಕೆ
Rs. 3400 psf.
9449448797
Brokers excuse.

ಬೇಕಾಗಿದ್ದಾರೆ
ಮೈಸೂರು ಜಿಲ್ಲೆಯಲ್ಲಿ ಇರುವ ಕಾರ್ ಶೋರೂಮ್ ಹಾಗೂ ಬೈಕ್ ಶೋರೂಮ್‌ಗಳಿಗೆ, ತಕ್ಷಣ ಯುವಕ ಮತ್ತು ಯುವತಿಯರು ಬೇಕಾಗಿದ್ದಾರೆ. EDUCATION SSLC, PUC, ITI, DIPLOMA, DEGREE ಖಾಲಿ ಇರುವ ಹುದ್ದೆಗಳು, CASHIER, BILLING, RECEPTIONIST, HR, ADMIN, ACCOUNTANT ETC, SALARY (18k -38k), ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ
9632659609
7899627704

ಬೇಕಾಗಿದ್ದಾರೆ
(ಕನ್ಸಲ್ಟೆನ್ಸಿ ಅಲ್ಲ) ಮೈಸೂರಿನಲ್ಲಿರುವ A.W.G ಕಂಪನಿಗೆ SSLC, PUC, ITI, Diploma any Degree, ಆದಂತಹ ಗ್ರಾಮೀಣ + ನಗರದ 146 ಅಭ್ಯರ್ಥಿಗಳು ಬೇಕಾಗಿದ್ದಾರೆ. Fresher ಗಳಿಗೆ ಹೆಚ್ಚಿನ ಆದ್ಯತೆ
ತಿಂಗಳಿಗೆ : 21500 – 26500
(ವಯೋಮಿತಿ : 18 + 35 years)
(ಉಚಿತ ಊಟ+ವಸತಿ ಸೌಲಭ್ಯವಿದೆ.)
ಶಾನ್ವಿ 7349699460
9886479489

ಸೈಟು ಬೇಕಾಗಿದೆ
T. ನರಸೀಪುರ ರಸ್ತೆ, ಬನ್ನೂರು ರಸ್ತೆ JSS ಲೇಔಟ್, ನಿರ್ಮಾಣ್‌ಲೇಔಟ್/ ಬಸವೇಶ್ವರ ಲೇಔಟ್/ ಬ್ಯಾಂಕರ್ಸ್ ಲೇಔಟ್/ ವರುಣ/ ವಾಜಮಂಗಲ/ವರಕೂಡು ಹಾಗೂ ಸುತ್ತಮುತ್ತಲಿನಲ್ಲಿ 5 ಗುಂಟೆ ಜಾಗ ಬೇಕು.
9686071750

WALK IN INTERVIEW
Primary and nursery teachers, Office receptionist, School bus drivers, Security family, Attractive salary with free accommodation Place: Yelwala Mysore, Contact
0861-8648475
9036844557

WE ARE HIRING SALES EXECUTIVE
Requirements:
- Minimum 2 years of experience in the real estate sector required.
- Open to both Male & Female candidates.

Call: 9035066580

ಕಛೇರಿ ಸಹಾಯಕ ಹುದ್ದೆ ಖಾಲಿ ಇದೆ
ಮೈಸೂರಿನ ಪ್ರತಿಷ್ಠಿತ ಕಂಪನಿ ಕನುಷಿ ಗ್ರೂಪ್‌ಗೆ ಬುದ್ಧಿವಂತ, ಸಂಘಟಿತ ಕಛೇರಿ ಸಹಾಯಕಿ (1 ಮಹಿಳೆ–ವಿವಾಹಿತೆ) ಅಗತ್ಯವಿದೆ.
ಕರ್ತವ್ಯಗಳು : ಮೂಲ ಲೆಕ್ಕಪತ್ರ ನಿರ್ವಹಣೆ, ಕ್ಲೆರಿಕಲ್ ಕೆಲಸಗಳು, ಎಂ.ಎಸ್ ಆಫೀಸ್/ಟ್ಯಾಲಿ ತಿಳಿದಿರಬೇಕು.ಕನಿಷ್ಠ 2 ವರ್ಷಗಳ ಅನುಭವವಿರಬೇಕು.
ಸಿವಿ ಜೊತೆ ಅರ್ಜಿ ಸಲ್ಲಿಸಿ :
kanushiprashanth@gmail.com
7624877717

ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ
ಆಫೀಸ್ ಸೇಲ್ಸ್ ಎಕ್ಸಿಕ್ಯೂಟಿವ್ (SSLC-PUC) ವಿಶ್ವೇಶ್ವರನಗರ, ಸ್ಟರ್ಲಿಂಗ್ ಥಿಯೇಟರ್ ಹತ್ತಿರ, ಮೈಸೂರು, ಸಂಬಳ : 9000/–, ಕೆಲಸದ ಸಮಯ ಬೆಳಿಗ್ಗೆ 10 ರಿಂದ ಸಂಜೆ 7 ರವರೆಗೆ
8095149172

Life Partner ಆಗಲು ಶ್ರೀಮಂತ ವರನಿಗೆ ವಧು ಬೇಕಾಗಿದ್ದಾರೆ.
ಲಿಂಗಾಯತ 49/5.6 ಡಾಕ್ಟರೇಟ್ ಪದವೀಧರ
Independent & Well Settled
5 ಲಕ್ಷಕ್ಕಿಂತ ಅಧಿಕ ಆದಾಯ ಮತ್ತು ತೋಟ/ ಮನೆ ಇರುವಂತಹ ವಿಚ್ಛೇದಿತ/ ನೌಕರಸ್ಥೆ/ಬಡವೆ/ ವಧು ಬೇಕು. ಯಾವುದೇ ಜಾತಿಯ ಅಭ್ಯಂತರವಿಲ್ಲ. ಮಕ್ಕಳಿದ್ದರೂ ಪರವಾಗಿಲ್ಲ.(ಸರಳ ವಿವಾಹಕ್ಕೆ ಮೊದಲ ಆದ್ಯತೆ)
9742458242

ಸದ್ಗುರು ಮ್ಯಾರೇಜಸ್
ಎಲ್ಲಾ ಜಾತಿಯ ವಧುವರರು ವಿಧುರರು ವಿಧವೆಯರು ವಿಚ್ಛೇದಿತರು ನೇರ ಸಂಪರ್ಕಿಸಿ, ಪ್ರತಿದಿನ ವಧುವರರ ನೇರ ಸಂದರ್ಶನವಿರುತ್ತದೆ.
9448229184
7899625268

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ, ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ
(II Marriages Also)
9343175000

ಮೈಸೂರು ಮಿತ್ರ 47 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮುಂದುವರೆದ ವರ್ಗೀಕೃತ ಜಾಹೀರಾತಿಗಾಗಿ 11ನೇ ಪುಟ ನೋಡಿ

ಕೃಷಿ ಉದ್ದೇಶಕ್ಕಾಗಿ ನಿರ್ಮಿಸಿದ್ದ 'ಕಣ' ತೆರವಿಗೆ ಮುಂದಾದ ಸೆಸ್ಕ್

ಅಧಿಕಾರಿಗಳ ನಡೆಗೆ ರೈತರು, ಗ್ರಾಮಸ್ಥರ ತೀವ್ರ ಆಕ್ರೋಶ

> "ಸೆಸ್ಕ್ ಇಲಾಖೆ ಕಚೇರಿ ನಿರ್ಮಾಣಕ್ಕೆ ಪರ್ಯಾಯ ಸರ್ಕಾರಿ ಜಾಗ ಆಯ್ಕೆ ಮಾಡಬೇಕು. ಕೃಷಿಗೆ ಸಂಬಂಧಿಸಿದ ಮೂಲ ಸೌಲಭ್ಯಗಳನ್ನು ನಾಶಪಡಿಸುವುದನ್ನು ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ. ಅಧಿಕಾರಿಗಳು ಮೊದಲು ರೈತರೊಂದಿಗೆ ಸಭೆ ನಡೆಸಿ ಅವರ ಅಭಿಪ್ರಾಯ ಪಡೆದುಕೊಳ್ಳಬೇಕು. ಏಕಪಕ್ಷೀಯ ನಿರ್ಧಾರ ಕೈಗೊಳ್ಳುವುದನ್ನು ತಕ್ಷಣ ನಿಲ್ಲಿಸಬೇಕು.
> –ಸಿ.ಬಿ.ಹುಂಡಿ ಗ್ರಾಮಸ್ಥರು.



ಸಿ.ಬಿ.ಹುಂಡಿ ಗ್ರಾಮದಲ್ಲಿ ಸುಸ್ಥಿತಿಯಲ್ಲಿರುವ ಕಣ



ಸಿ.ಬಿ.ಹುಂಡಿ ಗ್ರಾಮಸ್ಥರು ಸೆಸ್ಕ್ ಇಲಾಖೆ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ತಿ.ನರಸೀಪುರ, ಮೇ 8– ತಾಲೂಕಿನ ಚನ್ನಬಸವಯ್ಯನಹುಂಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ನಿರ್ಮಿಸಿದ್ದ 'ಕಣ' ತೆರವುಗೊಳಿಸಿ ಸೆಸ್ಕ್ ಕಚೇರಿ ನಿರ್ಮಿಸಲು ಮುಂದಾಗಿರುವ ಇಲಾಖೆ ಅಧಿಕಾರಿಗಳ ನಡೆಗೆ ರೈತರು, ಗ್ರಾಮಸ್ಥರು ಹಾಗೂ ವಿವಿಧ ಸಂಘಟನೆಗಳ ಮುಖಂಡರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ತಾಲೂಕಿನ ಸಿ.ಬಿ.ಹುಂಡಿ ಗ್ರಾಮದ ಮರಡೀಪುರ ಎಲ್ಲೆಯ 4.08 ಗುಂಟೆ ಸರ್ಕಾರಿ ತೋಪಿನಲ್ಲಿ ಈ ಹಿಂದೆ ಹೆಮ್ಮಿಗೆ ಗ್ರಾಪಂನಿಂದ 3.5 ಲಕ್ಷ ರೂ. ವೆಚ್ಚದಲ್ಲಿ ರೈತರ ಕೃಷಿ ಚಟುವಟಿಕೆಗಾಗಿ 'ಕಣ' ನಿರ್ಮಿಸಲಾಗಿತ್ತು. ಆದರೆ ಇದೀಗ ಸೆಸ್ಕ್ ಇಲಾಖೆಯವರು ಕಣ ತೆರವುಗೊಳಿಸಿ ಅದೇ ಜಾಗದಲ್ಲಿ ಸೆಸ್ಕ್ ಕಚೇರಿ ತೆರೆಯಲು ಮುಂದಾಗಿದ್ದಾರೆ. ಹೀಗಾಗಿ ಸೆಸ್ಕಾಂ ನಡೆಗೆ ಗ್ರಾಮಸ್ಥರು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ.

ಕಣ ತೆರವುಗೊಳಿಸಿ ಸೆಸ್ಕ್ ಕಚೇರಿ ನಿರ್ಮಿಸುವ ಅಧಿಕಾರಿಗಳ ನಡೆಗೆ ಕಿಡಿಕಾರಿರುವ ಬಿಜೆಪಿ ಯುವ ಮೋರ್ಚಾ ಮಾಜಿ ಉಪಾಧ್ಯಕ್ಷ ಸಿ.ಬಿ.ಹುಂಡಿ ಸಿದ್ದು, ರೈತರು ಭತ್ತ ಸೇರಿದಂತೆ ವಿವಿಧ ಬೆಳೆಗಳನ್ನು ಒಣಗಿಸಲು ಬಳಸುತ್ತಿರುವ ಕಣ ಗ್ರಾಮೀಣ ಕೃಷಿ ಜೀವನದ ಪ್ರಮುಖ ಆಧಾರವಾಗಿದ್ದು, ಅದನ್ನು ಒಡೆದು ಹಾಕುವ ನಿರ್ಧಾರವನ್ನು ಕೂಡಲೇ ಹಿಂಪಡೆಯಬೇಕು. ಇಲ್ಲದಿದ್ದರೆ ರೈತರ ಜೊತೆಗೂಡಿ ಸೆಸ್ಕ್ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಕೊಯ್ಲಿನ ಸಮಯದಲ್ಲಿ ರೈತರಿಗೆ ಕಣ ಅತ್ಯಂತ ಅಗತ್ಯ. ಮಳೆ ಬಂದಾಗ ಬೆಳೆ ಹಾಳಾಗದಂತೆ ರಕ್ಷಿಸಲು ಹಾಗೂ ಧಾನ್ಯ ಒಣಗಿಸಲು ಈ ಜಾಗ ಬಹಳ ಉಪಯುಕ್ತವಾಗಿದೆ. ಸರ್ಕಾರವೇ ಕೃಷಿ ಸೌಲಭ್ಯಕ್ಕಾಗಿ ನಿರ್ಮಿಸಿರುವ ಕಣವನ್ನು ಈಗ ಬೇರೆ ಉದ್ದೇಶಕ್ಕೆ ಬಳಸಲು ಮುಂದಾಗಿರುವುದು ರೈತರಿಗೆ ಮಾಡುವ ದ್ರೋಹ ಎಂದು ಆಕ್ರೋಶ ವ್ಯಕ್ತಪಡಿಸಿದರು.

> "ತಲಕಾಡು ಸುತ್ತಮುತ್ತಲ ಗ್ರಾಮಗಳ ಸಾರ್ವಜನಿಕರು ಹಾಗೂ ರೈತರ ಅನುಕೂಲಕ್ಕಾಗಿ ಸೆಸ್ಕ್ ಉಪ ಕಚೇರಿ ನಿರ್ಮಾಣ ಮಾಡಲು ಕಂದಾಯ ಇಲಾಖೆ 20 ಗುಂಟೆ ಜಾಗ ನೀಡುವಂತೆ ಮನವಿ ಮಾಡಲಾಗಿತ್ತು ಅದರಂತೆ ಕಂದಾಯ ಇಲಾಖೆಯಿಂದ ಸಿ.ಬಿ.ಹುಂಡಿ ಗ್ರಾಮದಲ್ಲಿ ಜಾಗ ಮಂಜೂರಾಗಿದ್ದು, ಕಚೇರಿ ನಿರ್ಮಾಣಕ್ಕಾಗಿ ಗಿಡಗಂಟಿಗಳಿಂದ ಆವೃತ್ತವಾಗಿದ್ದ ಜಾಗ ಸ್ವಚ್ಛಗೊಳಿಸುವಾಗ ಅಲ್ಲಿ ಕಣ ನಿರ್ಮಾಣವಾಗಿರುವುದು ಕಂಡು ಬಂತು. ಇದೀಗ ಕೃಷಿ ಚಟುವಟಿಕೆಗೆ ಕಣ ಉಳಿಸಿ ಕೊಡುವಂತೆ ಗ್ರಾಮಸ್ಥರು, ರೈತರು ಮನವಿ ಮಾಡಿರುವುದರಿಂದ ಆ ಕಣ ತೆರವುಗೊಳಿಸುವ ಪ್ರಶ್ನೆಯಿಲ್ಲ. ಆದರೂ ಅದೇ ಜಾಗದಲ್ಲಿ ಕಚೇರಿ ನಿರ್ಮಾಣ ಮಾಡಿ, ಬೇರೆ ಕಡೆ ಜಾಗ ನೀಡಿದರೆ ಇಲಾಖೆ ವತಿಯಿಂದ ನೂತನ ಕಣ ನಿರ್ಮಿಸಿ ಕೊಡಲಾಗುವುದು.
> – ಕೆ.ವಿ.ವೀರೇಶ್, ಸೆಸ್ಕ್ ಎಇಇ.

ಈ ಕಣ ಶಿಥಿಲಾವಸ್ಥೆ ತಲುಪಿಲ್ಲ ಈಗಷ್ಟೇ ನಿರ್ಮಿಸಿದಂತಿದ್ದು, ಧಾನ್ಯ ಒಣಗಿಸಲು ಕಣದ ಅವಶ್ಯಕತೆ ಇದೆ. ಇಂತಹ ಕೃಷಿ ಸೌಲಭ್ಯಗಳನ್ನು ಕಾಪಾಡುವುದು ಸರ್ಕಾರದ ಜವಾಬ್ದಾರಿ. ಅದನ್ನು ನಾಶಪಡಿಸುವುದು ಅಭಿವೃದ್ಧಿಯಲ್ಲ. ಸೆಸ್ಕ್ ಕಚೇರಿಗೆ ಸರ್ಕಾರದ ಖಾಲಿ ಜಾಗಗಳು ಸಾಕಷ್ಟಿವೆ. ಆದರೆ ಕೃಷಿಗೆ ಸಂಬಂಧಿಸಿದ ಮೂಲ ಸೌಲಭ್ಯಗಳನ್ನೇ ಗುರಿಯಾಗಿಸಿಕೊಂಡಿರುವುದು ಅಸಮಂಜಸ. ರೈತರ ಅಭಿಪ್ರಾಯ ಕೇಳದೆ ಅಧಿಕಾರಿಗಳು ಏಕಪಕ್ಷೀಯವಾಗಿ ನಿರ್ಧಾರ ತೆಗೆದುಕೊಳ್ಳುತ್ತಿರುವುದು ಖಂಡನೀಯ ಎಂದು ಆರೋಪಿಸಿದರು.

ಗ್ರಾಮದಿಂದ ಕಣ ನಿರ್ಮಿಸಲಾಗಿದ್ದು, ಉತ್ತಮ ಸ್ಥಿತಿಯಲ್ಲಿರುವ ಕಣ ಒಡೆದು ಹಾಕುವುದು ಸರಿಯಲ್ಲ. ಸರ್ಕಾರದ ಅನುದಾನ ಪೋಲಾಗುವ ಜೊತೆಗೆ ಕೃಷಿ ಬೆಳೆಗಳನ್ನು ಒಣಗಿಸಲು ಕಣವನ್ನೇ ನಂಬಿರುವ ರೈತರ ಪಾಡೇನು ಎಂದು ಕಿಡಿಕಾರಿದ ಅವರು, ಕಣ ಇಲ್ಲದಿದ್ದರೆ ಕೊಯ್ಲಿನ ನಂತರ ಬೆಳೆಗಳನ್ನು ರಸ್ತೆ ಬದಿ ಅಥವಾ ಮನೆಗಳ ಮುಂದೆ ಒಣಗಿಸುವ ಪರಿಸ್ಥಿತಿ ಬರುತ್ತದೆ. ಇದರಿಂದ ರೈತರಿಗೆ ಆರ್ಥಿಕ ನಷ್ಟವಾಗುತ್ತದೆ. ಕೃಷಿ ಉಳಿಯಬೇಕಾದರೆ ಇಂತಹ ಸೌಲಭ್ಯಗಳನ್ನು ಉಳಿಸಬೇಕಾಗಿರುವುದು ಸರ್ಕಾರದ ಜವಾಬ್ದಾರಿ ಎಂದರು.

ರೈತರ ವಿಷಯದಲ್ಲಿ ಸರ್ಕಾರ ಸಂವೇದನಾಶೀಲವಾಗಿ ನಡೆದುಕೊಳ್ಳಬೇಕು. ರೈತರ ಅನುಕೂಲಕ್ಕಾಗಿ ನಿರ್ಮಿಸಿರುವ ಜಾಗಗಳನ್ನು ಉಳಿಸಿ, ಪರ್ಯಾಯ ಸ್ಥಳದಲ್ಲಿ ಕಚೇರಿ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದರು.

ಈ ವೇಳೆ ಗ್ರಾಮದ ಮುಖಂಡರಾದ ವಿರೂಪಾಕ್ಷ, ರಮೇಶ್, ಕಾಂತರಾಜು, ನಟ, ಆನಂದ್, ಮಂಜು, ಶೇಖರ್, ಕುಮಾರ, ತ್ರಿವೇಶ, ನಂಜುಂಡಸ್ವಾಮಿ, ಮಹೇಶ್ ಸೇರಿದಂತೆ ಗ್ರಾಮಸ್ಥರಿದ್ದರು.

ತಿಪ್ಪೂರಿನಲ್ಲಿ ಹಣದಾಸೆಗೆ ವೃದ್ಧೆ ಹತ್ಯೆ

ಯುಜಿಡಿ ಗುಂಡಿಯಲ್ಲಿ ಶವ ಹೂತಿದ್ದ ಆರೋಪಿ ಬಂಧನ



ಗೌರಮ್ಮ

ಕೆ.ಆರ್.ನಗರ, ಮೇ 8– ಹಣದಾಸೆಗೆ ವೃದ್ಧೆ ಹತ್ಯೆಗೈದು ಶೌಚಾಲಯದ ಯುಜಿಡಿ ಗುಂಡಿಯಲ್ಲಿ ಹೂತು ಹಾಕಿರುವ ಘಟನೆ ತಾಲೂಕಿನ ತಿಪ್ಪೂರಿನಲ್ಲಿ ಬೆಳಕಿಗೆ ಬಂದಿದೆ.

ತಿಪ್ಪೂರು ಗ್ರಾಮದ ಲೇ. ಮುದ್ದಶೆಟ್ಟಿ ಅವರ ಪತ್ನಿ ಗೌರಮ್ಮ(90) ಹತ್ಯೆಯಾದ ವೃದ್ಧೆ. ಅದೇ ಗ್ರಾಮದ ವೀರಭದ್ರ ಎಂಬಾತ ಹಣದಾಸೆಗೆ ವೃದ್ಧೆ ಹತ್ಯೆಗೈದು ಇದೀಗ ಜೈಲು ಪಾಲಾಗಿದ್ದಾನೆ.

ವಿವರ: ಹತ್ಯೆಗೊಳಗಾದ ವೃದ್ಧೆ ಗೌರಮ್ಮ ಅವರಿಗೆ ಮೂವರು ಪುತ್ರರು, ಓರ್ವ ಪುತ್ರಿ ಇದ್ದು ಪ್ರತ್ಯೇಕವಾಗಿ ವಾಸಿಸುತ್ತಿದ್ದರು ಎನ್ನಲಾಗಿದೆ. ಹೀಗಾಗಿ ಗೌರಮ್ಮ ಅವರಿಗೆ ವೀರಭದ್ರ ತೀರ ಪರಿಚಿತನಾಗಿದ್ದು, ಆಕೆಯ ವಿಶ್ವಾಸಗಳಿಸಿದ್ದ. ಅದ್ದರಿಂದ ಗೌರಮ್ಮ ಅವರ ಬ್ಯಾಂಕ್ ಖಾತೆಯಲ್ಲಿನ ಹಣ ಡ್ರಾ ಮಾಡುವುದು ಸೇರಿದಂತೆ ಇನ್ನಿತರ ಕೆಲಸಗಳನ್ನು ಮಾಡಿಕೊಡುತ್ತಿದ್ದ. ಅದರಂತೆ ಕಳೆದ 15 ದಿನಗಳ ಹಿಂದೆ ಗೌರಮ್ಮ ವೀರಭದ್ರನ ಜೊತೆ ಬ್ಯಾಂಕ್‌ಗೆ ಹೋಗಿ ತಮ್ಮ ಖಾತೆಯಿಂದ 75 ಸಾವಿರ ರೂ. ಡ್ರಾ ಮಾಡಿದ್ದಾರೆ. ಈ ವೇಳೆ ವೀರಭದ್ರ ನನಗೆ ತುರ್ತಾಗಿ ಹಣ ಬೇಕು. 2 ದಿನಗಳಲ್ಲಿ ಹಣ ವಾಪಸ್ ನೀಡುವುದಾಗಿ ತಿಳಿಸಿ ಗೌರಮ್ಮ ಬಳಿ ಇದ್ದ 75 ಸಾವಿರ ರೂ. ಪಡೆದಿದ್ದ. ವಾರದ ಬಳಿಕ ಗೌರಮ್ಮನವರು ನೀಡಿದ್ದ ಹಣ ವಾಪಸ್ ಮಾಡುವಂತೆ ಕೇಳಿದ್ದಾರೆ. ಈ ವೇಳೆ ವೀರಭದ್ರ ಹಣ ನೀಡುವುದಾಗಿ ಸಬೂಬು ಹೇಳಿದ್ದು, ರಾತ್ರಿ ವೇಳೆ ವೃದ್ಧೆ ಗೌರಮ್ಮ ಮನೆಗೆ ಹೋಗಿ ಕಪಾಳಕ್ಕೆ ಹೊಡೆದು ಉಸಿರುಗಟ್ಟಿಸಿ ಕೊಲೆ ಮಾಡಿ ನಂತರ ಮನೆ ಹಿಂದೆ ಇರುವ ಶೌಚಾಲಯದ ಯುಜಿಡಿ ಗುಂಡಿಗೆ ಶವ ಹಾಕಿ ಮುಚ್ಚಿದ್ದಾನೆ. ಇತ್ತ ಗೌರಮ್ಮ ಕಾಣದಿರುವ ಬಗ್ಗೆ ಮಕ್ಕಳು ಹುಡುಕಾಟ ನಡೆಸುತ್ತಿದ್ದು ವೀರಭದ್ರ ಕೂಡ ಗ್ರಾಮದಿಂದ ನಾಪತ್ತೆಯಾಗಿದ್ದ. ಇದರಿಂದ ಅನುಮಾನಗೊಂಡ ಮಕ್ಕಳು ನಾಪತ್ತೆಯಾಗಿರುವ ನಮ್ಮ ತಾಯಿಯನ್ನು ಹುಡುಕಿ ಕೊಡುವಂತೆ ಕೆ.ಆರ್.ನಗರ ಠಾಣೆಗೆ ದೂರು ನೀಡಿದ್ದರು.

ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು ವೀರಭದ್ರನನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದಾಗ ಆತ ಹಣಕ್ಕಾಗಿ ಗೌರಮ್ಮ ಅವರನ್ನು ಕೊಲೆಗೈದು ಶವವನ್ನು ಶೌಚಾಲಯದ ಯುಜಿಡಿ ಗುಂಡಿ ಹಾಕಿರುವುದಾಗಿ ತಿಳಿಸಿದ್ದಾನೆ. ಬಳಿಕ ತಿಪ್ಪೂರು ಗ್ರಾಮಕ್ಕೆ ಈತನನ್ನು ಕರೆತಂದ ಪೊಲೀಸರು ಶೌಚಾಲಯದ ಯುಜಿಡಿ ಗುಂಡಿಯೊಳಗಿದ್ದ ಶವವನ್ನು ಹೊರ ತೆಗೆದು ಮರಣೋತ್ತರ ಪರೀಕ್ಷೆಗೆ ರವಾನಿಸಿದ್ದಾರೆ.

ವಿಷಯ ತಿಳಿದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ್ ಬಾಲದಂಡಿ, ಎಎಸ್ಪಿ ಮಲ್ಲಿಕ್, ಡಿವೈಎಸ್ಪಿ ಟಿ.ಜಿ.ರಾಜಣ್ಣ ತಿಪ್ಪೂರು ಗ್ರಾಮಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ, ಪೊಲೀಸ್ ಇನ್ಸ್‌ಪೆಕ್ಟರ್ ಶಿವಪ್ರಕಾಶ್ ಅವರಿಂದ ಹೆಚ್ಚಿನ ಮಾಹಿತಿ ಪಡೆದರು.

ರೈತರು ಸರ್ಕಾರದ ಸವಲತ್ತು ಪಡೆಯಲು ಮುಂದಾಗಿ

ಭಾರತೀಯ ಕಿಸಾನ್ ಸಂಘದ ಜಿಲ್ಲಾಧ್ಯಕ್ಷ ಪ್ರಭುಸ್ವಾಮಿ ಸಲಹೆ



ಭಾರತೀಯ ಕಿಸಾನ್ ಸಂಘದ ತಾಲೂಕು ಘಟಕದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ನಂಜನಗೂಡು, ಮೇ 8– ರೈತರು ಸಂಘಟಿತರಾಗುವ ಮೂಲಕ ಸರ್ಕಾರದ ಸವಲತ್ತುಗಳನ್ನು ಪಡೆದುಕೊಳ್ಳಲು ಮುಂದಾಗಬೇಕು ಎಂದು ಭಾರತೀಯ ಕಿಸಾನ್ ಸಂಘದ ಜಿಲ್ಲಾಧ್ಯಕ್ಷ ಪ್ರಭುಸ್ವಾಮಿ ಸಲಹೆ ನೀಡಿದರು.

ನಗರದ ಎಪಿಎಂಸಿ ಆವರಣದಲ್ಲಿ ಆಯೋಜಿಸಿದ್ದ ರೈತರ ಸಂಘಟನಾ ಸಭೆಯಲ್ಲಿ ಮಾತನಾಡಿದ ಅವರು, ರೈತರ ಬೆಳೆಗಳಿಗೆ ವೈಜ್ಞಾನಿಕ ಬೆಲೆ ನಿಗದಿ, ಪಂಪ್‌ಸೆಟ್‌ಗೆ ದಿನಕ್ಕೆ ಕನಿಷ್ಠ 10 ಗಂಟೆ ವಿದ್ಯುತ್ ಪೂರೈಕೆ ಹಾಗೂ ರಸಗೊಬ್ಬರಗಳ ಸಮರ್ಪಕ ಪೂರೈಕೆಯಾಗುವಂತೆ ನೋಡಿಕೊಳ್ಳುವ ಸಲುವಾಗಿ ರೈತರು ಸಂಘಟಿತರಾಗಬೇಕು ಎಂದು ಸಲಹೆ ನೀಡಿದರು.

ನೂತನ ಘಟಕ ರಚನೆ: ಭಾರತೀಯ ಕಿಸಾನ್ ಸಂಘದ ನಂಜನಗೂಡು ತಾಲೂಕು ಘಟಕದ ನೂತನ ಅಧ್ಯಕ್ಷರಾಗಿ ಹೆಚ್.ಆರ್. ಗಿರೀಶ್, ಕಾರ್ಯದರ್ಶಿ ಎಚ್. ಎಸ್. ಯೋಗೀಶ್, ಉಪಾಧ್ಯಕ್ಷರಾಗಿ ಡಿ.ಎಂ. ನಾಗೇಂದ್ರ ದೇವನೂರು, ರಾಚ ಪ್ಪಾಜಿ ಕೋಣನೂರು, ಸಿ.ಮಹೇಂದ್ರ ಬೆಳಲೆ, ಸೋಮಶೇಖರ್ ಪಿ.ಮರಳ್ಳಿ ಆಯ್ಕೆಯಾದರು.

ಇದೇ ಸಂದರ್ಭ ನೂತನ ಸದಸ್ಯರಿಗೆ ಹಸಿರು ಶಾಲು ಮತ್ತು ಬಾವುಟ ನೀಡಿ ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು. ಸಭೆಯಲ್ಲಿ ಭಾರತೀಯ ಕಿಸಾನ್ ಸಂಘದ ಪ್ರಧಾನ ಕಾರ್ಯದರ್ಶಿ ರವಿ, ಪ್ರಭುಸ್ವಾಮಿ, ವಿಜಯ್ ಕುಮಾರ್, ಉಮೇಶ್, ಬಸವರಾಜು ಮತ್ತಿತರರು ಭಾಗವಹಿಸಿದ್ದರು.

ಪಿಡಿಓಗಳ ಕ್ಷೇಮಾಭಿವೃದ್ಧಿ ಸಂಘಕ್ಕೆ ಲಿಂಗರಾಜು ಅಧ್ಯಕ್ಷ



ಪಿಡಿಓ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ತಿ.ನರಸೀಪುರ, ಮೇ 8– ಕರ್ನಾಟಕ ರಾಜ್ಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾಗಿ ಕೆ.ಎಸ್.ಲಿಂಗರಾಜು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪಟ್ಟಣದ ತಾಪಂ ಕಚೇರಿಯಲ್ಲಿ ನಡೆದ ಸಭೆಯಲ್ಲಿ ತಾಲೂಕು ಘಟಕಕ್ಕೆ ನೂತನ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಈ ವೇಳೆ ಗೌರವಾಧ್ಯಕ್ಷ ರಾಜಣ್ಣ, ಉಪಾಧ್ಯಕ್ಷ ಶ್ರೀನಿವಾಸ್, ಮಹಿಳಾ ಉಪಾಧ್ಯಕ್ಷೆ ವಿ. ರೇಣುಕಾ, ಪ್ರಧಾನ ಕಾರ್ಯದರ್ಶಿ ಅಮ್ಜದ್ ಪಾಷ, ಖಜಾಂಚಿ ಸಿ.ಪುಟ್ಟಸ್ವಾಮಿ, ಸಂಘಟನಾ ಕಾರ್ಯದರ್ಶಿ ಮಹದೇವು, ಮಹಿಳಾ ಸಂಘಟನಾ ಕಾರ್ಯದರ್ಶಿ ಆರ್.ನಿರ್ಮಲ, ಸಾಂಸ್ಕೃತಿಕ ಕಾರ್ಯದರ್ಶಿ ಬಿ.ಶಿಲ್ಪ ಹಾಗೂ ಕ್ರೀಡಾ ಕಾರ್ಯದರ್ಶಿಯಾಗಿ ಕೆ.ಪಿ. ಕೆಂಪೇಗೌಡ ಅವರನ್ನು ಆಯ್ಕೆ ಮಾಡಲಾಯಿತು.

ಸಂಘದ ಜಿಲ್ಲಾಧ್ಯಕ್ಷ ಸಿ.ಪ್ರಕಾಶ್ ಮಾತನಾಡಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಗ್ರಾಮೀಣಾಭಿವೃದ್ಧಿಯ ಪ್ರಮುಖ ಕೊಂಡಿಯಾಗಿದ್ದು, ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದಾರೆ. ಗ್ರಾಮಗಳ ಸಮಗ್ರ ಅಭಿವೃದ್ಧಿ, ಜನಸೇವೆ ನಿರ್ವಹಣೆ ಹಾಗೂ ಆಡಳಿತ ವ್ಯವಸ್ಥೆಯ ಬಲವರ್ಧನೆಗೆ ಪಿಡಿಓಗಳ ಸೇವೆ ಅತ್ಯಂತ ಅಮೂಲ್ಯವಾಗಿದೆ. ಇಂತಹ ಅಧಿಕಾರಿ ಗಳ ಹಿತಾಸಕ್ತಿ ಕಾಪಾಡಿ ಅವರ ಸಮಸ್ಯೆ ಗಳಿಗೆ ಸ್ಪಂದಿಸುವ ಕಾರ್ಯವನ್ನು ಸಂಘವು ನಿರಂತರವಾಗಿ ಮಾಡಬೇಕು. ನೂತನ ಪದಾಧಿಕಾರಿಗಳು ಸಂಘದ ಗೌರವ ಹೆಚ್ಚಿಸುವಂತೆ ಕಾರ್ಯ ನಿರ್ವಹಿಸಬೇಕು. ಸದಸ್ಯರ ಸಮಸ್ಯೆಗಳಿಗೆ ಸ್ಪಂದಿಸಿ, ಅವರ ಹಕ್ಕುಗಳ ರಕ್ಷಣೆಗೆ ಧ್ವನಿಯಾಗಬೇಕು. ಜೊತೆಗೆ ಸಂಘದ ಮೂಲಕ ಪರಸ್ಪರ ಸಹಕಾರ, ಸ್ನೇಹ ಮತ್ತು ಸೇವಾ ಮನೋಭಾವ ಬೆಳೆಸುವ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಪಿಡಿಓಗಳ ಹಿತ ಕಾಪಾಡಲು, ಆಂತರಿಕ ಸಮಸ್ಯೆ ಪರಿಹರಿಸಿಕೊಳ್ಳಲು ಕ್ಷೇಮಾಭಿವೃದ್ಧಿ ಸಂಘ ಪೂರಕವಾಗಿ ಕಾರ್ಯ ನಿರ್ವಹಿಸಲಿದೆ. ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಸಭೆ ನಡೆಸಿ ಕಾರ್ಯಕಾರಿ ಸಮಿತಿಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗುತ್ತಿದೆ ಎಂದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಸವರಾಜು, ಗೌರವಾಧ್ಯಕ್ಷ ಎಸ್.ಧರ್ಮೇಂದ್ರ, ಖಜಾಂಚಿ ಮಹದೇವ ನಾಯಕ, ಮಹಿಳಾ ಉಪಾಧ್ಯಕ್ಷೆ ಟಿ.ಸೌಮ್ಯಲತಾ, ಸಂಘಟನಾ ಕಾರ್ಯದರ್ಶಿ ಮೊಹಮ್ಮದ್ ಇಷ್ಹಾಕ್, ತಾಯೂರು ಪಿಡಿಓ ಟಿ.ಎಂ.ಮಹೇಶ ಸೇರಿದಂತೆ ವಿವಿಧ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಇದ್ದರು.

ಸಾಧನೆಗೆ ಬಡತನ, ಆರ್ಥಿಕ ಸ್ಥಿತಿ ಅಡ್ಡಿಯಾಗಲ್ಲ



ವಿದ್ಯಾರ್ಥಿನಿ ಸುಶ್ಮಿತಾಳನ್ನು ಮುಖಂಡ ಮನು ಸನ್ಮಾನಿಸಿದರು.

ಬನ್ನೂರು, ಮೇ 8– ವಿದ್ಯಾರ್ಥಿಗಳ ಸಾಧನೆಗೆ ಬಡತನ ಮತ್ತು ಆರ್ಥಿಕ ಸ್ಥಿತಿ ಅಡ್ಡಿಯಾಗಲಾರದು ಎಂದು ಕಾಂಗ್ರೆಸ್ ಮುಖಂಡ ಎಲ್.ಪಿ. ಮನು ತಿಳಿಸಿದರು.

ಪಟ್ಟಣದ ಜೈ ಭೀಮ್ ನಗರದ ನಿವಾಸಿ ಶಿವಣ್ಣ ಮತ್ತು ಮಹದೇವಮ್ಮ ದಂಪತಿ ಪುತ್ರಿ ಸುಶ್ಮಿತಾ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 621 ಅಂಕ ಗಳಿಸುವ ಮೂಲಕ ರಾಜ್ಯಕ್ಕೆ 5ನೇ ಸ್ಥಾನ ಪಡೆದ ಹಿನ್ನೆಲೆಯಲ್ಲಿ ಆಕೆಯನ್ನು ಸನ್ಮಾನಿಸಿ, ನಗದು ಬಹುಮಾನ ನೀಡಿ ಮಾತನಾಡಿದ ಅವರು, ಶೈಕ್ಷಣಿಕ ಉನ್ನತಿಗೆ ನಿರಂತರ ಪರಿಶ್ರಮ ಮತ್ತು ಅಧ್ಯಯನ ಅಗತ್ಯ. ಸುಶ್ಮಿತಾ ಬಡತನವನ್ನು ಲೆಕ್ಕಿಸದೇ ನಿರಂತರ ಪರಿಶ್ರಮದಿಂದ ಉತ್ತಮ ಸಾಧನೆ ಮಾಡಿರುವುದು ಸಂತಸ ತಂದಿದೆ ಎಂದರು. ಪ್ರತಿಯೊಬ್ಬ ವಿದ್ಯಾರ್ಥಿಗಳು ಏನಾದರೂ ಸಾಧಿಸುವ ಛಲ ರೂಢಿಸಿಕೊಳ್ಳಬೇಕು. ಆಗ ಮಾತ್ರ ಗೌರವ ನಮ್ಮನ್ನು ಹುಡುಕಿಕೊಂಡು ಬರುತ್ತದೆ. ಅಲ್ಲದೇ ಸೂಕ್ತ ಸ್ಥಾನಮಾನ ಲಭ್ಯವಾಗುತ್ತದೆ ಎಂದರು.

ಎಂಪಿಇಡಿ ದೈಹಿಕ ಶಿಕ್ಷಕ ಸಂಘದ ರಾಜ್ಯಾಧ್ಯಕ್ಷ ಸಿದ್ದೇಶ್ವರ ಮಾತನಾಡಿ, ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸುವುದರಿಂದ ಅವರಲ್ಲಿ ಮತ್ತಷ್ಟು ಸಾಧಿಸುವ ಮನೋಭಾವ ಹೆಚ್ಚಾಗುವುದರ ಜೊತೆಗೆ ಬೇರೆ ವಿದ್ಯಾರ್ಥಿಗಳಲ್ಲಿಯೂ ಸಹ ತಾವು ಸಾಧನೆ ಮಾಡಿ ಗೌರವ ಸಂಪಾದಿಸಬೇಕು ಎಂಬ ಆಕಾಂಕ್ಷೆ ಮೂಡುತ್ತದೆ ಎಂದರು.

ಈ ವೇಳೆ ಐಟಿಬಿ ಶಿವಕುಮಾರ್, ಬಿ.ಎಂ.ಜೈಕುಮಾರ್, ಬಿ.ಎಂ.ಮಹೇಶ್ ಉಪಸ್ಥಿತರಿದ್ದರು.

ಮೂಡಲುಕೊಪ್ಪಲು ಗ್ರಾಮದ ಸಮಗ್ರ ಅಭಿವೃದ್ಧಿಗೆ ಬದ್ಧ



ಜನಸಂಪರ್ಕ ಸಭೆಯಲ್ಲಿ ಶಾಸಕ ಡಿ.ರವಿಶಂಕರ್ ಮಾತನಾಡಿದರು.

ಕೆ.ಆರ್.ನಗರ, ಮೇ 8– ಪಟ್ಟಣಕ್ಕೆ ಹೊಂದಿಕೊಂಡತ್ತಿರುವ ಮೂಡಲುಕೊಪ್ಪಲು ಗ್ರಾಮದ ಸಮಗ್ರ ಅಭಿವೃದ್ಧಿಗೆ ಬದ್ಧನಾಗಿದ್ದು, ಹಂತ ಹಂತವಾಗಿ ಅನುದಾನ ನೀಡುವ ಮೂಲಕ ಗ್ರಾಮವನ್ನು ಮಾದರಿ ಮಾಡುತ್ತೇನೆ ಎಂದು ಶಾಸಕ ಡಿ.ರವಿಶಂಕರ್ ಹೇಳಿದರು.

ತಾಲೂಕಿನ ಮೂಡಲಕೊಪ್ಪಲು ಗ್ರಾಮದಲ್ಲಿ ನಡೆದ ಜನ ಸಂಪರ್ಕ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗ್ರಾಮದ ರಸ್ತೆಗಳನ್ನು ಕಾಂಕ್ರೀಟಿಕರಣ ಮತ್ತು ಬಾಕ್ಸ್ ಚರಂಡಿ ಮಾಡಲು ನಿರ್ಧರಿಸಿದ್ದು, ಅದಕ್ಕೆ ಅಗತ್ಯ ಅನುದಾನ ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.

ಕೆ.ಆರ್.ನಗರದಿಂದ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಡಾಂಬರೀಕರಣ ಮಾಡಲು 3 ಕೋಟಿ ರೂ. ಅನುದಾನ ಮಂಜೂರು ಮಾಡಿಸಲಾಗಿದ್ದು, ಶೀಘ್ರ ಕಾಮಗಾರಿ ಆರಂಭವಾಗಲಿದೆ. ಗ್ರಾಮವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಬೇಕಾಗಿದೆ. ಅದಕ್ಕಾಗಿ ಕಂದಾಯ ಇಲಾಖಾ ಅಧಿಕಾರಿಗಳು ಗ್ರಾಮದ ವಿಸ್ತೀರ್ಣವನ್ನು ಸರ್ವೇ ಮಾಡಿ ಚೆಕ್‌ಬಂದಿ ರಚಿಸಬೇಕು ಎಂದು ಸೂಚಿಸಿದರು.

2013ರಿಂದ 18ರವರೆಗೆ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯನವರ ಅಧಿಕಾರಾವಧಿಯಲ್ಲಿ ಹಲವು ದೇವಾಲಯಗಳ ಜೀರ್ಣೋದ್ಧಾರ ಮತ್ತು ಗ್ರಾಮ ಪರಿಮಿತಿ ರಸ್ತೆ ಅಭಿವೃದ್ಧಿಗಾಗಿ ಅನುದಾನ ಕೊಡಿಸಲಾಗಿತ್ತು. ಇದೀಗ ಗ್ರಾಮಸ್ಥರ ಬೇಡಿಕೆಯಂತೆ ಶ್ರೀರಾಮಮಂದಿರ ಮುಂದುವರೆದ ಕಾಮಗಾರಿಗಾಗಿ ಶಾಸಕರ ನಿಧಿಯಿಂದ ಅನುದಾನ ನೀಡುತ್ತೇನೆ ಎಂದು ಭರವಸೆ ನೀಡಿದರು. ಈ ವೇಳೆ ತಹಸೀಲ್ದಾರ್ ಜಿ.ಸುರೇಂದ್ರಮೂರ್ತಿ, ತಾಪಂ ಇಓ ಕುಲದೀಪ್, ಗ್ಯಾರಂಟಿ ಯೋಜನೆಗಳ ಅನುಷ್ಠಾನಾ ಸಮಿತಿ ಅಧ್ಯಕ್ಷ ಎಂ.ಎಸ್. ಮಹದೇವ್, ಕಾಂಗ್ರೆಸ್ ವಕ್ತಾರ ಸೈಯದ್ ಜಾಬೀರ್, ಮುಖಂಡರಾದ ಕಲ್ಲಹಳ್ಳಿ ಶ್ರೀನಿವಾಸ್, ಜಯಕುಮಾರ್, ಕೃಷ್ಣೇಗೌಡ, ಕೆ.ಎಂ.ಶ್ರೀನಿವಾಸ್, ಎನ್.ದಿನೇಶ್, ರೇವಣ್ಣ, ಎಂ.ಎನ್.ನಾಗೇಶ್, ಗಿರೀಶ್, ಎಂ.ಜೆ. ರಮೇಶ್, ಲತಾರವಿ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಹಾಜರಿದ್ದರು.

ದಿನಸಿ ಅಂಗಡಿ, ಹೋಟೆಲ್, ಬೇಕರಿಗಳಿಗೆ

ಆಹಾರ ಸುರಕ್ಷತಾಧಿಕಾರಿ ಭೇಟಿ, ಪರಿಶೀಲನೆ



ಬೇಕರಿಗೆ ಆಹಾರ ಸುರಕ್ಷತಾಧಿಕಾರಿ ಡಾ.ರವಿಕುಮಾರ್ ಭೇಟಿ ನೀಡಿ ಪರಿಶೀಲಿಸಿದರು.

ಸರಗೂರು, ಮೇ 8– ಪಟ್ಟಣದ ದಿನಸಿ ಅಂಗಡಿ ಮತ್ತು ಹೋಟೆಲ್, ಬೇಕರಿಗಳಿಗೆ ಆಹಾರ ಸುರಕ್ಷತಾಧಿಕಾರಿ ಡಾ.ರವಿ ಕುಮಾರ್ ದಿಢೀರ್ ಭೇಟಿ ನೀಡಿ ಪರಿಶೀಲಿಸಿದರು.

ನಂತರ ಮಾತನಾಡಿದ ಅವರು, ಪಟ್ಟಣದ ಎಲ್ಲಾ ದಿನಸಿ ಅಂಗಡಿ, ಬೇಕರಿ, ಹೋಟೆಲ್, ಬೀದಿ ಬದಿ ಹಣ್ಣಿನ ವ್ಯಾಪಾರಿಗಳೂ ಕಡ್ಡಾಯವಾಗಿ ಪರವಾನಿಗೆ ಪಡೆಯಬೇಕು. ವ್ಯಾಪಾರ ಮಾಡುವ ಸ್ಥಳಗಳನ್ನು ಶುಚಿಯಾಗಿ ಇಟ್ಟುಕೊಳ್ಳಬೇಕು. ಸಾರ್ವಜನಿಕರಿಗೆ ಶುದ್ಧವಾದ ಆಹಾರ ನೀಡಬೇಕು. ಹಣ್ಣುಗಳನ್ನು ಕತ್ತರಿಸಿದ ಬಳಿಕ ಗಾಜಿನ ಬಾಕ್ಸ್‌ನಲ್ಲಿ ಇಡಬೇಕು. ಅಲ್ಲದೇ ಹಣ್ಣು ಮಾರಾಟ ಮಾಡುವವರು ಶುದ್ಧವಾದ ಹಣ್ಣುಗಳನ್ನು ಮಾರಾಟ ಮಾಡಬೇಕು. ಕೊಳೆತ ಹಣ್ಣುಗಳಿಂದ ಜ್ಯೂಸ್ ತಯಾರಿಸಬಾರದು. ಹಸಿ ಹಾಗೂ ಒಣ ಕಸ ಬೇರ್ಪಡಿಸಿ ಒಂದೆಡೆ ಶೇಖರಿಸಿ ಪಟ್ಟಣ ಪಂಚಾಯಿತಿಯಿಂದ ಬರುವ ವಾಹನಕ್ಕೆ ನೀಡಬೇಕು ಎಂದು ಸೂಚಿಸಿದರು. ಈ ವೇಳೆ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ರವಿರಾಜ್, ಶರಣಪ್ಪ ರಮಣಿ ಪ್ರತಾಪ್ ಇನ್ನಿತರರಿದ್ದರು.

ಹುಣಸೂರಿನ ಶ್ರೀಲಕ್ಷ್ಮಿ ನರಸಿಂಹಸ್ವಾಮಿ ದೇವಸ್ಥಾನದ ಆವರಣದಲ್ಲಿ

ದಲಿತರೊಟ್ಟಿಗೆ ಬ್ರಾಹ್ಮಣರ ಸಹಪಂಕ್ತಿ; ಶೋಷಣೆ ತೊಲಗಿಸುವ ಮಹದೆಜ್ಜೆ



ಶ್ರೀಲಕ್ಷ್ಮಿ ನರಸಿಂಹಸ್ವಾಮಿ ದೇವಸ್ಥಾನದ ಆವರಣದಲ್ಲಿ ಸಹಪಂಕ್ತಿ ಭೋಜನ ನಡೆಯಿತು.

ಹುಣಸೂರು, ಮೇ 8– ನಗರದ ಬ್ರಾಹ್ಮಣರ ಬೀದಿಯಲ್ಲಿ ಮುಜರಾಯಿ ಇಲಾಖೆಗೆ ಸೇರಿದ ಶ್ರೀಲಕ್ಷ್ಮಿ ನರಸಿಂಹಸ್ವಾಮಿ ದೇವಸ್ಥಾನದ ಆವರಣದಲ್ಲಿ ಅಸ್ಪೃಶ್ಯತೆ ನಿರ್ಮೂಲನೆಗಾಗಿ ದಲಿತರೊಟ್ಟಿಗೆ ಸಹಪಂಕ್ತಿ ಭೋಜನ ಕಾರ್ಯಕ್ರಮವನ್ನು ಬ್ರಾಹ್ಮಣ ಸಮಾಜದಿಂದ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ತಹಸೀಲ್ದಾರ್ ಮಂಜುನಾಥ್, ಅಸ್ಪೃಶ್ಯತೆ, ಜಾತೀಯತೆ ಅನಿಷ್ಟ ಪದ್ಧತಿಯಾಗಿದ್ದು, ಇವುಗಳನ್ನು ನಿರ್ಮೂಲನೆ ಮಾಡಲು ಹಲವು ದಾರ್ಶನಿಕರು ಹೋರಾಡುತ್ತಾ ಬಂದಿರುತ್ತಾರೆ. ಅವರಲ್ಲಿ 12ನೇ ಶತಮಾನದ ಜಗಜ್ಯೋತಿ ಬಸವಣ್ಣ ಅತ್ಯಂತ ಪ್ರಮುಖರು. ಅವರು ಈ ಅಸಮಾನತೆಗಳ ವಿರುದ್ಧ ಅನುಭವ ಮಂಟಪದ ಮೂಲಕ ಅವಕಾಶ ವಂಚಿತ ಸಮುದಾಯಗಳಿಗೆ ಸಮಾನತೆ ಕಲ್ಪಿಸಿಕೊಟ್ಟು ಸಾಮಾಜಿಕ ಕ್ರಾಂತಿಯನ್ನೇ ಮಾಡಿದರು. ನಂತರದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್, ಡಾ.ಬಿ. ಆರ್.ಅಂಬೇಡ್ಕರ್ ಅವರು ಶೋಷಿತ ಸಮುದಾಯಗಳ ಸಮಾನತೆಗಾಗಿ ಹೋರಾಟ ಮಾಡಿದರು. ಅಸ್ಪೃಶ್ಯತೆ ನಿರ್ಮೂಲನೆ ಕಾಯ್ದೆ ಜಾರಿಯಲ್ಲಿದ್ದರೂ, ಇಂದಿಗೂ ಕೆಲವು ಕಡೆ ಅಸ್ಪೃಶ್ಯತೆ ಆಚರಣೆಯಲ್ಲಿರುವುದು ವಿಷಾದನೀಯ ಎಂದರು.

> "ದಲಿತರನ್ನು ಬ್ರಾಹ್ಮಣ ಸಮಾಜದವರು ಕರೆದು ಅವರೊಟ್ಟಿಗೆ ಸಹಪಂಕ್ತಿ ಭೋಜನ ಮಾಡುತ್ತಿರುವುದು ಮಹತ್ವದ ಕಾರ್ಯವಾಗಿದೆ. ಯಾವ ಸಮುದಾಯ ಇಲ್ಲಿವರೆಗೆ ಅಸ್ಪೃಶ್ಯತೆ ಪೋಷಿಸಿಕೊಂಡು ಬಂದಿತ್ತೋ ಅದೇ ಸಮುದಾಯ ಈ ಅನಿಷ್ಟ ಪದ್ಧತಿಯನ್ನು ವಿರೋಧಿಸಿ ದಲಿತರೊಟ್ಟಿಗೆ ಸಹಪಂಕ್ತಿ ಭೋಜನ ಮಾಡುತ್ತಿರುವುದು ಮಾದರಿಯಾಗಿದೆ. ಇಂತಹ ಕಾರ್ಯ ರಾಜ್ಯದ ಪ್ರತಿಯೊಂದು ಗ್ರಾಮಗಳಲ್ಲಿ ಆಗಬೇಕಿದೆ.
> – ಮಾನಸ, ನಗರಸಭೆ ಆಯುಕ್ತೆ.

ಈ ಅನಿಷ್ಟ ಪದ್ಧತಿ ವಿರುದ್ಧ ಹುಣಸೂರಿನ ಬ್ರಾಹ್ಮಣರ ಬೀದಿಯ ಅರ್ಚಕ ಗುರುರಾಜ್ ಕುಟುಂಬದವರು ಶ್ರೀಲಕ್ಷ್ಮಿ ನರಸಿಂಹಸ್ವಾಮಿ ದೇವಸ್ಥಾನದ ಆವರಣಕ್ಕೆ ದಲಿತರನ್ನು ಕರೆದು, ದೇವಸ್ಥಾನದ ಒಳಗೆ ಪ್ರವೇಶ ಮಾಡಿಸಿ ಅವರೊಟ್ಟಿಗೆ ಸಹಪಂಕ್ತಿ ಭೋಜನ ಮಾಡಿಸುತ್ತಿರುವುದು ಸಾಮಾಜಿಕ ಬದಲಾವಣೆಗೆ ಮುನ್ನುಡಿ ಬರೆದಂತಾಗಿದೆ. ಹೀಗಾಗಿ ಬ್ರಾಹ್ಮಣ ಸಮಾಜದ ಗುರುರಾಜ್ ಕುಟುಂಬಕ್ಕೆ ತಾಲೂಕು ಆಡಳಿತದಿಂದ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ತಾಪಂ ಇಓ ಹೊಂಗಯ್ಯ ಮಾತನಾಡಿ, ಅಸ್ಪೃಶ್ಯತೆ ನಿರ್ಮೂಲನೆ ಆಗದ ಹೊರತು ಸಮಾಜ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ ಎನ್ನುವ ಡಾ.ಬಿ.ಆರ್.ಅಂಬೇಡ್ಕರ್ ಅವರ ಆಶಯದಂತೆ ಬ್ರಾಹ್ಮಣರ ಬೀದಿಯಲ್ಲಿ ಈ ಸಮಾಜವು ಮಾಡುತ್ತಿರುವ ಸಹ ಪಂಕ್ತಿ ಭೋಜನ ಕಾರ್ಯವು ನಿಜಕ್ಕೂ ಸಾಕ್ಷಿಯಾಗಿದೆ ಎಂದರು.

> "ದಲಿತರನ್ನು ಬ್ರಾಹ್ಮಣ ಮತ್ತು ಇತರೆ ಸಮಾಜ ದೂರವಿಟ್ಟಿರುವುದರಿಂದ ಪಡೆಯುವುದಕ್ಕಿಂತ ಕಳೆದುಕೊಂಡಿದ್ದೇ ಜಾಸ್ತಿ. ಇಂತಹ ಸೋದರ ಸಂಬಂಧಿಗಳಾದ ದಲಿತರನ್ನು ಹೊರಗಿಡುವುದು ಸರಿಯಲ್ಲ. ನಮ್ಮ ಹಿಂದೂ ಧರ್ಮವನ್ನು ರಕ್ಷಿಸಬೇಕಾದರೆ ದಲಿತರನ್ನು ಒಟ್ಟುಗೂಡಿಸಿಕೊಂಡು ಅಸ್ಪೃಶ್ಯತೆ ನಿರ್ಮೂಲನೆ ಮಾಡಿ ಹಿಂದೂ ಸಂಸ್ಕೃತಿ ಉಳಿಸಿ ಬೆಳೆಸಬೇಕಾಗಿದೆ.
> – ಗುರುರಾಜ್, ಅರ್ಚಕ.

ಕುರುಬ ಸಮಾಜದ ತಾಲೂಕು ಅಧ್ಯಕ್ಷ ಕುನ್ನೇಗೌಡ ಮಾತನಾಡಿ, ಅಸ್ಪೃಶ್ಯತೆಯನ್ನು ಕೇವಲ ಕಾನೂನಿನ ಮೂಲಕ ನಿರ್ಮೂಲನೆ ಮಾಡಲು ಸಾಧ್ಯವಿಲ್ಲ. ಬದಲಾಗಿ ಮನಃ ಪರಿವರ್ತನೆಯಿಂದ ಈ ಪದ್ಧತಿ ತೊಡೆದು ಹಾಕಲು ಸಾಧ್ಯವಿದೆ. ಅಂತಹ ಕಾರ್ಯ ನಡೆಯುತ್ತಿರುವುದು ನಮ್ಮ ತಾಲೂಕಿಗೆ ಮಾದರಿಯಾಗಿದೆ ಎಂದರು.

ಇದೇ ವೇಳೆ ದಸಂಸ ರಾಜ್ಯ ಸಂಘಟನಾ ಸಂಚಾಲಕ ನಿಂಗರಾಜ್ ಮಲ್ಲಾಡಿ, ಆದಿಜಾಂಬವ ಸಮಾಜದ ಡಿ.ಕುಮಾರ್ ಮಾತನಾಡಿದರು. ಸಮಾಜ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಭರತ್, ಗಿರಿಜನ ಕಲ್ಯಾಣಾಧಿಕಾರಿ ಗಂಗಾಧರ್, ಎಸ್‌ಐ ಮಹಾಲಿಂಗಯ್ಯ, ಉಪ ತಹಸೀಲ್ದಾರ್ ಶ್ರೀಪಾದ, ರವಿಚಂದ್ರ, ಶಿರಸ್ತೇದಾರ್ ಪ್ರಕಾಶ, ಲೋಹಿತ್ ರಾಜ್ ಅರಸ್, ದಲಿತ ಮುಖಂಡರಾದ ಬಸವಲಿಂಗಯ್ಯ, ಕೆಂಪರಾಜು, ಗಜೇಂದ್ರ, ರಾಜು, ಪ್ರಕಾಶ, ಕಾಯಕ ಸಮಾಜದ ಹೊನ್ನಪ್ಪ ತೊಂಡಾಳು, ವಿಶ್ವಕರ್ಮ ಸಮಾಜದ ಸರ್ವೇ ಕುಮಾರ್, ಬ್ರಾಹ್ಮಣ ಸಮಾಜದ ವಿ.ಎನ್.ದಾಸ್, ವೆಂಕಟೇಶ್ ಮೂರ್ತಿ, ಅನುಪ್ರಸಾದ್, ಸಿಂಧು, ಬೃಂದಾ, ಭಾಗ್ಯಮ್ಮ, ವಿಜಯಲಕ್ಷ್ಮಿ, ಸುಕನ್ಯಾ, ಕಲಾವಿದ ಕುಮಾರ್ ಅರಸೇಗೌಡ, ಲೋಕೇಶ್ ಬಾಬು, ಪ್ರಗತಿಪರ ಚಿಂತಕ ನವೀನ್ ರೈ, ಒಕ್ಕಲಿಗ ಸಮಾಜದ ಹೆಚ್.ಎನ್. ರವಿ, ಅರ್ಚಕ ಗುರುರಾಜ್ ಅವರ ಪುತ್ರರಾದ ಶ್ರೀಹರಿ, ಚಂದ್ರಮೌಳಿ, ಶ್ರೀರಾಮ ಸೇನೆಯ ಅನಿಲ್, ಕುಮಾರ, ಕುಂಬಾರ ಶೆಟ್ಟಿ ಸಮಾಜದ ವಿನಯ್ ಶೆಟ್ಟಿ, ನಾಯಕ ಸಮಾಜದಿಂದ ಪೈಲ್ವಾನ್ ರಾಕಿ, ವೆಂಕಟೇಶ್, ಪಾಂಡು ನಾಯಕ್, ಕುಮಾರ ನಾಯಕ, ಬಸವರಾಜ ನಾಯಕ, ಮಹದೇವ ನಾಯಕ, ಕುರುಬ ಸಮಾಜದ ಮಂಜುನಾಥ್, ಅಲೆಮಾರಿ ಸಮುದಾಯದ ಹರೀಶ, ಶೇಖರ, ದಾಸಪ್ಪ ಶೋಭಮ್ಮ, ಪೌರಕಾರ್ಮಿಕ ಸಮಾಜದ ಮುರುಗೇಶ್, ಕಣ್ಣಯ್ಯ, ಕೃಷ್ಣ, ರಘು, ಪವನ್, ಸಂತೋಷ್ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ಸಾಲಬಾಧೆ: ರೈತ ಆತ್ಮಹತ್ಯೆ



ಹನಗೋಡು, ಮೇ 8– ಸಾಲಬಾಧೆ ತಾಳಲಾರದೇ ರೈತ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಗುರುವಾರ ಸಂಜೆ ವಡ್ಡಂಬಾಳು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಸಿದ್ದರಾಜು(42) ಆತ್ಮಹತ್ಯೆ ಮಾಡಿಕೊಂಡವರು. ಈತ ವ್ಯವಸಾಯಕ್ಕಾಗಿ ಹುಣಸೂರಿನ ಎಸ್‌ಬಿಐ ಬ್ಯಾಂಕ್, ಸ್ವಸಹಾಯ ಸಂಘ, ಮೈಕ್ರೋ ಫೈನಾನ್ಸ್, ಕೈ ಸಾಲ ಸೇರಿದಂತೆ 15 ಲಕ್ಷಕ್ಕೂ ಹೆಚ್ಚು ಸಾಲ ಮಾಡಿದ್ದರು. ಆದರೆ ತಾವು ಕಷ್ಟಪಟ್ಟು ಬೆಳೆದ ತಂಬಾಕು, ಶುಂಠಿ ಬೆಳೆಗೆ ಬೆಂಬಲ ಬೆಲೆ ಸಿಗದ ಕಾರಣ ಮಾಡಿದ ಸಾಲ ತೀರಿಸಲು ಸಾಧ್ಯವಾಗಿರಲಿಲ್ಲ. ಹೀಗಾಗಿ ತೀವ್ರ ಮನನೊಂದಿದ್ದ ಸಿದ್ದರಾಜು ಅವರು ಗುರುವಾರ ಸಂಜೆ ತಮ್ಮ ಜಮೀನಿನಲ್ಲಿದ್ದ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಹುಣಸೂರು ಗ್ರಾಮಾಂತರ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಗ್ರಾಮಕ್ಕೆ ಹೆಚ್.ಪಿ.ಮಂಜುನಾಥ್ ಭೇಟಿ: ವಿಷಯ ತಿಳಿದು ಗ್ರಾಮಕ್ಕೆ ಆಗಮಿಸಿದ ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್, ರೈತ ಸಿದ್ದರಾಜು ಕುಟುಂಬದವರಿಗೆ ಸಾಂತ್ವನ ಹೇಳಿದರು.

ಅರ್ಹ ಫಲಾನುಭವಿಗಳಿಗೆ ಸೌಕರ್ಯ ಕಲ್ಪಿಸಿ

ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಅರುಣ್ ಕುಮಾರ್ ಅಧಿಕಾರಿಗಳಿಗೆ ಸೂಚನೆ

ಮೈಸೂರು, ಮೇ 8(ಎಂಕೆ)– ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ವ್ಯಾಪಕ ಪ್ರಚಾರದ ಜೊತೆಗೆ ಅರ್ಹ ಫಲಾನುಭವಿಗಳಿಗೆ ಸೌಲಭ್ಯಗಳನ್ನು ತಲುಪಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಕ್ರಮವಹಿಸಬೇಕು ಎಂದು ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷ ಎಸ್.ಅರುಣ್ ಕುಮಾರ್ ತಿಳಿಸಿದರು.



ಮೈಸೂರು ಜಿಪಂನ ಡಿ.ದೇವರಾಜ ಅರಸು ಸಭಾಂಗಣದಲ್ಲಿ ಶುಕ್ರವಾರ ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಸಮಿತಿ ಸಭೆ ನಡೆಯಿತು.

ಮೈಸೂರು ಜಿಪಂನ ಡಿ.ದೇವರಾಜ ಅರಸು ಸಭಾಂಗಣದಲ್ಲಿ ಶುಕ್ರವಾರ ನಡೆದ ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳು ಜಿಲ್ಲೆಯಲ್ಲಿ ನೂರಕ್ಕೆ ನೂರರಷ್ಟು ಸದ್ವಿನಿಯೋಗವಾಗಬೇಕು. ಈ ನಿಟ್ಟಿನಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಸಹಕಾರ ನೀಡಬೇಕು ಎಂದು ಹೇಳಿದರು.

ಹೊಸ ಬಿಪಿಎಲ್ ಕಾರ್ಡ್‌ಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಪೋರ್ಟಲ್ ಓಪನ್ ಆದಾಗ ಪತ್ರಿಕಾ ಪ್ರಕಟಣೆ ನೀಡಿ, ಸಾರ್ವಜನಿಕರಿಗೆ ಮಾಹಿತಿ ದೊರೆಯುವಂತೆ ಮಾಡಬೇಕು. ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಬಿಪಿಎಲ್ ಕಾರ್ಡ್ ಅತ್ಯವಶ್ಯಕವಾಗಿದೆ. ಬಿಪಿಎಲ್ ಕಾರ್ಡ್ ಇಲ್ಲದೆ ಇದ್ದರೆ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ರಿಯಾಯಿತಿ ದರದಲ್ಲಿ ಚಿಕಿತ್ಸೆ ಹಾಗೂ ಸ್ಕ್ಯಾನಿಂಗ್ ಸೌಲಭ್ಯಗಳು ದೊರೆಯುವುದಿಲ್ಲ. ಆದ್ದರಿಂದ ಅರ್ಹರಿಗೆ ಬಿಪಿಎಲ್ ಕಾರ್ಡ್‌ಗಳನ್ನು ನೀಡಲು ಕ್ರಮವಹಿಸುವಂತೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಜಂಟಿ ನಿರ್ದೇಶಕ ಮಂಟೇಸ್ವಾಮಿ ಅವರಿಗೆ ಸೂಚನೆ ನೀಡಿದರು.

ಶಕ್ತಿ ಯೋಜನೆ ಜಾರಿಯಾದಾಗಿನಿಂದ ಸರ್ಕಾರಿ ಸಾರಿಗೆಯಲ್ಲಿ ಸಂಚರಿಸುವವರ ಸಂಖ್ಯೆ ಹೆಚ್ಚಾಗಿದೆ. ಈ ನಿಟ್ಟಿನಲ್ಲಿ ಬಸ್ ನಿಲ್ದಾಣಗಳಲ್ಲಿ ಕುಡಿಯುವ ನೀರಿನ ಆರ್‌ಓ ಘಟಕಗಳನ್ನು ಅಳವಡಿಸಬೇಕು. ಆನ್‌ಲೈನ್‌ನಲ್ಲಿಯೂ ಹಣ ಪಾವತಿಸಿ ಟಿಕೆಟ್ ಪಡೆದುಕೊಳ್ಳುವ ವ್ಯವಸ್ಥೆ ಇರುವ ಬಗ್ಗೆ ಫಲಕಗಳನ್ನು ಅಳವಡಿಸಿ, ಪ್ರಯಾಣಿಕರಿಗೆ ಮಾಹಿತಿ ದೊರೆಯುವಂತೆ ಮಾಡಬೇಕು. ಸಾರಿಗೆ ನಿರ್ವಾಹಕರು ಪ್ರಯಾಣಿಕರೊಂದಿಗೆ ಸೌಜನ್ಯಯುತವಾಗಿ ವರ್ತಿಸಬೇಕು ಎಂದು ತಿಳಿಸಿದರು.

ಕೆಲವರಿಗೆ ಗೃಹಲಕ್ಷ್ಮಿ ಹಣ ದೊರೆಯುತ್ತಿಲ್ಲ ಎಂಬ ದೂರುಗಳಿವೆ ಎಂಬುದಕ್ಕೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ನಾಗರಾಜು ಪ್ರತಿಕ್ರಿಯಿಸಿ, ಆದಾಯ ತೆರಿಗೆ ಪಾವತಿದಾರರಿಗೆ ಗೃಹ ಲಕ್ಷ್ಮಿ ಹಣ ನೀಡಲು ಅವಕಾಶವಿಲ್ಲ. ಅದಾಗ್ಯೂ ಯಾರಾದರೂ ಅರ್ಹ ಫಲಾನುಭವಿಗಳಿದ್ದರೆ ಪರೀಕ್ಷಿಸಿ ಸೇರ್ಪಡೆ ಮಾಡಲಾಗುವುದು ಎಂದು ಸಭೆಗೆ ಮಾಹಿತಿ ನೀಡಿದರು.

ಗೃಹಲಕ್ಷ್ಮಿ ಹಣ ಸಾಲಕ್ಕೆ ಸಂಬಂಧಿಸಿಲ್ಲ: ಜಿಪಂ ಸಿಇಓ ಎಸ್.ಯುಕೇಶ್ ಕುಮಾರ್ ಮಾತನಾಡಿ, ಗೃಹ ಲಕ್ಷ್ಮಿ ಹಣವನ್ನು ಯಾವುದೇ ಬ್ಯಾಂಕ್‌ನವರು ಹಳೆ ಸಾಲಕ್ಕೆ ವಜಾ ಮಾಡಿಕೊಳ್ಳದೆ ಮಾನವೀಯತೆ ಆದಾರದ ಮೇಲೆ ಫಲಾನುಭವಿಗಳಿಗೆ ನೀಡಬೇಕು. ಗೃಹ ಲಕ್ಷ್ಮಿ ಯೋಜನೆಯ ಫಲಾನುಭವಿ ಮರಣ ಹೊಂದಿದರೆ ಅವರಿಗೆ ಹಣ ಪಾವತಿ ಆಗದಂತೆ ಅಧಿಕಾರಿಗಳು ನೋಡಿಕೊಳ್ಳಬೇಕು ಎಂದು ಸೂಚನೆ ನೀಡಿದರು.

ಮರಣ ಹೊಂದಿದವರ ಮಾಹಿತಿ ಪಡೆಯಿರಿ: ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಜಿಲ್ಲಾ ಉಪಾಧ್ಯಕ್ಷ ಶಿವಕುಮಾರ್ ಮಾತನಾಡಿ, ಮರಣ ಹೊಂದಿದವರಿಗೂ ಗೃಹಲಕ್ಷ್ಮಿ ಹಣ ಹೋಗುತ್ತಿದ್ದು, ಕೂಡಲೇ ಸ್ಥಗಿತಗೊಳಿಸಿ ಮರಣವಾದಾಗಿನಿಂದ ಇಲ್ಲಿಯವರೆಗೆ ಅವರಿಗೆ ಪಾವತಿ ಆಗಿರುವ ಯೋಜನೆಯ ಹಣವನ್ನು ಹಿಂಪಡೆಯಬೇಕು. ಮುಂದೆ ಯಾರೇ ಫಲಾನುಭವಿ ಮರಣ ಹೊಂದಿದರೆ ಆಟೋಮ್ಯಾಟಿಕ್ ಆಗಿ ಹಣ ಪಾವತಿ ಸ್ಥಗಿತವಾಗುವಂತೆ ತಂತ್ರಜ್ಞಾನ ಅಳವಡಿಸಿಕೊಳ್ಳಿ ಎಂದು ಸಲಹೆ ನೀಡಿದರು.

22.27 ಲಕ್ಷ ಅನ್ನಭಾಗ್ಯ ಫಲಾನುಭವಿಗಳು: ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರ ಇಲಾಖೆಯ ಜಂಟಿ ನಿರ್ದೇಶಕ ಮಂಟೇಸ್ವಾಮಿ ಮಾತನಾಡಿ, ಜಿಲ್ಲೆಯಲ್ಲಿ 6,80,301 (ಅಂತ್ಯೋದಯ ಅನ್ನ ಯೋಜನೆ–ಎಎವೈ ಮತ್ತು ಪಿಹೆಚ್‌ಹೆಚ್) ಪಡಿತರ ಚೀಟಿಗಳಿದ್ದು, 22,27,689 ಮಂದಿ ಅನ್ನಭಾಗ್ಯ ಯೋಜನೆ ಫಲಾನುಭವಿಗಳಾಗಿದ್ದಾರೆ. ಐ.ಟಿ ಪಾವತಿ (ಆದಾಯ ತೆರಿಗೆ) ಮಾಡಿರುವ ಹಾಗೂ 7.5 ಹೆಕ್ಟರ್ ಭೂಮಿ ಹೊಂದಿರುವ 23 ಸಾವಿರ ಕಾರ್ಡ್‌ಗಳನ್ನು ಎಪಿಎಲ್‌ಗೆ ಬದಲಾವಣೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಶೇ.60 ರಷ್ಟು ಶೂನ್ಯ ಬಿಲ್: ಚೆಸ್ಕಾಂ ಅಧೀಕ್ಷಕ ಇಂಜಿನಿಯರ್ ಸುನಿಲ್ ಮಾತನಾಡಿ, ಜಿಲ್ಲೆಯಲ್ಲಿ 9,68,228 ಫಲಾನುಭವಿಗಳು ಗೃಹಜ್ಯೋತಿ ಯೋಜನೆಯಡಿ ನೋಂದಣಿಯಾಗಿದ್ದು, ಶೇ.60 ರಷ್ಟು ಫಲಾನುಭವಿಗಳಿಗೆ ಶೂನ್ಯ ಬಿಲ್ ಬರುತ್ತದೆ. ಶೇ.40 ರಷ್ಟು ಫಲಾನುಭವಿಗಳು ಸರಾಸರಿಗಿಂತ ಹೆಚ್ಚಿನ ವಿದ್ಯುತ್ ಬಳಕೆ ಮಾಡುವುದರಿಂದ ಬಿಲ್ ಬರುತ್ತದೆ ಎಂದು ಮಾಹಿತಿ ನೀಡಿದರು.

ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಜಿಲ್ಲಾ ಉಪಾಧ್ಯಕ್ಷರಾದ ಹುಣಸೂರು ಬಸವಣ್ಣ, ಬಿ.ಎನ್.ಕರೀಗೌಡ, ತಾಲ್ಲೂಕು ಅಧ್ಯಕ್ಷ ನಿತಿನ್ ವೆಂಕಟೇಶ್, ಸದಸ್ಯರಾದ ಸಾ.ಮಾ.ಯೋಗೇಶ್, ಎಂ.ಎಸ್. ಮಹದೇವ್, ಲಲಿತಾ, ಅಬ್ದುಲ್ ಖಾದರ್ ಮತ್ತಿತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಕರ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಡಕಾಯಿಟ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕೆಡಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೋಟಿಗೊಬ್ಬ (ಕ)	4 ಪ್ರದರ್ಶನಗಳು
ರಾಜಕಮಲ್	
ಪೆಟ್ರಿಯೋಟ್ (ಮ)	4 ಪ್ರದರ್ಶನಗಳು
ಸಂಗಂ	
ಕರ (ತ)	4 ಪ್ರದರ್ಶನಗಳು
ಲಿಡೋ	
ಮಾಣಿಕ್ಯ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಪುನೀತ್ ನಿವಾಸ (ಕ)	4 ಪ್ರದರ್ಶನಗಳು

ವಿಜಯನಗರ ಪಬ್‌ನಲ್ಲಿ ಟೆಕ್ಕಿ ಹತ್ಯೆ ಪ್ರಕರಣ

ಪ್ರಮುಖ ಆರೋಪಿ ಕುಂಬಾರಕೊಪ್ಪಲು ರಾಕಿ ಸೇರಿದಂತೆ ಐವರ ಬಂಧನ

ಮೈಸೂರು, ಮೇ 8(ಎಂಕೆ)– ಮೈಸೂರಿನ ವಿಜಯನಗರ ಪಬ್‌ನಲ್ಲಿ ಟೆಕ್ಕಿ ನಿಶಾಂತ್ ಮೇಲೆ ತೀವ್ರ ಹಲ್ಲೆ ನಡೆಸಿ, ಮಹಡಿಯಿಂದ ಕೆಳಗೆ ತಳ್ಳಿ ಕೊಲೆಗೈಯ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಮುಖ ಆರೋಪಿ ಸೇರಿದಂತೆ ಐವರನ್ನು ವಿಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಆರೋಪಿಗಳು ಈಗ ನ್ಯಾಯಾಂಗ ಬಂಧನದಲ್ಲಿದ್ದಾರೆ.



ನಿಶಾಂತ್

ಈ ಕೊಲೆಯ ಪ್ರಮುಖ ಆರೋಪಿ ಕುಂಬಾರ ಕೊಪ್ಪಲು ನಿವಾಸಿ ರೌಡಿ ಶೀಟರ್ ರಾಕೇಶ್ ಅಲಿಯಾಸ್ ರಾಕಿ, ಮೈಸೂರು ಹೆಬ್ಬಾಳಿನ ರೌಡಿ ಶೀಟರ್ ಮನೋಜ್, ಕುಂಬಾರಕೊಪ್ಪಲಿನ ವಿನೋದ್ ಹಾಗೂ ಅಭಿಷೇಕ್ ಸರ್ಕಲ್‌ನ ಪ್ರಶಾಂತ್ ಮತ್ತು ನಿತಿನ್ ಜೈಲು ಸೇರಿದ್ದಾರೆ.

ಹಳೆ ದ್ವೇಷ: ವಿಜಯನಗರದ 2ನೇ ಹಂತದಲ್ಲಿನ ಪಬ್‌ನಲ್ಲಿ ಏ.19ರ ರಾತ್ರಿ ಮದ್ಯ ಸೇವಿಸುತ್ತಿದ್ದ ಸಂದರ್ಭದಲ್ಲಿ ಜೋರಾಗಿ ಮಾತನಾಡಬೇಡಿ ಎಂದಿದ್ದಕ್ಕೆ ಕೆರಳಿದ ಆರೋಪಿಗಳು, ನಿಶಾಂತ್ ಮೇಲೆ ತೀವ್ರ ಹಲ್ಲೆ ನಡೆಸಿ, ಪಬ್‌ನ 2ನೇ ಮಹಡಿಯಿಂದ ತಳ್ಳಿ ಕೊಂದಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಸಿಸಿ ಕ್ಯಾಮರಾ ಪರಿಶೀಲನೆ ಸೇರಿದಂತೆ ತೀವ್ರ ತನಿಖೆ ನಡೆಸಿದಾಗ ಹಳೆ ದ್ವೇಷದಿಂದ ಕೊಲೆ ಮಾಡಿರುವ ಶಂಕೆ ಬಲವಾಗಿದೆ ಎಂದು ವಿಜಯನಗರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಸುರೇಶ್ ಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಪ್ರಕರಣ ಸಂಬಂಧ ಮೊದಲು ಆರೋಪಿಗಳಾದ ಮನೋಜ್, ವಿನೋದ್, ಪ್ರಶಾಂತ್ ಅವರನ್ನು ಬಂಧಿಸಲಾಗಿತ್ತು. ನಂತರ ಶೋಧ ಕಾರ್ಯ ಮುಂದುವರೆಸಿ ಪ್ರಕರಣದ ಪ್ರಮುಖ ಆರೋಪಿ ರಾಕೇಶ್ ಅಲಿಯಾಸ್ ರಾಕಿ ಮತ್ತು ನಿತಿನ್ ಎಂಬುವರನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ, ತನಿಖೆ ಮುಂದುವರೆಸಲಾಗಿದೆ ಎಂದು ಮಾಹಿತಿ ನೀಡಿದರು.

ಐಪಿಎಲ್ ಬೆಟ್ಟಿಂಗ್; ಐವರ ಬಂಧನ

ಮರ್ಸಿಡಿಸ್ ಬೆಂಜ್ ಕಾರು, ಮೊಬೈಲ್, ಲ್ಯಾಪ್‌ಟಾಪ್, ನಗದು ವಶಕ್ಕೆ

ಮೈಸೂರು, ಮೇ 8(ಎಂಕೆ)– ಮೈಸೂರು ನಗರದ ಪ್ರತ್ಯೇಕ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಐಪಿಎಲ್ ಬೆಟ್ಟಿಂಗ್ ಆಡುತ್ತಿದ್ದ ಐವರನ್ನು ಬಂಧಿಸಿರುವ ಪೊಲೀಸರು, ಬಂಧಿತರಿಂದ 1 ಮರ್ಸಿಡಿಸ್ ಬೆಂಜ್ ಕಾರು, 1 ಲ್ಯಾಪ್‌ಟಾಪ್, 6 ಮೊಬೈಲ್ ಹಾಗೂ 15,900 ರೂ.ನಗದನ್ನು ವಶಕ್ಕೆ ಪಡೆದಿದ್ದಾರೆ.

ಮಂಡಿ ಮೊಹಲ್ಲಾದ ಸಂಜಯ್ ಕುಮಾರ್(33), ಇಲವಾಲದ ಪಿ.ಪಿ. ವಿನೋದ್(32), ಪಡುವಾರಹಳ್ಳಿಯ ಲಿಖಿತ್ ಕುಮಾರ್(27), ಆರ್.ಎಸ್ ನಾಯ್ಡು ನಗರದ ಎಂ.ಪ್ರದೀಪ್(39), ಹೆಬ್ಬಾಳಿನ ಹೆಚ್.ಎಸ್.ಪ್ರಫುಲ್ ಆರ್ಯ(21) ಬಂಧಿತರು.

ಮೇ 7 ರಂದು ಟೌನ್‌ಹಾಲ್ ಹಿಂಭಾಗದಲ್ಲಿರುವ ಪಾರ್ಕಿಂಗ್ ಸ್ಥಳದಲ್ಲಿ ಮರ್ಸಿಡಿಸ್ ಬೆಂಜ್ ಕಾರಿನಲ್ಲಿ ಕುಳಿತಿದ್ದ ಮೂವರು, ಅಕ್ರಮವಾಗಿ ಹಣ ಸಂಪಾದನೆ ಮಾಡುವ ಉದ್ದೇಶದಿಂದ ಕಾನೂನು ಬಾಹಿರವಾಗಿ ಹಣವನ್ನು ಪಣವಾಗಿರಿಸಿಕೊಂಡು ಆರ್‌ಸಿಬಿ ಮತ್ತು ಲಕ್ನೋ ಸೂಪರ್ ಜೆಂಟ್ಸ್ ನಡುವಿನ ಪಂದ್ಯಕ್ಕೆ ಬೆಟ್ಟಿಂಗ್ ಆಡುತ್ತಿದ್ದಾಗ ದೇವರಾಜ ಠಾಣೆ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ.

ಕೂಡಲೇ ಮೂವರನ್ನು ಬಂಧಿಸಿರುವ ಪೊಲೀಸರು, 1 ಮರ್ಸಿಡಿಸ್ ಬೆಂಜ್ ಕಾರು, 15,900 ರೂ.ನಗದು ಮತ್ತು 3 ಮೊಬೈಲ್ ಗಳನ್ನು ವಶಕ್ಕೆ ಪಡೆದಿದ್ದಾರೆ. ಈ ಸಂಬಂಧ ದೇವರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಕೈಗೊಳ್ಳಲಾಗಿದೆ.


ಹಾಗೆಯೇ ಹೆಬ್ಬಾಳಿನ ಎಂಆರ್‌ಎಸ್ ಹೋಟೆಲ್‌ನ 3ನೇ ಮಹಡಿಯ ರೂಮ್ ನಲ್ಲಿ ಐಪಿಎಲ್ ಬೆಟ್ಟಿಂಗ್ ಆಡಲಾಗುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಹೆಬ್ಬಾಳ ಠಾಣೆ ಪೊಲೀಸರು, ಇಬ್ಬರನ್ನು ಬಂಧಿಸಿ ಕ್ರಿಕೆಟ್ ಬೆಟ್ಟಿಂಗ್‌ಗೆ ಬಳಕೆ ಮಾಡುತ್ತಿದ್ದ 1 ಲ್ಯಾಪ್ ಟಾಪ್ ಮತ್ತು 3 ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ಹೆಬ್ಬಾಳ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಕೈಗೊಳ್ಳಲಾಗಿದೆ.

ಪರಂಪರೆ, ಸಂಸ್ಕೃತಿ ಮೌಲ್ಯ ಅರಿಯುವುದು ಅತ್ಯವಶ್ಯ

ಚರಕದ ಕೈಮಗ್ಗ ಉತ್ಪನ್ನಗಳ ಪ್ರದರ್ಶನ, ಮಾರಾಟಕ್ಕೆ ಚಾಲನೆ ನೀಡಿ ಸುತ್ತೂರು ಶ್ರೀಗಳ ಅಭಿಮತ

ಮೈಸೂರು, ಮೇ 8– ಭಾರತೀಯ ಸಂಸ್ಕೃತಿಯಲ್ಲಿರುವ ಆಚರಣೆಗಳಲ್ಲಿ ಮೌಢ್ಯ ಅಥವಾ ವೈಚಾರಿಕ ನೆಲೆಗಟ್ಟನ್ನು ಅವಲೋಕಿಸಿ ಅನುಸರಿಸಿದರೆ ಆರೋಗ್ಯ ಮತ್ತು ಸಂಸ್ಕೃತಿಯನ್ನು ಕಾಪಾಡಿಕೊಳ್ಳಲು ಸಾಧ್ಯವಿದೆ ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಮೈಸೂರಿನ ವಿಜಯನಗರದ ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್ (ಜೆಸಿಎಸಿ) ಕೇಂದ್ರದಲ್ಲಿ ಸಾಗರ ತಾಲೂಕಿನ ಹೆಗ್ಗೋಡು–ಭೀಮನಕೋಣೆಯ ಚರಕ ಮಹಿಳಾ ವಿವಿಧೋದ್ದೇಶ ಕೈಗಾರಿಕಾ ಸಹಕಾರ ಸಂಘದ ವತಿಯಿಂದ ಹಮ್ಮಿಕೊಂಡಿರುವ ಮೂರು ದಿನಗಳ ನೈಸರ್ಗಿಕ ಬಣ್ಣದ ಅಪ್ಪಟ ಹತ್ತಿ ಕೈಮಗ್ಗ ಉತ್ಪನ್ನಗಳ ಪ್ರದರ್ಶನ, ಮಾರಾಟ ಮತ್ತು ಕೊಡು–ಕೊಳ್ಳುವವರ ಸಮಾವೇಶಕ್ಕೆ ಶುಕ್ರವಾರ ಚಾಲನೆ ನೀಡಿ ಅವರು ಮಾತನಾಡಿದರು.



ಮೈಸೂರಿನ ವಿಜಯನಗರ ಎರಡನೇ ಹಂತದ ಜೆಸಿಎಸಿ ಕೇಂದ್ರದಲ್ಲಿ ಹಮ್ಮಿಕೊಂಡಿರುವ ನೈಸರ್ಗಿಕ ಬಣ್ಣದ ಅಪ್ಪಟ ಹತ್ತಿ ಕೈಮಗ್ಗ ಉತ್ಪನ್ನಗಳ ಪ್ರದರ್ಶನ, ಮಾರಾಟ ಮತ್ತು ಕೊಡು–ಕೊಳ್ಳುವವರ ಸಮಾವೇಶಕ್ಕೆ ಸುತ್ತೂರು ಶ್ರೀಗಳು ಚಾಲನೆ ನೀಡಿ, ಮಾತನಾಡಿದರು.

ಈ ಆಧುನಿಕ ಯುಗದಲ್ಲಿ ಮನುಷ್ಯನಿಗೆ ಆರೋಗ್ಯ ಬಹಳ ಮುಖ್ಯ. ಜೊತೆಗೆ ಪರಂಪರೆಯ, ಸಂಸ್ಕೃತಿಯ ಮೌಲ್ಯಗಳನ್ನು ಹೊಂದುವುದೂ ಅಗತ್ಯ. ಈ ನಿಟ್ಟಿನಲ್ಲಿ ಹೆಗ್ಗೋಡಿನ ಚರಕ ಸಂಸ್ಥೆ ಹಲವು ದಶಕಗಳಿಂದ ಕೆಲಸ ಮಾಡುತ್ತಾ ಬಂದಿದ್ದು, ಇದಕ್ಕೆ ಸಮಾಜ ಹಾಗೂ ಸರ್ಕಾರದ ಪ್ರೋತ್ಸಾಹ ಯಥೇಚ್ಛವಾಗಿ ಸಿಗಬೇಕು. ಬದನವಾಳದಲ್ಲಿ ಗುಡಿ ಕೈಗಾರಿಕೆ ಸಂಸ್ಕೃತಿ ಉಳಿಸುವ ನಿಟ್ಟಿನಲ್ಲಿ ಪ್ರಸನ್ನ ಅವರ ನೇತೃತ್ವದಲ್ಲಿ ಕೈಗೊಂಡ ಸತ್ಯಾಗ್ರಹ ಕಾರಣದಿಂದ ಸರ್ಕಾರ ಈಚೆಗೆ ಅನುದಾನ ಬಿಡುಗಡೆ ಮಾಡಿದೆ. ಅದೇ ಉದ್ದೇಶಕ್ಕೆ ಹಣ ವೆಚ್ಚವಾಗಬೇಕು ಎಂದರು.

ಮೈಸೂರು ಬುಕ್ ಕ್ಲಬ್ಸ್ ಚಾರಿಟೆಬಲ್ ಟ್ರಸ್ಟ್‌ನ ಸಂಸ್ಥಾಪಕಿ ಶುಭಾ ಸಂಜಯ್ ಅರಸ್ ಮಾತನಾಡಿ, ಚರಕ ಎಂದಾಕ್ಷಣ ಗಾಂಧೀಜಿ ನೆನಪಾಗುತ್ತಾರೆ. ಸ್ವಾತಂತ್ರ್ಯ ಚಳುವಳಿ ಕಣ್ಮುಂದೆ ಬರುತ್ತದೆ. ಇದೇ ಚರಕ ಇವತ್ತು ಸುಸ್ಥಿರತೆಯ ಸಂಕೇತವಾಗಿ, ಕೌಶಲ್ಯದ ಪ್ರತೀಕವಾಗಿ ನೂರಾರು ಮಹಿಳೆಯರ ಬದುಕನ್ನು ರೂಪಿಸುತ್ತಿರುವುದು ಹೆಮ್ಮೆ ತಂದಿದೆ ಎಂದರು.

ಚರಕ ಸಂಸ್ಥಾಪಕರಾದ ರಂಗಕರ್ಮಿ ಪ್ರಸನ್ನ ಮಾತನಾಡಿ, ಚರಕ ಹಲವು ಬಗೆಯ ಆವಿಷ್ಕಾರದಲ್ಲಿ ತೊಡಗಿದ್ದು, ಆರೋಗ್ಯಕ್ಕೆ ಪೂರಕವಾದ ಅರಿಶಿಣ ಮತ್ತು ಬೇವಿನ ಬಣ್ಣದಲ್ಲಿ ಮಕ್ಕಳ ಬಟ್ಟೆ, ಮಠಾಧೀಶರು ತೊಡುವ ಬಟ್ಟೆಗಳನ್ನು ಅನಾವರಣಗೊಳಿಸಲಾಗಿದೆ ಎಂದು ಮಾಹಿತಿ ನೀಡಿದರು.

ಇದೇ ವೇಳೆ ಕೈಮಗ್ಗ ಮತ್ತು ಜವಳಿ ಇಲಾಖೆಯ ಬೆಂಗಳೂರು ದಕ್ಷಿಣ ವಲಯದ ಜಂಟಿ ನಿರ್ದೇಶಕ ಬಿ.ಆರ್.ಯೋಗೇಶ್, ಚರಕಕ್ಕೆ ಸರ್ಕಾರದ ರಿಬೇಟ್ ಸೌಲಭ್ಯ ಕಲ್ಪಿಸುವ ದೃಷ್ಟಿಯಿಂದ ಸರ್ಕಾರಕ್ಕೆ ಶೀಘ್ರ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಭರವಸೆ ನೀಡಿದರು. ಇಲಾಖೆಯ ಉಪನಿರ್ದೇಶಕ ಬಿ.ಎಸ್.ಸೋಮಶೇಖರ್, ಚರಕದ ಅಧ್ಯಕ್ಷೆ ಮಹಾಲಕ್ಷ್ಮೀ, ಸಿಇಓ ಟೆರೆನ್ಸ್ ಪೀಟರ್, ಮಾರುಕಟ್ಟೆ ವಿಭಾಗದ ವ್ಯವಸ್ಥಾಪಕ ಕೃಷ್ಣ, ಮಧುರಾ, ವಿನ್ಯಾಸ ವಿಭಾಗದ ಮುಖ್ಯಸ್ಥೆ ಪದ್ಮಶ್ರೀ ಮತ್ತಿತರರಿದ್ದರು.

ಸಿಐಎಸ್‌ಎಫ್ ಸಿಬ್ಬಂದಿ ನಾಪತ್ತೆ



ಮೈಸೂರು, ಮೇ 8– ಮೈಸೂರಿನ ಮೇಟಗಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿರುವ ಸಿಐಎಸ್‌ಎಫ್ ಘಟಕ ಬಿಆರ್‌ಬಿಎನ್‌ಎಂಪಿಎಲ್ ಬ್ಯಾಚುಲರ್ ವಸತಿಗೃಹದಿಂದ ಎಎಸ್‌ಐ ಕೃಷ್ಣಪ್ಪ(59) ಅವರು ಮೇ 5ರಿಂದ ಕಾಣೆಯಾಗಿದ್ದಾರೆ. ಅಂದು ಸಂಜೆ 7 ಗಂಟೆಗೆ ಗೇಟ್ ನಂ.1ರಿಂದ ಹೊರ ಹೋದವರು ವಾಪಸ್ ಬಂದಿಲ್ಲ. ಸಿಐಎಸ್‌ಎಫ್ ಸಿಬ್ಬಂದಿ ಎಲ್ಲೆಡೆ ಹುಡುಕಾಟ ನಡೆಸಿದರೂ ಪತ್ತೆಯಾಗಿಲ್ಲ. ಕೃಷ್ಣಪ್ಪ ಅವರು ಪ್ರಸಕ್ತ ತಿಂಗಳ 31ರಂದು ಸೇವೆಯಿಂದ ನಿವೃತ್ತರಾಗಲಿದ್ದಾರೆ. ಅವರು ಸುಮಾರು 5.8 ಅಡಿ ಎತ್ತರವಿದ್ದು, ಕಾಣೆಯಾದಾಗ ಕಪ್ಪು ಬಣ್ಣದ ಪ್ಯಾಂಟ್ ಹಾಗೂ ಗುಲಾಬಿ ಬಣ್ಣದ ಟಿ–ಶರ್ಟ್ ಧರಿಸಿದ್ದರು ಎಂದು ದೂರಿನಲ್ಲಿ ತಿಳಿಸಲಾಗಿದೆ. ಇವರ ಬಗ್ಗೆ ಮಾಹಿತಿ ತಿಳಿದವರು ಮೇಟಗಳ್ಳಿ ಠಾಣೆ(0821–2418339) ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.

ಕೇರಳಂ ಸಿಎಂ ಆಯ್ಕೆ: ವೇಣುಗೋಪಾಲ್‌ಗೆ ಬಹುಪಾಲು ಶಾಸಕರ ಬೆಂಬಲ



ನವದೆಹಲಿ: ಕೇರಳಂ ಮುಖ್ಯಮಂತ್ರಿ ಆಯ್ಕೆಗೆ ಸಂಬಂಧಿಸಿದಂತೆ ಶಾಸಕರ ಅಭಿಪ್ರಾಯ ಸಂಗ್ರಹಿಸಿದ್ದ ಕಾಂಗ್ರೆಸ್ ವೀಕ್ಷಕರು ತಮ್ಮ ವರದಿಯನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಶುಕ್ರವಾರ ಸಲ್ಲಿಸಿ ದ್ದಾರೆ. ಮುಖ್ಯಮಂತ್ರಿ ಅಭ್ಯರ್ಥಿಯ ಆಯ್ಕೆ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳುವಂತೆ ಪಕ್ಷದ ಹೈಕಮಾಂಡ್‌ಗೆ ಮನವಿ ಮಾಡಿದ್ದಾರೆ.

ಎಐಸಿಸಿ ವೀಕ್ಷಕರಾದ ಮುಕುಲ್ ವಾಸ್ನಿಕ್ ಮತ್ತು ಅಜಯ್ ಮಾಕನ್ ಅವರು ಕಾಂಗ್ರೆಸ್ ಶಾಸಕರೊಂದಿಗೆ ಗುರುವಾರ ಸಭೆ ನಡೆಸಿ, ಅಭಿಪ್ರಾಯ ಪಡೆದುಕೊಂಡಿದ್ದರು. ನೂತನ ಶಾಸಕರು ವ್ಯಕ್ತಪಡಿಸಿರುವ ಅಭಿಪ್ರಾಯದ ಕುರಿತು ಖರ್ಗೆ ಅವರೊಂದಿಗೆ ಚರ್ಚಿಸಿದ್ದಾರೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರನ್ನು ಮುಖ್ಯಮಂತ್ರಿಯನ್ನಾಗಿ ಆಯ್ಕೆ ಮಾಡುವುದಕ್ಕೆ ಪಕ್ಷದ ಬಹುಪಾಲು ಶಾಸಕರು ಬೆಂಬಲ ಸೂಚಿಸಿದ್ದಾರೆ. ಆದರೆ, ಈ ಹಿಂದೆ ಕೇರಳಂ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದ ವಿ.ಡಿ. ಸತೀಶನ್ ಅವರನ್ನು ಜನರು ಬೆಂಬಲಿಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕೆ.ಸಿ. ವೇಣುಗೋಪಾಲ್, ಸತೀಶನ್ ಹಾಗೂ ರಮೇಶ್ ಚೆನ್ನಿತ್ತಲ ಅವರು ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಗಳು. ಅಂತಿಮ ನಿರ್ಧಾರ ತೆಗೆದುಕೊಳ್ಳುವ ಮೊದಲು ಖರ್ಗೆ ಅವರು ಈ ಮೂವರು ಆಕಾಂಕ್ಷಿಗಳನ್ನು ಮಾತುಕತೆಗಾಗಿ ಕರೆದಿದ್ದಾರೆ.

ಮೇ 12ಕ್ಕೆ ಕೆ–ಸೆಟ್, ಯುಜಿಸಿ ನೆಟ್ ಪರೀಕ್ಷಾ ತರಬೇತಿ ಶಿಬಿರ ಉದ್ಘಾಟನೆ

ಮೈಸೂರು, ಮೇ 8– ಮೈಸೂರಿನಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (ಕರಾಮುವಿ)ದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದಲ್ಲಿ ಕೆ–ಸೆಟ್ ಮತ್ತು ಯುಜಿಸಿ–ನೆಟ್ ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳಿಗಾಗಿ ಆಯೋಜಿಸಿರುವ 45 ದಿನಗಳ ತರಬೇತಿ ಶಿಬಿರಕ್ಕೆ ಮೇ 12ರಂದು ವಿದ್ಯುಕ್ತ ಚಾಲನೆ ದೊರಕಲಿದೆ.



ಪ್ರೊ.ಬಿ.ಕೆ.ರವಿ



ಆರ್.ಸತ್ಯಶ್ರೀ

ಕರಾಮುವಿಯ ಕಾವೇರಿ ಸಭಾಂಗಣದಲ್ಲಿ ಅಂದು ಬೆಳಗ್ಗೆ 11ಕ್ಕೆ ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಬಿ.ಕೆ.ರವಿ ಅವರು ತರಬೇತಿ ಶಿಬಿರವನ್ನು ಉದ್ಘಾಟಿಸಲಿದ್ದು, ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯ ಜಂಟಿ ನಿರ್ದೇಶಕರಾದ ಹಿರಿಯ ಕೆಎಎಸ್ ಅಧಿಕಾರಿ ಆರ್.ಸತ್ಯಶ್ರೀ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಕರಾಮುವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅಧ್ಯಕ್ಷತೆ ವಹಿಸಲಿದ್ದು, ಕುಲಸಚಿವ ಪ್ರೊ.ಎಸ್.ಕೆ.ನವೀನ್‌ಕುಮಾರ್, ಪರೀಕ್ಷಾಂಗ ಕುಲಸಚಿವ ಡಾ.ಸಿ.ಎಸ್.ಆನಂದಕುಮಾರ್, ಶೈಕ್ಷಣಿಕ ಡೀನ್ ಪ್ರೊ.ಎಂ.ರಾಮನಾಥಂ ನಾಯ್ಡು ಅಧ್ಯಯನ ಕೇಂದ್ರದ ಡೀನ್ ಡಾ.ಎನ್.ಆರ್.ಚಂದ್ರೇಗೌಡ, ಹಣಕಾಸು ಅಧಿಕಾರಿ ಡಾ.ಎಸ್.ನಿರಂಜನ್ ರಾಜ್ ಉಪಸ್ಥಿತರಿರಲಿದ್ದಾರೆ. ಆಸಕ್ತರು ಈಗಲೂ ತರಬೇತಿಗೆ ಪ್ರವೇಶಾತಿ ಪಡೆಯಬಹುದು ಎಂದು ಕೇಂದ್ರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ದೂ.ಸಂ.0821–2515944 ಸಂಪರ್ಕಿಸಬಹುದು.

ಕಂಡಕಂಡಲ್ಲಿ ಕಸ ಹಾಕಿದಲ್ಲಿ ಸಾವಿರ ರೂ. ದಂಡ ಕಕ್ಕಿಸುತ್ತೇವೆ!

ಬೇಜವಾಬ್ದಾರಿ ಜನರಿಗೆ ಪಾಲಿಕೆ ಎಚ್ಚರಿಕೆ



ಸಾರ್ವಜನಿಕ ಸ್ಥಳಗಳಲ್ಲಿ ಕಸ ಹಾಕುವುದನ್ನು ತಡೆಗಟ್ಟಲು ಮೈಸೂರು ಮಹಾ ನಗರ ಪಾಲಿಕೆ ವತಿಯಿಂದ ಸಾವಿರ ರೂ. ದಂಡ ವಿಧಿಸುವ ಎಚ್ಚರಿಕೆಯ ಪೋಸ್ಟರ್

ಮೈಸೂರು, ಮೇ 8(ಎಸ್‌ಪಿಎನ್)– ಸಾರ್ವಜನಿಕ ಸ್ಥಳಗಳಲ್ಲಿ ಕಸ ಹಾಕುವುದನ್ನು ತಡೆಗಟ್ಟಲು ಮೈಸೂರು ಮಹಾ ನಗರ ಪಾಲಿಕೆ ವತಿಯಿಂದ ಸಾವಿರ ರೂ. ದಂಡ ವಿಧಿಸುವ ಎಚ್ಚರಿಕೆಯ ಪೋಸ್ಟರ್‌ಗಳನ್ನು ಹಾಕಿ, ಜಾಗೃತಿ ಮೂಡಿಸುತ್ತಿದ್ದರೂ ಸ್ವಚ್ಛತೆ ವಿಚಾರವಾಗಿ ಸರಿಯಾದ ಸ್ಪಂದನೆ ನಾಗರಿಕರಿಂದ ಸಿಗುತ್ತಿಲ್ಲ ಎಂದು ಮೈಸೂರು ನಗರ ಪಾಲಿಕೆ ಅಧಿಕಾರಿಗಳು ಬೇಸರ ವ್ಯಕ್ತಪಡಿಸುತ್ತಿದ್ದಾರೆ.

ಸಾರ್ವಜನಿಕ ಸ್ಥಳದಲ್ಲಿ ಕಸ ಸುರಿಯದಂತೆ ಅನೇಕ ಬಾರಿ ನಾಗರಿಕರಲ್ಲಿ ಮನವಿ ಮಾಡಿದ್ದರೂ ಸಾರ್ವಜನಿಕರು, ಎಲ್ಲೆಂದರಲ್ಲಿ ಕಸ ಸುರಿದು ನಗರ ಸೌಂದರ್ಯಕ್ಕೆ ಧಕ್ಕೆ ತರುತ್ತಿರುವ ಹಿನ್ನಲೆಯಲ್ಲಿ ಈ ಪ್ರವೃತ್ತಿಯನ್ನು ತಡೆಗಟ್ಟಲು ಮೈಸೂರು ನಗರ ಪಾಲಿಕೆ, ಅತೀ ಹೆಚ್ಚು ಕಸ ಸುರಿಯವ ಜಾಗಗಳನ್ನು ಗುರುತಿಸಿ, ಈ ಸ್ಥಳದಲ್ಲಿ ಕಸ ಹಾಕುವವರನ್ನು ಪತ್ತೆ ಹಚ್ಚಿ ಸಾವಿರ ರೂ. ದಂಡ ವಿಧಿಸಲಾಗುವುದು ಎಂಬ ಪೋಸ್ಟರ್ ಹಾಕಿ, ಅರಿವು ಮೂಡಿಸಲಾಗಿದೆ. ಆದರೆ, ಏನು ಪ್ರಯೋಜನವಾಗುತ್ತಿಲ್ಲ.

ಈಗಾಗಲೇ ಕುವೆಂಪುನಗರ, ಸರಸ್ವತಿಪುರಂ, ರಾಮಕೃಷ್ಣನಗರ, ವಿದ್ಯಾರಣ್ಯಂಪುರಂ, ಶಾರದಾದೇವಿ ನಗರ, ನಜರ್‌ಬಾದ್ ಸೇರಿದಂತೆ ನಗರ ಬಹುತೇಕ ಈ ರೀತಿ ಪೋಸ್ಟರ್‌ಗಳನ್ನು ಕಸ ಬಿಸಾಡುವ ಸ್ಥಳಗಳಲ್ಲಿ ಅಂಟಿಸಿ, ಸಾರ್ವಜನಿಕರಲ್ಲಿ ಕಸ ಹಾಕದಂತೆ ಅರಿವು ಮೂಡಿಸಲಾಗುತ್ತಿದೆ. ಇದು ಕೆಲವೆಡೆ ಸ್ವಲ್ಪ ಮಟ್ಟಿಗೆ ಪ್ರಯೋಜನಕಾರಿಯಾಗುತ್ತಿದೆ ಎಂದು ಎಇಇ ಮೃತ್ಯುಂಜಯ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಕಸವನ್ನು ಎಲ್ಲೆಂದರಲ್ಲಿ ಸುರಿದು ನಗರ ಸೌಂದರ್ಯ ಹಾಳುಮಾಡುವ ಬದಲು ನಿಮ್ಮ ಮನೆ ಮುಂದೆ ಇಲ್ಲವೇ ಅಂಗಡಿ ಮುಂದೆ ದಿನನಿತ್ಯ ಬರುವ ಕಸ ಸಂಗ್ರಹಿಸುವವರಿಗೆ ನೀಡಿ, 'ಸ್ವಚ್ಛ ಮೈಸೂರು' ಘೋಷಣೆಗೆ ಬೆಂಬಲ ನೀಡುವಂತೆ ಮನವಿ ಮಾಡಿದರು.

ಕಳೆದ ಐದು ತಿಂಗಳಿಂದ ಸಾರ್ವಜನಿಕವಾಗಿ ಎಲ್ಲೆಂದರಲ್ಲಿ ಕಸ ಹಾಕುತ್ತಿದ್ದ ಹಲವು ನಾಗರಿಕರಿಗೆ ದಂಡ ವಿಧಿಸಲಾಗಿದೆ. ಜ.1ರಿಂದ ಏಪ್ರಿಲ್ ತಿಂಗಳ ಅಂತ್ಯದವರೆಗೆ ಅಂದಾಜು 5.63 ಲಕ್ಷ ರೂ.ಗಳನ್ನು ಸಾರ್ವಜನಿಕರಿಂದ ದಂಡ ವಸೂಲಾಗಿದೆ. ಆದರೂ ಸಾರ್ವಜನಿಕರು ಕಂಡಕಂಡಲ್ಲಿ ಬೇಕಾಬಿಟ್ಟಿ ಕಸ ವಿಲೇ ಮಾಡುವವರ ಸಂಖ್ಯೆ ಕಡಿಮೆಯಾಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಅತ್ತೆ ಬಳಿ ಹಣ ಪಡೆದ ಸೊಸೆ ನಾಪತ್ತೆ!

ಮೈಸೂರು, ಮೇ 8(ಎಸ್‌ಪಿಎನ್)– ಗಂಡನ ಚಿಕಿತ್ಸೆಗಾಗಿ ಅತ್ತೆಯ ಬಳಿ 20 ಸಾವಿರ ಹಣ ಪಡೆದ ಸೊಸೆ ಕೊನೆಗೆ ನಾಪತ್ತೆಯಾಗಿರುವ ಘಟನೆ ವಿವಿ ಪುರಂ ಪೊಲೀಸ್ ಠಾಣೆಯಲ್ಲಿ ವ್ಯಾಪ್ತಿಯ ಬೃಂದಾವನ ಬಡಾವಣೆಯಲ್ಲಿ ನಡೆದಿದೆ. ಅಜಯ್‌ಕುಮಾರ್ ಅವರ ಪತ್ನಿ ಎಚ್.ಆರ್. ನಂದಿನಿ (28) ನಾಪತ್ತೆಯಾದ ಗೃಹಿಣಿ. ಇವರು ಕೊಡಗು ಜಿಲ್ಲೆ ವಿರಾಜಪೇಟೆ ಟೌನ್ ನಿವಾಸಿ ರವಿ ಅವರ ಪುತ್ರಿ, 2016ರಲ್ಲಿ ಅಜಯ್‌ಕುಮಾರ್ ಅವರೊಂದಿಗೆ ಮದುವೆಯಾಗಿತ್ತು.



ನಂದಿನಿ

ಈಕೆ ಏ.16ರಂದು ತನ್ನ ಸ್ಟ್ರೋಕ್ ಪೀಡಿತ ಗಂಡ ಅಜಯ್ ಕುಮಾರ್‌ರನ್ನು ಮೈಸೂರು ಬೃಂದಾವನ ಬಡಾವಣೆಯಲ್ಲಿರುವ ಸರ್ಕಾರಿ ಆಯುರ್ವೇದಿಕ್ ಆಸ್ಪತ್ರೆಯಲ್ಲಿ ದಾಖಲು ಮಾಡಿ, ತನ್ನ ಅತ್ತೆ ಲಕ್ಷ್ಮಮ್ಮರ ಬಳಿ ಆಸ್ಪತ್ರೆ ವೆಚ್ಚಕ್ಕಾಗಿ 20 ಸಾವಿರ ರೂ.ಗಳನ್ನು ಪಡೆದು, ಹೊರಗೆ ಹೋಗಿ ಬರುವುದಾಗಿ ಟಿವಿಎಸ್ ಜುಪಿಟರ್ ಸ್ಕೂಟರ್(ಕೆಎ.55 ಇಡಿ 6334)ನಲ್ಲಿ ಆಸ್ಪತ್ರೆಯಿಂದ ಹೊರ ಹೋದವರು ಮತ್ತೆ ಬಂದಿಲ್ಲ.

ಮಾಹಿತಿ ಇದ್ದಲ್ಲಿ ಪೊಲೀಸ್ ಕಂಟ್ರೋಲ್ ರೂಂ. ದೂ: 0821–2418314, ಮೊ: 94808–02238ಗೆ ಕರೆ ಮಾಡುವುದು

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು
ಜೆ.ಎಲ್.ಬಿ.ರಸ್ತೆ, ಮೈಸೂರು

ಸಂಖ್ಯೆ: ಮೈಅಪ್ರಾ/ವಿ.ತ–06/2026–27 ದಿನಾಂಕ:07.05.2026

ಪ್ರಕಟಣೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯ ವತಿಯಿಂದ ಶ್ರೀ.ವೆಂಕಟಪ್ಪ ರವರಿಗೆ ದಿನಾಂಕ:19.11.1973 ರಂದು ಟಿ.ಎನ್.ಪುರ ರಸ್ತೆ, 2ನೇ ಹಂತ ಬಡಾವಣೆಯ ನಿವೇಶನ ಸಂಖ್ಯೆ:193, ಅಳತೆ: 45x60ಅಡಿ ಅಳತೆಯ ನಿವೇಶನವು ಮಂಜೂರಾಗಿರುತ್ತದೆ. ನಂತರ ಅಂದಿನ ಅಧ್ಯಕ್ಷರ ಆದೇಶದ ಮೇರೆಗೆ ಸದರಿ ನಿವೇಶನವನ್ನು ಶ್ರೀ.ದೊಡ್ಡೇಗೌಡ ಬಿನ್ ಲೇಟ್‌ಕೆಂಡೇಗೌಡ ರವರ ಹೆಸರಿಗೆ ದಿ:28.03.1984ರಂದು ಉತ್ತರ ಪತ್ರದ ಮೂಲಕ ವರ್ಗಾಯಿಸಿ, ದಿ:08.06.1984ರಂದು ಗುತ್ತಿಗೆ ಸಹಿತ ಕ್ರಯದ ಒಪ್ಪಂದ ಪತ್ರ ನೊಂದಾಯಿಸಿದ್ದು, ದಿ:28.06.1984ರಂದು ಸ್ವಾಧೀನ ಪತ್ರ ನೀಡಲಾಗಿರುತ್ತದೆ.

ಶ್ರೀ.ದೊಡ್ಡೇಗೌಡ ರವರು ಸದರಿ ನಿವೇಶನವನ್ನು ದಿ:31.03.1995ರಂದು ಅವರ ಮಗನಾದ ಶ್ರೀ.ಡಿ.ಹೇಮಂತ್‌ಕುಮಾರ್‌ರವರಿಗೆ ನೊಂದಾಯಿತವಲ್ಲದ ಹಿಂದೂ ಏಕೀ ಅವಿಭಕ್ತ ಕುಟುಂಬ ವರ್ಗ ಪಂಚಾಯಿತಿ ವಿಭಾಗ ಪತ್ರದ ಮೂಲಕ ನೀಡಿರುತ್ತಾರೆ.

ಶ್ರೀ.ದೊಡ್ಡಗೌಡರವರು ದಿ:09.01.2003ರಂದು ಹಾಗು ಇವರ ಮಗ ಶ್ರೀ.ಹೇಮಂತುಕೊಂಡಿರು ದಿ:16.01.2019ರಂದು ಮರಣ ಹೊಂದಿರುವುದಾಗಿ ಮರಣ ಪ್ರಮಾಣ ಸಲ್ಲಿಸಿರುತ್ತಾರೆ.

ಪೌತಿದಾರರಾದ ಕುಟುಂಬ ಜೀವಂತ ಸದಸ್ಯರ ಪತ್ರ ಸಂಖ್ಯೆ: RD5018882594453ರಂತೆ ಲೇ||ದೊಡ್ಡೇಗೌಡ ರವರ ಪತ್ನಿ ಶ್ರೀಮತಿ.ಚಿಕ್ಕ ತಾಯಮ್ಮ, ರವರ ಮಕ್ಕಳಾದ ಶ್ರೀಮತಿ.ಪುಷ್ಪಲತ.ಡಿ, ಶ್ರೀ.ಪ್ರಕಾಶ್.ಡಿ. ಮತ್ತು ಶ್ರೀಮತಿ.ಚಂದ್ರಕಲಾ.ಡಿ. ರವರುಗಳು ಲೇಡಿ.ಹೇಮಂತ್ ಕುಮಾರ್.ರವರ ಪತ್ನಿ ಶ್ರೀಮತಿ.ಎಂ.ಎ.ರೇಣುಕಾ ರವರಿಗೆ 1ನೇ ಪುಸ್ತಕದ ದಸ್ತಾವೇಜು ನಂಬರ್ ಎಂವೈಇ–1–11908–2021–22 ಆಗಿ ದಿ:18.02.2022ರಂದು ನೊಂದಾಯಿತ ಹಕ್ಕು ಖುಲಾಸೆ ಪತ್ರ ನೀಡಿರುತ್ತಾರೆ.

ಲೇ||ಡಿ.ಹೇಮಂತ್ ಕುಮಾರ್ ರವರ ಕುಟುಂಬ ಜೀವಂತ ಸದಸ್ಯರ ಪತ್ರ ಸಂಖ್ಯೆ: RD003882978861 ರಂತೆ ಪೌತಿದಾರರ ಪತ್ನಿ ಶ್ರೀಮತಿ.ಎಂ.ಎ.ರೇಣುಕಾ ಹಾಗು ಇವರ ಮಕ್ಕಳಾದ ಶ್ರೀಮತಿ.ವಂದನ.ಡಿ.ಹೆಚ್. ಹಾಗು ಶ್ರೀ.ಅರ್ಜುನ್.ಡಿ.ಹೆಚ್. ನಮೂದಿದ್ದು, ಶ್ರೀಮತಿ. ಎಂ.ಎ. ರೇಣುಕಾ ಹಾಗೂ ಶ್ರೀಮತಿ.ವಂದನ.ಡಿ.ಹೆಚ್.ರವರುಗಳು ಶ್ರೀ.ಅರ್ಜುನ್.ಡಿ.ಹೆಚ್.ರವರಿಗೆ 1ನೇ ಪುಸ್ತಕದ ದಸ್ತಾವೇಜು ನಂಬರ್ ಎಂವೈಎನ್–1–06458–2025–26 ಆಗಿ ದಿ:26.09.2025ರಂದು ನೊಂದಾಯಿತ ಹಕ್ಕು ಖುಲಾಸೆ ಪತ್ರ ನೀಡಿರುತ್ತಾರೆ.

ಅದರಂತೆ ಶ್ರೀ.ಅರ್ಜುನ್.ಡಿ.ಹೆಚ್. ರವರು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ ಸದರಿ ನಿವೇಶನಕ್ಕೆ ವರ್ಗಾವಣೆ ಹಾಗೂ ಕ್ರಯಪತ್ರ ನೀಡಬೇಕೆಂದು ಕೋರಿರುತ್ತಾರೆ. ಮೇಲ್ಕಂಡ ನಿವೇಶನಕ್ಕೆ ಕ್ರಯಪತ್ರ ನೀಡುವ ಕುರಿತು ಯಾರಿಂದಾದರೂ ತಂಟೆ ತಕರಾರು ಏನಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 15 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ಆಕ್ಷೇಪಣೆ ಸಲ್ಲಿಸಬಹುದು. ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಕ್ರಮ ವಹಿಸಲಾಗುವುದು.

ಸಹಿ/– ವಿಶೇಷ ತಹಶೀಲ್ದಾರ್
ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕಛೇರಿ,
ನಂ.2, ಕೆ.ಸಿ.ಡಿ.ಉಪವಿಭಾಗ, ಮೂಗೂರು
ಟಿ.ನರಸೀಪುರ ತಾ.–571124, ಮೈಸೂರು ಜಿಲ್ಲೆ

ಪ್ರಕಟಣೆ

ಸಹಾಯಕ ಕಾರ್ಯಪಾಲಕ ಇಂಜಿನಿಯರ್, ನಂ. 2, ಕೆ.ಸಿ.ಡಿ. ಉಪವಿಭಾಗ, ಮೂಗೂರು–571124, ಟಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ಇವರ ಪತ್ರಿಕಾ ಪ್ರಕಟಣೆ

ಶ್ರೀ ನಾಗಶೆಟ್ಟಿ, ಬಿನ್ ಲೇಟ್ ಮಾದಶೆಟ್ಟಿ, ಮಾಡ್ರಹಳ್ಳಿ ಗ್ರಾಮ ಕಸಬಾ ಹೋಬಳಿ ದೇವರಸನಹಳ್ಳಿ ಅಂಚೆ, ನಂಜನಗೂಡು ತಾಲ್ಲೂಕು ಮೈಸೂರು ಜಿಲ್ಲೆ ಆದ ನೀವು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕಛೇರಿ, ಕಾವೇರಿ ನೀರಾವರಿ ನಿಗಮ (ನಿಯಮಿತ), ನಂ.2, ಕೆ.ಸಿ.ಡಿ.ಉಪವಿಭಾಗ, ಮೂಗೂರು–571124 ಟಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ಇಲ್ಲಿ ಗ್ರೂಫ್–ಡಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಪ್ರಸ್ತುತ ಸರ್ಕಾರಿ ಕಛೇರಿ ಕರ್ತವ್ಯಕ್ಕೆ 4 ವರ್ಷಗಳಿಂದ ಅನಧಿಕೃತ ಗೈರು ಹಾಜರಿಯಾಗಿರುವ ಸಂಬಂಧ ಅಂತಿಮವಾಗಿ, ಈ ಪತ್ರಿಕಾ ಪ್ರಕಟಣೆ ಹೊರಡಿಸಿದ 10 ದಿನಗಳ ಒಳಗೆ ನೀವು ಸರ್ಕಾರಿ ಕಛೇರಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು, ತಪ್ಪಿದಲ್ಲಿ ಕೆ.ಸಿ.ಎಸ್.ಆರ್. ನಿಯಮಾವಳಿ 1958 ಹಾಗೂ ಕೆ.ಸಿ.ಎಸ್.ಆರ್. ನಿಯಮಾವಳಿ ಹಾಗೂ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ–1957 ರನ್ವಯ ಮತ್ತು ಕರ್ನಾಟಕ ರಾಜ್ಯ ನಾಗರಿಕ ಸೇವಾ (ನಡತೆ) ನಿಯಮಗಳು–2021 ರನ್ವಯ ಶಿಸ್ತುಕ್ರಮಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಈ ಪತ್ರಿಕಾ ಪ್ರಕಟಣೆ ಮೂಲಕ ಎಚ್ಚರಿಕೆ ತಿಳುವಳಿಕೆ ನೀಡಲಾಗಿದೆ.

ಸಹಿ/– ಸಹಾಯಕ ಕಾರ್ಯಪಾಲಕ ಇಂಜಿನಿಯರ್

DIPR/DDMYS/145/KSMCA/119/2026-27

